ಎಂಟನೇ ವರ್ಷಕ್ಕೆ
'ಹೊಸ ಮನುಷ್ಯ'

# ಹೊಸ ಮನುಷ್ಯ

ಸಮಾಜವಾದಿ ಮಾಸಿಕ

ಫೆಬ್ರುವರಿ, ೨೦೧೯ ಸಂಪುಟ: ೮ ಸಂಚಿಕೆ: ೧

ಸಂಪಾದಕ : ಡಿ.ಎಸ್.ನಾಗಭೂಷಣ

ಚಂದಾ ರೂ. ೧೭೦/– (ಜನವರಿಯಿಂದ ಸೆಪ್ಟಂಬರ್‌ವರೆಗೆ) ರೂ. ೨೫೦/–(ಸಂಸ್ಥೆಗಳಿಗೆ) ಬೆಲೆ: ಬಿಡಿ ಪ್ರತಿ: ರೂ. ೨೦/– ಪುಟ: ೨೦

ವಿಳಾಸ: ಎಚ್.ಐ.ಜಿ–೫, 'ನುಡಿ', ಕಲ್ಲಳ್ಳಿ ಬಡಾವಣೆ, ವಿನೋಬ ನಗರ, ಶಿವಮೊಗ್ಗ–೫೭೭ ೨೦೪

ದೂ: ೦೮೧೮೨–೨೪೮೫೭೪ ಸಂಚಾರಿ: ೯೪೪೯೨ ೪೨೨೮೪ ಈ ಮೇಲ್: dsnagabhushana@gmail.com

## ಸಂಪಾದಕರ ಟಿಪ್ಪಣಿಗಳು

ಪ್ರಿಯ ಓದುಗರೇ,

ಲೋಕಸಭಾ ಚುನಾವಣೆಗಳು ಹತ್ತಿರ ಬರುತ್ತಿದ್ದಂತೆ ಒಂದಾದ ಮೇಲೊಂದರಂತೆ ಅನಿರೀಕ್ಷಿತ ಮತ್ತು ಆಶ್ಚರ್ಯಕರ ಬೆಳವಣಿಗೆಗಳು ಕಾಣಿಸತೊಡಗಿವೆ. ಅವುಗಳಲ್ಲಿ ಬಹು ಮುಖ್ಯವಾದದ್ದು, ಉದ್ಯೋಗ ಮತ್ತು ಶಿಕ್ಷಣ ಕ್ಷೇತ್ರಗಳಲ್ಲಿನ ಮೀಸಲಾತಿ ವ್ಯಾಪ್ತಿಯ ಹೊರಗಿದ್ದ ಜನಸಮುದಾಯಗಳಿಗೆ, ನೇರವಾಗಿ ಹೇಳುವುದಾದರೆ ಮೇಲ್ಜಾತಿ ಸಮುದಾಯಗಳಿಗೆ ಕೇಂದ್ರ ಸರ್ಕಾರ ಶೇ. ೧೦ರಷ್ಟು ಮೀಸಲಾತಿ ಒದಗಿಸಿರುವುದು. ಸರ್ಕಾರದ ಈ ಕ್ರಮ ಎರಡು ದೃಷ್ಟಿಗಳಿಂದ ಅನುಮಾನಾಸ್ಪದವೆನಿಸಿದ್ದು, ಮೀಸಲಾತಿ ಎಂಬ ತತ್ವವನ್ನೇ ಅಣಕಿಸಿ ಅಪ್ರಸ್ತುತ ಮಾಡುವ ದುರುದ್ದೇಶವನ್ನೂ ಇದು ತನ್ನೊಳಗೆ ಅಡಗಿಸಿಕೊಂಡಂತಿದೆ. ಮೊದಲಾಗಿ ಕೇಂದ್ರ ಸರ್ಕಾರ ಇದನ್ನು ತಾನು ಅಧಿಕಾರಕ್ಕೆ ಬಂದ ನಾಲ್ಕು ವರ್ಷಗಳಲ್ಲಿ ಮಾಡದಿದ್ದುದನ್ನು ಈಗ ಮಾಡಹೊರಟಿರುವುದು–ಅದೂ ಈ ಕಾಯಿದೆ ಈ ಹಿಂದಿನ ಹಲವು ಇಂತಹುದೇ ರಾಜಕೀಯ ಲಾಭೋದ್ದೇಶದ ಅವಸರದ ಪ್ರಯತ್ನಗಳು ವಿಫಲವಾದ ಅನುಭವಗಳ ಹಿನ್ನೆಲೆಯಲ್ಲಿ ಮತ್ತು ಇದು ಸಂವಿಧಾನದ ತಾತ್ವಿಕ ಅಡಿಗಲ್ಲನ್ನೇ ಅಲ್ಲಾಡಿಸುವಂತಿರುವ ಕಾರಣದಿಂದಾಗಿ ನ್ಯಾಯಾಂಗ ಪರೀಕ್ಷೆಯಲ್ಲಿ ಗೆಲ್ಲುವುದಿಲ್ಲ ಎಂದು ಗೊತ್ತಿದ್ದೂ ಈ ಕಾಯಿದೆಯನ್ನು ದಾಖಲೆ ಸಮಯದಲ್ಲಿ ಜಾರಿಗೆ ತಂದಿರುವುದೇಕೆ ಎಂಬ ಪ್ರಶ್ನೆ. ಇತ್ತೀಚಿನ ಮೂರು ರಾಜ್ಯಗಳ ವಿಧಾನ ಸಭಾ ಚುನಾವಣೆಗಳ ಸೋಲು ಲೋಕಸಭಾ ಚುನಾವಣೆಗಳಲ್ಲೂ ಮುಂದುವರಿಯಬಹುದೆಂಬ ಭೀತಿ ಎಂಬುದೇ ಇದಕ್ಕೆ ಸ್ಪಷ್ಟ ಉತ್ತರ. ಸರ್ಕಾರ ತನ್ನ ಈ ಕ್ರಮ ಕುರಿತ ನ್ಯಾಯಾಂಗ ಪರೀಕ್ಷೆಯ ವಿಧಿ–ವಿಧಾನಗಳೆಲ್ಲ ಪೂರ್ಣವಾಗುವ ಹೊತ್ತಿಗೆ ಚುನಾವಣೆಗಳು ಮುಗಿದು ತನಗೆ ಬರಬಹುದಾದ ರಾಜಕೀಯ ಲಾಭ ಬಂದಿರುತ್ತದೆ ಎಂದು ಲೆಕ್ಕ ಮಾಡಿಯೇ ಜನಗಳಿಗೆ ಈ ಟೋಪಿ ಹಾಕಿದಂತಿದೆ.

ಆದರೆ ದುರಂತವೆಂದರೆ ಕಾಂಗ್ರೆಸ್ ಸೇರಿದಂತೆ ಬಹುತೇಕ ವಿರೋಧ ಪಕ್ಷಗಳು ಮೇಲ್ಜಾತಿಗಳ ಮತ ಕಳೆದುಕೊಳ್ಳುವ ಆತಂಕದಲ್ಲಿ ಸರ್ಕಾರದ ಈ ಕ್ರಮಕ್ಕೆ ಬೆಂಬಲ ವ್ಯಕ್ತಪಡಿಸಿವೆ. ಹೀಗೆ ನಮ್ಮ ಇಡೀ ರಾಜಕೀಯ ವ್ಯವಸ್ಥೆಯೇ ಸಂವಿಧಾನದಲ್ಲಿನ ರಾಷ್ಟ್ರಾಭಿವೃದ್ಧಿಯ ಆಶಯಗಳಿಗೆ ಮೀಸಲಾತಿಯೇ ಹೆಬ್ಬಾಗಿಲು ಎಂಬಂತೆ ನಮ್ಮ ಸಮಾಜವನ್ನು ಜಾತಿ ಚರಂಡಿಯನ್ನಾಗಿ ಮಾಡಿ ಸಂವಿಧಾನದ ಘನ ಉದ್ದೇಶವನ್ನೇ ಕುಬ್ಜಗೊಳಿಸಹೊರಟಿದೆ ಎಂದೇ ಹೇಳಬೇಕು. ಅದೇನೇ ಇರಲಿ, ಈ ಮೀಸಲಾತಿ ಉಪಕ್ರಮವು ವಿದೇಶಿ ಬ್ಯಾಂಕುಗಳಲ್ಲಿನ ಭಾರತೀಯರ ಕಪ್ಪು ಹಣ ತಂದೊಪ್ಪಿಸುವೆ ಎಂಬ ಘೋಷಣೆಯಿಂದ ಹಿಡಿದು, ನೋಟು ರದ್ದತಿ ಸೇರಿದಂತೆ ಮೋದಿ ತಾವು ಏನಲ್ಲದಿದ್ದರೂ ಬಹು ದೊಡ್ಡ ಸ್ಟಂಟ್ ಮಾಸ್ಟರ್ ಎಂಬುದನ್ನು ಸಾಬೀತುಪಡಿಸಿದ್ದಾರೆ

ಇದೇ ಸ್ಟಂಟ್, ಮತ್ತೆ ಸಂವಿಧಾನವನ್ನೇ ಉಲ್ಲಂಘಿಸುವ ಹೊಸ ಭಾರತೀಯ ಪೌರತ್ವ ಕಾಯಿದೆಯಲ್ಲಿ ಪುನರಾವರ್ತನೆಗೊಂಡಿದೆ. ಈ ಕಾಯಿದೆ ಪ್ರಕಾರ ನೆರೆಯ ಮೂರು ರಾಷ್ಟ್ರಗಳ ಮುಸ್ಲಿಮೇತರ ವಲಸೆಗಾರರಿಗೆ ಭಾರತೀಯ ಪ್ರಜೆತ್ವ ನೀಡಬಹುದು. ಇದು ಧರ್ಮದ ಆಧಾರದ ತಾರತಮ್ಯವನ್ನು ಒಪ್ಪದ ನಮ್ಮ ಸಂವಿಧಾನಕ್ಕೇ ಹೊಡೆದ ಸೆಡ್ಡಲ್ಲದೆ ಮತ್ತೇನಲ್ಲ. ಇದರಿಂದ ಆಕ್ರಮಣಕಾರಿ ಬಂಗಾಳಿ ಭಾಷಿಕ ಹಿಂದೂಗಳ ವಲಸೆಯಿಂದ ತಮ್ಮ ಅಸ್ಸಾಮೀ ಭಾಷೆಗೆ, ಸಂಸ್ಕೃತಿಗೆ ಬೆದರಿಕೆ ಉಂಟಾಗಿದೆ ಎಂದು ಅಸ್ಸಾಂನ ಎಲ್ಲ ಧಾರ್ಮಿಕ ಸಮುದಾಯದವರೂ ಒಟ್ಟಿಗೆ ಸೇರಿ ಚಳುವಳಿ ಆರಂಭಿಸಿದ್ದಾರೆ. ಹಿಂದುತ್ವ ರಾಜಕಾರಣದ ಭಾಗವಾಗಿ ಬಿಟ್ಟ ಬಾಣ ತನ್ನೆಡೆಗೇ ತಿರುಗುತ್ತಿರುವುದನ್ನು ಕಂಡ ಮೋದಿ ಸರ್ಕಾರ ಈಗ ಸಂಗೀತಗಾರ ಭೂಪೇನ್ ಹಜಾರಿಕಾಗೆ, ಅವರು ಕೊನೆಯುಸಿರೆಳೆದ ಎಂಟು ವರ್ಷಗಳ ನಂತರ 'ಭಾರತ ರತ್ನ' ನೀಡಿ ಅಸ್ಸಾಮೀ ಜನರನ್ನು ಸಂತುಷ್ಟಗೊಳಿಸ ಹೊರಟಿದೆ. ಮೋದಿಯವರ ಸ್ಟಂಟ್‌ಗಳು ಯಾವುದರ ಮರ್ಯಾದೆಯನ್ನೂ ಉಳಿಸುವಂತೆ ಕಾಣುತ್ತಿಲ್ಲ. ಒಮ್ಮೆಗೇ ಮೂರು ಜನರಿಗೆ 'ಭಾರತ ರತ್ನ' ಕೊಡುವ ಉದ್ದೇಶವಾದರೂ ಏನು? ಈಗ ಉಳಿದಿಬ್ಬರು ಪುರಸ್ಕೃತರ ಆಯ್ಕೆ ಬಗ್ಗೆ ನಡೆದಿರುವ ಚರ್ಚೆ ಇದನ್ನು ಪುಷ್ಟೀಕರಿಸುವಂತಿದೆ.

ಇನ್ನು ರಫೇಲ್ ವಿವಾದದ ವಿಚಾರಣೆಯ ಸಂದರ್ಭದಲ್ಲಿ ಸರ್ವೋಚ್ಚ ನ್ಯಾಯಾಲಯಕ್ಕೆ ಸಹಿ ಹಾಕದ ಮತ್ತು ತಪ್ಪು ಮಾಹಿತಿಯನ್ನೊಳಗೊಂಡ ಪತ್ರಗಳನ್ನು ನೀಡಿದ, ಸಿ.ಬಿ.ಐ. ನಿರ್ದೇಶಕರ ಮೇಲಿನ ತನಿಖಾ ವರದಿಯನ್ನು ಪರಿಶೀಲಿಸಿ ತೀರ್ಮಾನ ಕೈಗೊಳ್ಳಬೇಕಾದ ಸಮಿತಿಯಲ್ಲಿನ ಹಿರಿಯ ನ್ಯಾಯಾಧೀಶರಿಗೆ ನಿವೃತ್ತಿಯ ನಂತರದ 'ಹುದ್ದೆ'ಯೊಂದರ 'ಆಮಿಶ' ಒಡ್ಡಿದ ಮತ್ತು ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರ 'ಆಯ್ಕೆ'ಗಾಗಿ ರಚಿತವಾಗಿದ್ದ 'ಕೊಲಿಜಿಯಂ'ನ ತೀರ್ಮಾನಗಳನ್ನು ಆ 'ಕೊಲಿಜಿಯಂ'ನ ಸದಸ್ಯರೊಬ್ಬರು ನಿವೃತ್ತರಾದ ನಂತರ ಬದಲಿಸಿರುವ ಪ್ರಕರಣಗಳು, ಇಲ್ಲಿ ನಿಜವಾಗಿ ಸಂವಿಧಾನಾತ್ಮಕ ಆಡಳಿತ ನಡೆಯುತ್ತಿದೆಯೇ? ಎಂಬ ಅನುಮಾನ ಹುಟ್ಟಿಸುವಂತಿವೆ. 'ಅಭಿವೃದ್ಧಿ! ಅಭಿವೃದ್ಧಿ' ಎಂದು ಕೂಗುತ್ತಾ ಅಧಿಕಾರಕ್ಕೆ ಬಂದ ಮೋದಿಯವರು' ಈಗ ಮಾಡುತ್ತಿರುವುದಾದರೂ ಏನು?

ಈ ಮೋದಿ ರಾಜಕಾರಣವನ್ನು ಎದುರಿಸಲು ನಮ್ಮ ಮಡ್ಡ ಕಾಂಗ್ರೆಸ್ಸಿಗೆ ಹೊಳೆದಿರುವುದು ಎರಡೇ ಪರಿಹಾರಗಳು : ಮೃದು ಹಿಂದುತ್ವ ಮತ್ತು ಇತ್ತೀಚೆಗೆ ಪ್ರಿಯಾಂಕಾ ಗಾಂಧಿ! ಜನರಿಗೆ ಹುಚ್ಚು ಹಿಡಿಯುವುದೊಂದೇ ಬಾಕಿ!!

ಇನ್ನು ನಮ್ಮ ರಾಜ್ಯದ ಪರಿಸ್ಥಿತಿಯ ಬಗ್ಗೆ ಮಾತಾಡಲು ಶಬ್ದಗಳೇ ಸಿಗದಂತಾಗಿದೆ. ಮಾತು ಸೋತು ಬಿದ್ದಿದೆ. ತನ್ನ ಶಾಸಕರನ್ನು ಮಂತ್ರಿ ಅಥವಾ ಸಮಾನ ಸೌಲಭ್ಯಗಳ ಸ್ಥಾನಮಾನ ನೀಡಿ ಅಥವಾ ರೆಸಾರ್ಟುಗಳಲ್ಲಿ ಮೇಯಿಕೊಂಡು ಹಾಯಿಕೊಂಡಿರುವಂತೆ ಇರಿಸಿಯೇ ಪಕ್ಷಗಳನ್ನು ಉಳಿಸಿಕೊಳ್ಳಬೇಕಾದ ಪರಿಸ್ಥಿತಿ ನಮ್ಮ ರಾಜ್ಯ ರಾಜಕಾರಣಕ್ಕೆ ಒದಗಿದೆ ಎಂದರೆ, ಇರುವ ಅಥವ ಬರುವ ಸರ್ಕಾರ ಯಾವುದೇ ಆಗಿರಲಿ ಅದು ಜನರ ಕಡೆ ಕಣ್ಣೆತ್ತಿ ನೋಡುವುದೆಂದು ಹೇಗೆ ನಿರೀಕ್ಷಿಸುವುದು? ಪ್ರಜಾಪ್ರಭುತ್ವ ಎಂದರೆ ಪ್ರಜೆಗಳ ಮೇಲಿನ ಕ್ರೂರ ವ್ಯಂಗ್ಯ ಎಂಬಂತಾಗಿ. ಇಡೀ ಕರ್ನಾಟಕ ಅನಾಥ ಸ್ಥಿತಿ ತಲುಪಿದೆ.

*** *** ***

ನಮ್ಮ ಪತ್ರಿಕೆ ಈ ಸಂಚಿಕೆಯೊಂದಿಗೆ ಏಳು ವರ್ಷಗಳನ್ನು (೮೪ ಸಂಚಿಕೆಗಳನ್ನು) ಮುಗಿಸಿ ಎಂಟನೇ ವರ್ಷಕ್ಕೆ ಕಾಲಿಡುತ್ತಿದೆ. ಪತ್ರಿಕೆ ತನ್ನ ಓದುಗರ ನಿರೀಕ್ಷೆಗಳನ್ನು ಹುಸಿಗೊಳಿಸಿಲ್ಲ ಎಂಬುದನ್ನು ಒಳಗಿನ ಪುಟದಲ್ಲಿರುವ ನಮ್ಮ ಕೆಲ ಓದುಗರ ಶುಭಾಶಯ–ಅಭಿಪಾಯ್ರಗಳೇ ಹೇಳುತ್ತಿವೆ. ಇದು ಸಾಧ್ಯವಾಗಿರುವುದು ಪತ್ರಿಕೆ ಒಂದು ಬಳಗದಂತೆ ಕೆಲಸ ಮಾಡುತ್ತಿರುವುದರಿಂದ. ಒಂದು ಕಡೆಯ ಬಳಗ ಓದುಗ ವರ್ಗವಾದರೆ ಇನ್ನೊಂದು ಕಡೆಯದು ಪತ್ರಿಕೆಯನ್ನು ಆ ವರ್ಗಕ್ಕೆ ತಲುಪಿಸುವ ನಮ್ಮ ಬಳಗ. ಇದರಲ್ಲಿ ಎಂ. ರಾಜು. ಟಿ.ಎಲ್. ರೇಖಾಂಬ ಮತ್ತು ಸವಿತಾರನ್ನು ಮುಖ್ಯವಾಗಿ ನೆನಪಿಸಿಕೊಳ್ಳಬೇಕು. ಈಗ ಸುರೇಂದ್ರ, ವಿಜಯಶ್ರೀ ಪದ್ಮಾಕ್ಷಿ ಮತ್ತು ಕೃಷ್ಣಾನಂದ ಅವರೂ ಈ ಬಳಗವನ್ನು ಸೇರಿಕೊಂಡಿದ್ದಾರೆ. ಜೊತೆಗೆ ನನ್ನ ಹಳೆಯ ಮಿತ್ರ ಹಿರಿಯ ಕಲಾವಿದ ಗುಜ್ಜಾರಪ್ಪ ಮತ್ತು ಭರವಸೆಯ ಕಲಾವಿದೆ ವಿಜಯಶ್ರೀ ಹಾಲಾಡಿ ಅವರೂ ನಮಗೆ ಸೂಕ್ತ ಚಿತ್ರಗಳನ್ನು ಬರೆದುಕೊಡುವ ಮೂಲಕ ನಮ್ಮ ಜೊತೆ ಕೈಜೋಡಿಸಿದ್ದಾರೆ. ಇನ್ನು ಕೋರಿದಾಗಲೆಲ್ಲ ಲೇಖನಗಳನ್ನು ಅನುವಾದ ಮಾಡಿಕೊಡುವ ಸಿರಾಜ್, ಅವಿನಾಶ್, ದಿವಾಕರ್ ಮುಂತಾದ ಗೆಳೆಯರನ್ನೂ ಇಲ್ಲಿ ನೆನೆಯಬೇಕು ದಯವಿಟ್ಟು ಪತ್ರಿಕೆಯ ಬಗ್ಗೆ ಬರೆಯಿರಿ.

**–ಸಂಪಾದಕ**

## ಅಗಲಿದ ಎರಡು ಅಮರ ಚೇತನಗಳು

## ಧೀರ ಪೋಲೀಸ್ ಅಧಿಕಾರಿ ಮಧುಕರ ಆರ್ ಶೆಟ್ಟಿ



**ಭಾ**ರತದ ಇಂದಿನ ದುಷ್ಟ ಮತ್ತು ಭ್ರಷ್ಟ ವ್ಯವಸ್ಥೆ ಅದನ್ನು ಸರಿಪಡಿಸುವ ಒಂದು ಸಣ್ಣ ಪ್ರಯತ್ನ ಮಾಡುವವರನ್ನೂ ಸಹಿಸದೆ ಆಹುತಿ ತೆಗೆದುಕೊಳ್ಳುತ್ತದೆ ಎಂಬುದಕ್ಕೆ ನಮ್ಮ ಯುವ ಪೋಲೀಸ್ ಅಧಿಕಾರಿ ಮಧುಕರ ಆರ್. ಶೆಟ್ಟಿ ಅವರ ಹಠಾತ್ ಸಾವು ಒಂದು ಉದಾಹರಣೆ. ಹೆಚ್೧ ಎನ್೧ ಸೋಂಕಿಗೆ ಒಳಗಾಗಿ ಹೈದರಾಬಾದ್‌ನ ಅತ್ಯಾಧುನಿಕ ಆಸ್ಪತ್ರೆಯಲ್ಲಿ ಕಳೆದ ಡಿಸೆಂಬರ್ ೨೮ರಂದು ಕೊನೆಯುಸಿರೆಳೆದಾಗ ಅವರಿಗೇ ಕೇವಲ ೪೭ ವರ್ಷ. ತೆಲಂಗಾಣ ಮತ್ತು ಕರ್ನಾಟಕ ಸರ್ಕಾರಗಳೆರಡರ ಉನ್ನತಾಧಿಕಾರಿಗಳ ಉಸ್ತುವಾರಿಯಲ್ಲಿ ಒದಗಿಸಲಾದ ಶ್ರೇಷ್ಠ ಮಟ್ಟದ ವೈದ್ಯಕೀಯ ಚಿಕಿತ್ಸೆಯೂ ಶಿಸ್ತಿನ ಜೀವನ ನಡೆಸಿದ ಪೋಲೀಸ್ ಅಧಿಕಾರಿಯ ಜೀವವನ್ನು ಕಾಪಾಡಲಾಗಲಿಲ್ಲ ಎಂದರೆ ಏನರ್ಥ? ಎಂತಹ ಸೋಂಕಿರಬಹುದು ಅದು?

೧೯೯೯ರ ಐಪಿಸ್ ಅಧಿಕಾರಿಗಳ ತಂಡದ ಮಧುಕರಶೆಟ್ಟಿಯವರು ಚಿಕ್ಕಮಗಳೂರು ಜಿಲ್ಲೆಯ ಪೊಲೀಸ್ ವರಿಷ್ಠಾಧಿಕಾರಿಯಾದಾಗಿರಬಹುದು, ಕಾಡುಗಳ್ಳ ವೀರಪ್ಪನ್ ನಿಗ್ರಹ ಕಾರ್ಯತಂಡ ಇರಬಹುದು ಅಥವಾ ನಕ್ಸಲ್ ನಿಗ್ರಹ ಕಾರ್ಯತಂಡ ಇರಬಹುದು ಅಥವಾ ಕರ್ನಾಟಕ ಲೋಕಾಯುಕ್ತದಲ್ಲಿನ ತನಿಖಾಧಿಕಾರಿಯಾದಾಗಿರಬಹುದು ಅವರ ಕೊನೆಯ ಹುದ್ದೆಯಾದ ಹೈದರಾಬಾದ್‌ನ ಪೋಲೀಸ್ ತರಬೇತಿ ಕೇಂದ್ರದ ಉಪನಿರ್ದೇಶಕತ್ವ ಇರಬಹುದು ಹೀಗೆ ತಾವು ನೇಮಕಗೊಂಡ ಎಲ್ಲ ಕಡೆ ಅವರು ತಮ್ಮ ಅನುಪಮದಕ್ಷತೆ, ಪ್ರಾಮಾಣಿಕ ಕಾರ್ಯನಿರ್ವಹಣೆಗಳ ಮೂಲಕ ಜನರ ಮತ್ತು ಸಹೋದ್ಯೋಗಿಗಳ ಗೌರವ ಮತ್ತು ಪ್ರೀತಿ ಸಂಪಾದಿಸಿದವರು. ಚಿಕ್ಕಮಗಳೂರಿನಲ್ಲಿ ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಯಾಗಿದ್ದಾಗ(೨೦೦೬) ತಮ್ಮಂತೆಯೇ ದಕ್ಷ ಮತ್ತು ಪ್ರಾಮಾಣಿಕರಾಗಿದ್ದ ಜಿಲ್ಲಾಧಿಕಾರಿ ಹರ್ಷ ಗುಪ್ತರೊಡಗೂಡಿ ಉಳ್ಳವರು ಕಬಳಿಸಿದ್ದ ಸರ್ಕಾರಿ ಜಮೀನನ್ನು ತೆರವುಗೊಳಿಸಿ ಅದನ್ನು ನಿರ್ವಸಿತ ಬಡಬಗ್ಗರಿಗೆ ಹಂಚಿದ ಕೆಲಸವನ್ನು ಆ ಜನ ತಮ್ಮ ಈ ಹೊಸ ನಿವಾಸ ಪ್ರದೇಶಕ್ಕೆ ಗುಪ್ತಶೆಟ್ಟಿ ಹಳ್ಳಿ ಎಂದು ಹೆಸರಿಟ್ಟು ಗೌರವಿಸಿದ ಸಂಗತಿ ಅಪೂರ್ವವಾದದ್ದೇ ಸರಿ. ಅಲ್ಲಿಯೇ ಅವರು ನಕ್ಸಲ್ ನಿಗ್ರಹ ದಳದಲ್ಲಿದ್ದಾಗ ಅವರ ಕಾರ್ಯತಂತ್ರ, ಹಳ್ಳಿಗಳ ಪ್ರವಾಸ ಮಾಡಿ ಜನರ ಕುಂದುಕೊರತೆಗಳನ್ನು ಸಹಾನುಭೂತಿಯಿಂದ ಆಲಿಸಿ ಪರಿಹಾರ ಕ್ರಮಗಳಿಗಾಗಿ ಪ್ರಯತ್ನಿಸುವ ಮೂಲಕ ಜನರನ್ನು ನಕ್ಸಲರ ಪ್ರಭಾವದಿಂದ ದೂರವಿಡುವುದಾಗಿತ್ತು.. ಅವರ ಪ್ರಕಾರ ಪ್ರತಿಯೊಂದು ಅಪರಾಧದದ ಹಿಂದೆಯೂ ಒಂದು ಸಾಮಾಜಿಕ ಅಂಶ ಇರುತ್ತದೆ. ಅದನ್ನು ಪರಿಗಣಿಸದೆ ಅಪರಾಧಗಳನ್ನು ತಡೆಯಲಾಗದು.

ಮಧುಕರ ಶೆಟ್ಟಿಯವರು ತಮ್ಮ ಸೇವಾವಧಿಯಲ್ಲಿ ಎಂದೂ ಯಾರಿಂದಲೂ ಪುಕ್ಕಟೆಯಾಗಿ ಒಂದು ಕಪ್ ಚಹಾವನ್ನೂ ಕುಡಿಯದ, ಎಲ್ಲಕ್ಕೂ ಕಿಸೆಯಿಂದ ಹಣಕೊಟ್ಟು ಚಿಲ್ಲರೆ ಪಡೆದೇ ಹೋಗುತ್ತಿದ್ದ ವ್ಯಕ್ತಿ, ವೈಯಕ್ತಿಕ ಉದ್ದೇಶಗಳ ಸಂಚಾರಕ್ಕಾಗಿ ಸಾರ್ವಜನಿಕ ಸರ್ಕಾರಿ ಬಸ್ಸುಗಳಲ್ಲಿ ಪ್ರಯಾಣ ಮಾಡುತ್ತಿದ್ದ ಮಧುಕರ್ ತಮ್ಮ ಕೈಕೆಳಗಿನ ಯಾರೇ ಆಗಲಿ ಅಧಿಕಾರ ದುರುಪಯೋಗಪಡಿಸಿಕೊಂಡದ್ದು ಕಂಡುಬಂದಲ್ಲಿ ಅವರನ್ನು ಮಟ್ಟಹಾಕುವವರೆಗೂ ಬಿಡುತ್ತಿರಲಿಲ್ಲ. ವೀರಪ್ಪನ್ ವಿಶೇಷ ಕಾರ್ಯತಂಡದವರೆಲ್ಲರಿಗೂ ಸರ್ಕಾರ ನಿವೇಶನಗಳನ್ನು ಘೋಷಿಸಿದಾಗ ಅದನ್ನು 'ನನ್ನ ಕರ್ತವ್ಯ ನಿರ್ವಹಿಸದ್ದಕ್ಕೆ ಬಹುಮಾನವೇ?' ಎಂದು ಅದನ್ನು ನಿರಾಕರಿಸಿದ ಸ್ವಚ್ಛ ಆತ್ಮಸಾಕ್ಷಿಯ ಧೀರ ಅಧಿಕಾರಿ ಮಧುಕರ ಶೆಟ್ಟಿ.

ಲೋಕಾಯುಕ್ತದಲ್ಲಿದ್ದಾಗ(೨೦೦೮-೧೧) ಗಣಿ ರೆಡ್ಡಿಗಳ ಬಳಗ ಮತ್ತು ಕಟ್ಟಾ ಸುಬ್ರಮಣ್ಯ ನಾಯ್ಡು-ಕೃಷ್ಣ ಸೆಟ್ಟಿ ವಗೈರೆಗಳ ಭೂಮಾಫಿಯಾದ ಎಲ್ಲ ದುಷ್ಟ ಮತ್ತು ಭ್ರಷ್ಟ ವ್ಯವಹಾರಗಳನ್ನೂ ತನಿಖೆಗೊಳಪಡಿಸಿ ಈ ದುಷ್ಟ-ಭ್ರಷ್ಟ ಕೂಟಗಳನ್ನು ಕಂಗೆಡಿಸಿದ ಸಾಹಸಿ ಈತ. ಆದರೆ ಈ ತನಿಖೆಯೆಲ್ಲ ನ್ಯಾಯಾಂಗದ ನೆಲೆಯಲ್ಲಿ ಎಲ್ಲೂ ಮುಟ್ಟದೆ ಅಪರಾಧಿಗಳು ನಿರಾಳರಾಗತೊಡಗಿದಾಗ ಕಂಗೆಡುವ ಸ್ಥಿತಿ ಸ್ವತಃ ಮಧುಕರ ಶೆಟ್ಟಿಯವರದೇ ಆಗಿದ್ದುದು ವ್ಯವಸ್ಥೆಯ ವಿಪರ್ಯಾಸ. ತಮ್ಮ ತನಿಖೆಯನ್ನು ಅದರ ತಾರ್ಕಿಕ ಅಂತ್ಯಕ್ಕೆ ಮುಟ್ಟಿಸುವಲ್ಲಿ ಲೋಕಾಯುಕ್ತದ ಮುಖ್ಯಸ್ಥರಾಗಿದ್ದ ನ್ಯಾ. ಸಂತೋಷ್ ಹೆಗ್ಡೆಯವರು ತಮ್ಮ 'ಪೂರ್ವಾಗ್ರಹ ಪೀಡಿತವಾದ ಅಸಮರ್ಪಕ ವರದಿ'ಯ ಮೂಲಕ ವಿಫಲರಾಗಿದ್ದಾರೆಂದು ಅಸಮಾಧಾನಗೊಂಡ ಶೆಟ್ಟಿಯವರು ಅಧ್ಯಯನ ರಜೆ ಹಾಕಿ ಉನ್ನತ ಅಧ್ಯಯನಕ್ಕೆಂದು ಅಮೆರಿಕಾದ ನ್ಯೂಯಾರ್ಕ್‌ನಲ್ಲಿರುವ ಆಲ್ಬೆನಿ ವಿಶ್ವವಿದ್ಯಾನಿಲಯಕ್ಕೆ ಹೋಗಿಬಿಟ್ಟರು. ಐದು ವರ್ಷಗಳ ನಂತರ 'ಸಾರ್ವಜನಿಕ ಆಡಳಿತ' ಕುರಿತ ಪಿಹೆಚ್‌ಡಿ ಪದವಿಯೊಂದಿಗೆ ವಾಪಸಾದ ಅವರಿಗೆ ಸರ್ಕಾರ ನೀಡಿದ್ದು ಸಾರ್ವಜನಿಕ ಸಂಪರ್ಕವಿಲ್ಲದ ಪೋಲೀಸ್ ತರಬೇತಿ ಕೇಂದ್ರದ ಹುದ್ದೆಯನ್ನು.

ತಮ್ಮ ಕಿರಿಯ ಸಹೋದ್ಯೋಗಿಗಳಿಗೆ ಸದಾ ಆದರ್ಶಗಳ ಪ್ರತೀಕ ಮತ್ತು ಸ್ಫೂರ್ತಿಯ ಚಿಲುಮೆಯಾಗಿದ್ದ ಮಧುಕರ ಶೆಟ್ಟಿ, ಅವರಿಗೆ ಸದಾ ಹೇಳುತ್ತಿದ್ದ ಒಂದು ಮಾತೆಂದರೆ, 'ಎಲ್ಲವನ್ನೂ ಒಟ್ಟಿಗೇ ಮೈಮೇಲೆ ಹಾಕಿಕೊಳ್ಳಲು ಹೋಗಬೇಡಿ. ವೃತ್ತಿಜೀವನದಲ್ಲಿ ಒಂದು ಆದರ್ಶಕ್ಕೆ ಬದ್ಧರಾಗಿ ಅದರಂತೆ ನಡೆಯಿರಿ' ಆದರೆ ಸ್ವತಃ ಅವರೇ ಈ ಮಾತಿನಂತೆ ನಡೆಯದೆ ಎಲ್ಲ ಆದರ್ಶಗಳನ್ನೂ ಒಮ್ಮೆಗೇ ಮೈಮೇಲೆ ಎಳೆದುಕೊಂಡರೇ? ಎಂಬ ಪ್ರಶ್ನೆ ಅವರ ಅಭಿಮಾನಿಗಳನ್ನು ಕಾಡಲಿದೆ.ಸಮಾಜವಾದಿ ಚಳುವಳಿಯ ಮೂಸೆಯಲ್ಲಿ ಬೆಳೆದು ಕನ್ನಡದ ಹಿರಿಯ ಪತ್ರಕರ್ತರಾಗಿದ್ದ ವಡ್ಡರ್ಸೆ ರಘುರಾಮ ಶೆಟ್ಟರ ಕಿರಿಯ ಮಗನಾಗಿದ್ದ ಮಧುಕರ ಶೆಟ್ಟಿ ಅಪ್ಪನಿಗೆ ತಕ್ಕ ಮಗನಾಗಿ ಬಾಳಿ ಕನ್ನಡಿಗರ ಮನಗಳಲ್ಲಿ ಅಮರರಾಗಿದ್ದಾರೆ.

## ಸಹಜ ಬೇಸಾಯದ ಧೀರ ಎಲ್ ನಾರಾಯಣ ರೆಡ್ಡಿ



**ಕೃ**ಷಿ ಋಷಿ, ಕರ್ನಾಟಕದ ಫುಕೊವೊಕಾ ಎಂದೆಲ್ಲ ಹೆಸರಾಗಿದ್ದ ಎಲ್ ನಾರಾಯಣ ರೆಡ್ಡಿ (೮೪ ವರ್ಷ) ಇನ್ನಿಲ್ಲ ಎಂದರೆ ನಂಬಲಾಗುತ್ತಿಲ್ಲ. ಗಾಂಧಿಗಿದ್ದಂತೆಯೇ ೧೨೫ ವರ್ಷ ಬದುಕುವ ಬಯಕೆ ಅವರಿಗಿತ್ತು.. ಹಾಗೆಂದು ಅವರು ನಂಬಿಯೂ ಇದ್ದರು. ರೆಡ್ಡಿಯವರು ೨೦೧೪ರ ಅಕ್ಟೋಬರ್‌ನಲ್ಲಿ ನಮ್ಮ ಲೋಹಿಯಾ ಜನ್ಮಶತಾಬ್ಧಿ ಪ್ರತಿಷ್ಠಾನವು ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನದ ಸಹಯೋಗದಲ್ಲಿ ಕುಪ್ಪಳಿಯಲ್ಲಿ ಆಯೋಜಿಸಿದ್ದ 'ಆಧುನಿಕತೆಯೊಂದಿಗೆ ಮುಖಾಮುಖಿ' ಎಂಬ ವಿಷಯ ಕುರಿತ ಅಧ್ಯಯನ ಶಿಬಿರವನ್ನು ಉದ್ಘಾಟಿಸುತ್ತಾ ಈ ಬಯಕೆ ಮತ್ತು ನಂಬಿಕೆಯನ್ನು ವ್ಯಕ್ತಪಡಿಸಿದ್ದರು. ಅದಕ್ಕೆ ತಕ್ಕಂತೆ ತಾವು ನಡೆಸುತ್ತಿದ್ದ ಮೈ ಬಗ್ಗಿಸಿ ನಡೆಸುವ ಶಿಸ್ತಿನ ಮತ್ತು ಸರಳ ಜೀವನದ ಪಾಠವನ್ನು ಶಿಬಿರಾರ್ಥಿಗಳಿಗೆ ಹೇಳಿದ್ದರು. ಆದರೆ ವಿಧಿಯ ಆಟ ಬೇರೇಯೇ ಆಗಿತ್ತು. ಇದು ಕರ್ನಾಟಕಕ್ಕೆ ಆದ ನಷ್ಟ,

ನಾರಾಯಣ ರೆಡ್ಡಿಯವರನ್ನು ನಾನು ಮೊದಲು ನೋಡಿದ್ದು ೨೦೧೩ರಲ್ಲಿ, ಶ್ರೀರಂಗಪಟ್ಟಣದಲ್ಲಿ ನಡೆದ ಒಂದು ಸರ್ವೋದಯ ಸಮ್ಮೇಳನದಲ್ಲಿ. ಅವರು ಆ ಮಂಡ್ಯದ ಗಂಡುಮೆಟ್ಟಿನ ನೆಲದಲ್ಲೇ ನಿಂತು ಆ ಜಿಲ್ಲೆಯ ರೈತರು ಮೂಢರಂತೆ ಬತ್ತ ಮತ್ತು ಕಬ್ಬಿನ ಗದ್ದೆಗಳಿಗಾಗಿ ಅನಗತ್ಯವಾಗಿ ಕಾವೇರಿ ನೀರನ್ನು ವ್ಯರ್ಥಗೊಳಿಸುತ್ತಾ ದುರಾಸೆಯಿಂದ ರಾಸಾಯನಿಕ ಬೇಸಾಯಕ್ಕೆ ಬಿದ್ದು ಸಾಲಗಾರರಾಗಿ ಭೂಮಿ ಮಾರಿಕೊಂಡೋ, ಸರ್ಕಾರದ ಮುಂದೆ ಪರಿಹಾರಕ್ಕಾಗಿ ಕೈಯೊಡ್ಡಿಕೊಂಡೋ ರೈತತನದ ಮರ್ಯಾದೆ ಕಳೆಯುತ್ತಿರುವ ಬಗ್ಗೆ ಗುಡುಗಿದ್ದನ್ನು ಕೇಳಿ ನಾನು ದಂಗಾಗಿದ್ದೆ. ಹೌದು, ಹೀಗೆ ದಿಟ್ಟವಾಗಿ ಮಾತಾಡಲು ಅವರಿಗೆ ಎಲ್ಲ ಅಧಿಕಾರವಿತ್ತು. ಅವರಿಗೆ ತಮ್ಮ ಭೂಮಿಯಲ್ಲಿ ರಾಸಾಯನಿಕ ಗೊಬ್ಬರ ಅಥವಾ ಕೀಟನಾಶಕಗಳಿಲ್ಲದ ಬೇಸಾಯ ಮಾಡಿ ಸುಖವಾಗಿ ಬದುಕಿದ ಅನುಭವವಿತ್ತು. ಆದರೆ ಒಂದೇ ವ್ಯತ್ಯಾಸವೆಂದರೆ ಅವರ ಕಲ್ಪನೆಯ ಸುಖ ಇಂದಿನ ಆಧುನಿಕ ರೈತರ ಸುಖದ ಕಲ್ಪನೆಗಿಂತ ಬೇರೆಯದು. ಅದು ಕನಿಷ್ಟ ಅಗತ್ಯಗಳ ಪ್ರಕೃತಿ ನಡುವಣ ಹಳ್ಳಿಯ ಸಾಂಘಿಕ ಜೀವನದ ಪರಮ ಸುಖ.

ಮೊದಲು ಎಲ್ಲರಂತೆಯೇ 'ಹಸಿರು ಕ್ರಾಂತಿ'ಯ ಭ್ರಾಂತಿಯಲ್ಲಿ ರಾಸಾಯಿನಿಕ ಬೇಸಾಯ ಮಾಡಿ ೧೯೭೬ರಲ್ಲೇ ದಾಖಲೆಯ ರಾಗಿ ಫಸಲು ತೆಗೆದು 'ಪ್ರಗತಿಪರ' ರೈತನೆಂಬ ಅಭಿದಾನ ಪಡೆದು ಅಮೆರಿಕಾದ ಆಲ್ಬರ್ಟ್ ಟ್ರಕ್ಕರ್ ಎಂಬ ಕೃಷಿ ವಿಜ್ಞಾನಿಯೊಬ್ಬರ ಗಮನ ಸೆಳೆದಿದ್ದರು. ರೆಡ್ಡಿಯವರನ್ನು ಬೆಂಗಳೂರು ಬಳಿಯ ಸೋರಹುಣಿಸೆ ಗ್ರಾಮಕ್ಕೆ ಹುಡುಕಿಕೊಂಡು ಬಂದು ಸಹಜ ಕೃಷಿಯ ಪಾಠ ಬೋಧಿಸಿ ಹೋದರು. ಅಲ್ಲಿಂದ ರೆಡ್ಡಿಯವರ ಬೇಸಾಯ ಮತ್ತು ಬದುಕೂ ಎರಡೂ ಬದಲಾಯಿತು. ಅವರು ಪ್ರಕೃತಿಯ ಗುಟ್ಟುಗಳನ್ನು ಅರಿತು, ಅವುಗಳ ಸಹಾಯದಿಂದ ಮಾತ್ರ ಕೃಷಿ ಮಾಡಿ ರಾಸಾಯನಿಕ ಕೃಷಿಗೆ ಸಮನಾದ ಇಳುವರಿ ಪಡೆದು ಎಲ್ಲರನ್ನೂ  ಬೆಕ್ಕಸಬೆರಗುಗೊಳಿಸಿದರು. ಆದರೆ ಅದರ ನಿಜವಾದ ಪ್ರಯೋಜನ ಪಡೆದವರು  ಯೂರೋಪಿನ ಸರ್ಕಾರಗಳು ಮತ್ತು

(೪ನೇ ಪುಟಕ್ಕೆ

## ಎಂಟನೇ ವರ್ಷಕ್ಕೆ ಕಾಲಿಟ್ಟಿರುವ 'ಹೊಸ ಮನುಷ್ಯ'ಕ್ಕೆ ಕೆಲ ಶುಭ ಹಾರೈಕೆಗಳು

'ಹೊಸ ಮನುಷ್ಯ' ಪ್ರತಿ ತಿಂಗಳೂ ನಾವು ಕಾದು ಓದುವ ಪತ್ರಿಕೆ. ಪತ್ರಿಕೆಗೆ ಹುಟ್ಟುಹಬ್ಬದ ಹಾರ್ದಿಕ ಶುಭಾಶಯಗಳು

**–ಚೆನ್ನವೀರ ಕಣವಿ, ಶಾಂತಾದೇವಿ ಕಣವಿ**, ಧಾರವಾಡ

ಸಮಾಜವಾದದ ಘನತೆಯನ್ನು ಕಾಪಾಡುತ್ತಾ ಅದನ್ನು ಕಾಲಕ್ಕೆ ತಕ್ಕಂತೆ ಬೆಳೆಸುವ ಅಮೂಲ್ಯ ಕೆಲಸ ಮಾಡುತ್ತಿರುವ 'ಹೊಸ ಮನುಷ್ಯ' ಬಹು ಕಾಲ ಬಾಳಲಿ.

**–ಕಡಿದಾಳು ಶಾಮಣ್ಣ, ಶ್ರೀದೇವಿ**, ಭಗವತಿಕೆರೆ

ಪತ್ರಿಕೆ ಎಂಟಕ್ಕೆ ಕಾಲಿಡುತ್ತಿರುವುದು ಸಂತೋಷ. ಓದುಗರಿಗೆ ಅರ್ಥವಾಗುವಂತೆ ನಿರೂಪಿಸುವುದರಲ್ಲಿ ಈ ಪತ್ರಿಕೆ ಎತ್ತಿದ ಕೈ. ಅನಾರೋಗ್ಯದ ಕಾರಣ ಕೊಟ್ಟು ನಿಲ್ಲಿಸುತ್ತೇನೆಂದಾಗ ನಮಗೆಲ್ಲಾ ಎದೆ ಡವಡವ. ಪುನಃ ಪತ್ರಿಕೆ ಕಂಡಾಗ ನಿರಾಳ. ಓದುಗರಿಗೆ ಹೀಗನ್ನಿಸುವುದೇ 'ಹೊಸ ಮನುಷ್ಯ'ನ ಜೀವಂತಿಕೆ.

**–ಪ್ರೊ. ಬಿ.ಎನ್. ಶ್ರೀರಾಮ**, ಮೈಸೂರು

ನ್ಯಾಯನಿಷ್ಠುರತೆ, ಪ್ರಾಮಾಣಿಕತೆ ಮತ್ತು ಸಮಾನತೆಗಳನ್ನು ಪ್ರತಿಪಾದಿಸುತ್ತಾ, ಇಂದಿನ ಕಾಲದಲ್ಲಿ ಅಪರೂಪವೆನ್ನಿಸುವಂತಹ ಈ ಪತ್ರಿಕೆ ವೇದೋಪನಿಷತ್ತುಗಳ ಕಾಲದ ಜ್ಞಾನದ ದೀಪದಂತೆ ಎಲ್ಲರಿಗೂ ಸಮಾನ ಬೆಳಕು ನೀಡುವ ಜೀವಂತ ವೇದಿಕೆಯಾಗಿದೆ . ಪ್ರತಿ ಸಂಚಿಕೆಯಲ್ಲೂ ಕಾಣಬರುವ ಹೆಸರುಗಳು ಮತ್ತು ಚಿತ್ರಗಳೇ ಸಾಕು, ನಾವು ಬಯಸುವ ಎಲ್ಲ ಒಳ್ಳೆಯದನ್ನೂ ನಮಗೆ ಮತ್ತೆ ಮತ್ತೆ ಮತ್ತೆ ನೆನಪಿಸಲು.

**–ಪ್ರೊ. ಎನ್. ಬೋರಲಿಂಗಯ್ಯ**, ಮೈಸೂರು

ಸಮಕಾಲೀನ ವಿದ್ಯಮಾನಗಳ ವಸ್ತುನಿಷ್ಠ ವಿಶ್ಲೇಷಣೆ, ನಿಷ್ಠುರ ಸಂಪಾದಕೀಯ ನಿಲುವುಗಳು ಮತ್ತು ನಾಡು, ನುಡಿ, ಸಂಸ್ಕೃತಿಗಳ ಬಗೆಗಿನ ಪ್ರಾಮಾಣಿಕ ಕಳಕಳಿಗಳಿಂದಾಗಿ ನನಗೆ ಆತ್ಮೀಯವಾಗಿರುವ 'ಹೊಸ ಮನುಷ್ಯ' ನಮ್ಮ ನಿಲುವುಗಳನ್ನು ನಾವೇ ಪ್ರಶ್ನಿಸಿಕೊಳ್ಳುವಂತೆ, ಹೊಸ ಚಿಂತನೆಗಳಲ್ಲಿ ತೊಡಗಿಸಿಕೊಳ್ಳುವಂತೆ ಮಾಡುವ ಪ್ರೇರಕ ಗುಣವನ್ನು ಹೊಂದಿದೆ.

**–ಡಾ. ಹೆಚ್. ಎಸ್. ಈಶ್ವರ**, ಬೆಂಗಳೂರು

ಬಹು ಪ್ರಾಮಾಣಿಕವಾಗಿ ಬದ್ಧತೆ ಮತ್ತು ನಿಷ್ಠೆಯಿಂದ ಹೊಸ ಮನುಷ್ಯನನ್ನು ರೂಪಿಸುತ್ತಿರುವ ನಿಮಗೆ ನಾನು ಮಾತ್ರವಲ್ಲ, ಸ್ವಾತಂತ್ರ್ಯ ಸಮಾನತೆಗಳಲ್ಲಿ ವಿಶ್ವಾಸವಿರುವ ಪ್ರತಿಯೊಬ್ಬರ ಪರವಾಗಿಯೂ ಕೃತಜ್ಞತೆಗಳನ್ನೂ ತಿಳಿಸಬಯಸುತ್ತೇನೆ.

**–ಪ್ರೊ. ಜಿ.ಕೆ ಗೋವಿಂದರಾವ್**, ಬೆಂಗಳೂರು

ಯಾವ ಆಶಯಗಳನ್ನು ಇಟ್ಟುಕೊಂಡು ಪತ್ರಿಕೆ ಆರಂಭವಾಯಿತೋ ಆ ಆಶಯಗಳನ್ನು ರಾಜಿ ಮಾಡಿಕೊಳ್ಳದೆ ಇಂದಿನ ಸಾಮಾಜಿಕ ಮಾಧ್ಯಮಗಳ ಭರಾಟೆಯ ಮಧ್ಯೆಯೂ ಮುಂದುವರೆದು ನಮ್ಮ ಅರಿವಿನ ಪರಿಧಿಯನ್ನು ವಿಸ್ತರಿಸುತ್ತಲೇ ಇದೆ. ಶುಭಾಶಯಗಳು.

**–ಸಿ. ಚನ್ನಬಸವಣ್ಣ**, ಬಳ್ಳಾರಿ

ಚಿಂತನೆಗಳೆಲ್ಲ ದಿಕ್ಕೆಟ್ಟ ಸ್ಥಿತಿಯಲ್ಲಿರುವ ಇಂದಿನ ಸಂದರ್ಭದಲ್ಲಿ ಗಾಂಧಿ ಮತ್ತು ಸಮಾಜವಾದದ ದಾರಿಯ ಅಗತ್ಯವನ್ನು ತಾನೇ ಮನಗಂಡು, ನಮಗೂ ಮನಗಾಣಿಸುತ್ತಿರುವ 'ಹೊಸ ಮನುಷ್ಯ' ನಮ್ಮ ಸಾಕ್ಷಿ ಪ್ರಜ್ಞೆಯನ್ನು ಮುಟ್ಟುವ ಪತ್ರಿಕೆಯಾಗಿದೆ.

**–ಲಕ್ಷ್ಮೀಶ ತೋಳ್ಪಾಡಿ**, ಪುತ್ತೂರು

ಇಂದಿನ ಸಂದರ್ಭದಲ್ಲಿ ಕಾಡುತ್ತಿದ್ದ ಚಿಂತನಶೀಲ ಪತ್ರಿಕೆಯೊಂದರ ಅಗತ್ಯವನ್ನು ಹೊಸ ಮನುಷ್ಯ ಬಹುವಾಗಿ ನೀಗಿಸಿದೆ. ಮನಸ್ಸನ್ನು ಅರ್ಥಪೂರ್ಣವಾಗಿ ಬೆಳೆಸುವ ಪತ್ರಿಕೆ ಇದು. ದಿನ ಹೋದಂತೆ ಅದು ಹೆಚ್ಚೆಚ್ಚು ಪ್ರೀತಿಪಾತ್ರವಾಗುತ್ತಿದೆ.

**–ವೈದೇಹಿ**, ಮಣಿಪಾಲ

ಇಂಗ್ಲಿಷ್ ಮತ್ತು ಕನ್ನಡದ ಹೆಚ್ಚಿನ ಪತ್ರಿಕೆಗಳು ಈಗ ಪ್ರಭುತ್ವವೇ ಪ್ರಜಾ–ಪ್ರಭುತ್ವವೆಂದು ಭಾವಿಸುವ, ಈ ಹಿನ್ನೆಲೆಯಲ್ಲಿ 'ಹೊಸ ಮನುಷ್ಯ ಅರ್ಥಪೂರ್ಣ ಪ್ರಜಾಪ್ರಭುತ್ವಕ್ಕೆ ಮೂಲಾಧಾರವಾಗಿರುವ ಭಿನ್ನಮತ ಮತ್ತು ಒಂಟಿದನಿಯ ಅಭಿವ್ಯಕ್ತಿಯಾಗಿದೆ.

**–ಜಿ. ರಾಜಶೇಖರ**, ಉಡುಪಿ

ಜೀವನ, ಸಮಾಜ ಮತ್ತು ರಾಜಕೀಯಗಳ ಬಗ್ಗೆ ಗಂಭಿರವಾದ ವಿಚಾರಮಂಡನೆ ಮತ್ತು ಚರ್ಚೆಗಳು ಸಾಧ್ಯವಿರುವ ಅತ್ಯುತ್ತಮ ನಿಯತಕಾಲಿಕವಾಗಿ 'ಹೊಸ ಮನುಷ್ಯ' ಬೆಳೆದುಬಂದಿದೆ. ಭಿನ್ನಾಭಿಪ್ರಾಯಗಳ ಬಗ್ಗೆ ಇನ್ನಷ್ಟು ಸಹಿಷ್ಣುತೆ ಇದ್ದರೆ ಚೆನ್ನು.

**–ಡಾ. ಎಚ್.ಎಸ್. ರಾಘವೇಂದ್ರ ರಾವ್**, ಬೆಂಗಳೂರು

ಪ್ರಜಾಪ್ರಭುತ್ವದ ಜೀವಾಳವೆಂದರೆ ಚರ್ಚೆ, ಸಂವಾದ ಸಂವಹನಗಳಿಗೆ ಅವಕಾಶ ಮಾಡಿಕೊಡುವ ಸಾವಜನಿಕ ವಲಯ. ಆಧುನಿಕ ಕಾಲದಲ್ಲಿ ಈ ವಲಯವು ಕಿರಿದಾಗುತ್ತ ಹೋಗುತ್ತಿರುವಾಗ ಮತ್ತು ಅದರ ಜಾಗವನ್ನು ಮಾಧ್ಯಮಗಳು ಅನೈತಿಕವಾಗಿ ಆಕ್ರಮಿಸಿಕೊಳ್ಳುತ್ತಿರುವ ಸಂದಭದಲ್ಲಿ 'ಹೊಸಮನುಷ್ಯ'ದಂಥ ಪತ್ರಿಕೆಗೆ ಸಾಂಸ್ಕೃತಿಕ ರಾಜಕೀಯದಲ್ಲಿ ಮುಖ್ಯ ಪಾತ್ರವಿದ್ದು, ಅದನ್ನು ಅದು ಸಮರ್ಥವಾಗಿ ನಿರ್ವಹಿಸುತ್ತಿದೆ..

**–ಡಾ. ರಾಜೇಂದ್ರ ಚೆನ್ನಿ**, ಶಿವಮೊಗ್ಗ

ಮಾಧ್ಯಮಗಳು ಬಹುತೇಕ ಬರೆಯುವವರು ಮತ್ತು ಓದುವವರು – ಇಬ್ಬರದ್ದೂ ಸ್ವಪ್ರದರ್ಶನದ ವೇದಿಕೆಗಳಾಗಿರುವಾಗ ನಿಮ್ಮ ಪತ್ರಿಕೆಯು ಆಗಾಗ ಇಂಥ ಹಗಲುವೇಷಕ್ಕೆ ಇಳಿಯದೆ ಉಳಿಯುವ ಕಿರುದಾರಿಗಳನ್ನು ತೋರಿಸುತ್ತದೆಂಬ ಕಾರಣಕ್ಕಾಗಿ ಅದನ್ನು ನಾನು ಓದುತ್ತೇನೆ.

**–ಅಕ್ಷರ ಕೆ.ವಿ.**, ಹೆಗ್ಗೋಡು

ನಮ್ಮ ಆತ್ಮಸಾಕ್ಷಿಯನ್ನು ಎಚ್ಚರಿಸುತ್ತಾ, ಕಾಲದ ಅತ್ಯುತ್ತಮ ತಿಳಿವಳಿಕೆಗಳನ್ನು ಅಪ್‌ಡೇಟ್ ಮಾಡುತ್ತಾ ಚೈತನ್ಯದ ಮರುಪೂರಣ ಮಾಡುತ್ತಾ ಬಂದ ಒಬ್ಬ ಸನ್ಮಿತ್ರನಂತೆ ಈ ಪತ್ರಿಕೆ. ಅದರ ಜೊತೆ ಕಾಲು ಹಾಕುತ್ತಾ ನಾನು ಸಹ ಮನುಷ್ಯಳಾದೆ ಎನ್ನಿಸಿದೆ.

**–ಆರ್.ತಾರಿಣಿ ಶುಭದಾಯಿನಿ ,ಚಿತ್ರದುರ್ಗ**

ಪ್ರಚಲಿತ ವಿದ್ಯಮಾನಗಳ ಕುರಿತು ಪತ್ರಿಕೆಯ ಚಿಕಿತ್ಸಕ ನೋಟಗಳ ಬರವಣಿಗೆಗಳು ನಿರಾಶಾದಾಯಕ ಪರಿಸರದಲ್ಲಿ ಮಿನುಗುವ ಹಣತೆಯಾಗಿ ಕಂಡುಬರುತ್ತದೆ. ದಣವರಿಯದೆ ಈ ಸಮಾಜವಾದಿ ಕೆಲಸದಲ್ಲಿ ತೊಡಗಿರುವ ನಿಮಗೆ ಮತ್ತು ನಿಮ್ಮ ಸಂಪಾದಕೀಯ ಬಳಗಕ್ಕೆ ಅಭಿನಂದನೆಗಳು.

**–ವೆಂಕಟೇಶ ಮಾಚಕನೂರ**, ಧಾರವಾಡ

ನನಗೆ ಈ ಪತ್ರಿಕೆ ಮೆಚ್ಚುಗೆಯಾಗಿರುವುದು ಅದು ಸಮಕಾಲೀನ ಸಾಮಾಜಿಕ ರಾಜಕಾರಣವನ್ನು ಯಾವುದೇ ಪಕ್ಷದ ಅಥವಾ ಸಿದ್ಧಾಂತದ ದಾಕ್ಷಿಣ್ಯವಿಲ್ಲದೆ ಅದರ ಒಳಿತು–ಕೆಡುಕುಗಳನ್ನು ವ್ಯಾಖ್ಯಾನಿಸುತ್ತಿರುವ ಅನನ್ಯ ಪರಿಯಿಂದಾಗಿ.

**–ಗಿರೀಶ್ ವಿ. ವಾಘ್**, ಬೆಂಗಳೂರು

'ಹೊಸ ಮನುಷ್ಯ'ದ ಪ್ರತಿ ತಿಂಗಳ ಸಂಚಿಕೆಯಲ್ಲಿ ಪ್ರಕಟವಾಗುವ ಘನವಾದ ಬರಹಗಳು, ತೊಡಗಿಸಿಕೊಳ್ಳುವ ಗಂಭೀರವಾದ ವಾಗ್ವಾದಗಳು ಪತ್ರಿಕೆಯ ಮೌಲ್ಯವನ್ನು ಹೆಚ್ಚಿಸಿವೆ. ಅನೇಕ ಯುವಕರು ಪತ್ರಿಕೆಯನ್ನು ಪ್ರೀತಿಯಿಂದ ಓದುತ್ತಿರುವುದು ನನಗೆ ಆಶಾದಾಯಕವಾದ ಬೆಳವಣಿಗೆಯಂತೆ ಕಾಣುತ್ತದೆ.

**–ಡಾ, ನಿತ್ಯಾನಂದ ಬಿ ಶೆಟ್ಟಿ**, ತುಮಕೂರು

'ಹೊಸ ಮನುಷ್ಯ' ಏಳು ವರ್ಷ ಪೂರೈಸಿದ್ದು ಅದು ತನ್ನ ನಿಯಮಿತತನ ಮತ್ತು ನಾಡಿನ ಏಕೈಕ ಸಮಾಜವಾದಿ ಪತ್ರಿಕೆಯೆನ್ನುವ ತನ್ನ ಹಿರಿಮೆಯನ್ನು ಕಾಪಾಡಿಕೊಂಡಿರುವುದರಿಂದ. ಪತ್ರಿಕೆಗೆ ನಾಡಿನ ಪ್ರತಿಭಾವಂತರೆಲ್ಲರೂ ಬರೆಯುತ್ತಿರುವುದನ್ನು ಸಮುದಾಯದ ಭಾಗವಹಿಸುವಿಕೆ ಎನ್ನಬಹುದು ಅಲ್ಲವೆ?

**–ಹಸನ್‌ನಯೀಂ ಸುರಕೋಡ**, ರಾಮದುರ್ಗ

ಸಮಾಜವಾದದ ಸಾರ–ಸತ್ವವನ್ನು ತನ್ನ ಓದುಗರಿಗೆ ನೀಡುವ ಮೂಲಕ ಅವರ ತಿಳಿವು ಮತ್ತು ರುಚಿ–ಅಭಿರುಚಿಗಳನ್ನು ಬೆಳೆಸಿ ವಿಸ್ತರಿಸುತ್ತಾ ನಾಡಿನ ಸಾಕ್ಷಿ ಪ್ರಜ್ಞೆಯಾಗಿ ಕೆಲಸ ಮಾಡುತ್ತಿರುವ 'ಹೊಸ ಮನುಷ್ಯ' ಹೀಗೆ ಮುಂದಡಿಯಿಡುತ್ತಾ ನಾಡಿನ ಪ್ರತಿಯೊಬ್ಬ ಪ್ರಾಜ್ಞರ ಪತ್ರಿಕೆಯಾಗಿ ಬೆಳೆಯಲೆಂದು ಹಾರೈಸುವೆ. ..

**–ಡಾ. ನಾಗಭೂಷಣ್ ಪಟೇಲ್, ಬೋಸ್ಟನ್ (ಯು. ಎಸ್.ಎ.)**

'ಹೊಸ ಮನುಷ್ಯ' ಹೊಸತನ್ನು ಶೋಧಿಸುವ ಕುತೂಹಲ ಹಾಗೂ ಪ್ರಾಮಾಣಿಕತೆಯಿಂದಾಗಿ ಇಷ್ಟವಾಗುತ್ತದೆ. ಈ 'ಹೊಸತು' ಆಳವಾದ ಅರಿವು, ಆತ್ಮಾವಲೋಕನ, ವಿಮರ್ಶೆಗಳ ಮೂಲಕ ನಮ್ಮನ್ನು ಚಕಿತಗೊಳಿಸಿದೆ. ಪೂರ್ವಗ್ರಹಗಳನ್ನು ದಾಟಿ ನಿಜಕ್ಕೂ ಹೊಸ ಮನುಷ್ಯರಾಗಲು ಇಂಥದೊಂದು ದೀವಟಿಗೆ ಬೇಕಿತ್ತು. ಸಿಕ್ಕಿದೆ.

**–ಡಾ. ಗೀತಾ ವಸಂತ**, ತುಮಕೂರು

ಭಿನ್ನದನಿಗಳನ್ನು ಸಹಿಸಿಕೊಳ್ಳಲಾರದ ದುರಿತ ಕಾಲದಲ್ಲಿರುವ ಈ ಸಂದರ್ಭದಲ್ಲಿ ಜನಪರ ರಾಜಕೀಯ ತಾತ್ವಿಕತೆ ಪಸರಿಸುವ ಪೂರ್ವನಿಶ್ಚಿತ ದೃಷ್ಟಿಕೋನಕ್ಕೆ ಹೊರತಾದ ಒಂಟಿದನಿಯಾದರೂ ಗಟ್ಟಿದನಿ ಎನಿಸಿರುವ 'ಹೊಸಮನುಷ್ಯ'ದಂತಹ ಪತ್ರಿಕೆ ಕಾಲದ ತುರ್ತು ಅಗತ್ಯ ಎಂದು ನಾವು ಭಾವಿಸುತ್ತೇವೆ.

**–ರೋಹಿತ್ ಅಗಸರಹಳ್ಳಿ, ಸುಜಾತ ಎಫ್ ತಳವಾರ್**, ಹಾಸನ

ಎಲ್ಲ 'ವಾದ'ಗಳೂ ಸ್ಥಾಪಿತ ಹಿತಾಸಕ್ತಿಗಳಿಗೆ ತಮ್ಮನ್ನು ಮಾರಿಕೊಂಡು ಸೃಷ್ಟಿಯಾಗಿರುವ ಇಂದಿನ ಮಾತಿನ ಸಂತೆಯಲ್ಲಿ ಗಟ್ಟಿಯಾದ; ಆದರೆ ದೃಢ ಮತ್ತು ಸ್ಪಷ್ಟ ದನಿಯಲ್ಲಿ ಮಾತಾಡುತ್ತಿರುವ 'ಹೊಸ ಮನುಷ್ಯ' ಒಮ್ಮೊಮ್ಮೆ 'ಹೇಳಬೇಕಾದ' ಮತ್ತು 'ಕೇಳಿಸಿಕೊಳ್ಳಬೇಕಾದ' ಜನಪ್ರಿಯ ಮಾದರಿಯ ಮಾತುಗಳನ್ನೂ ಆಡುತ್ತಿದೆಯೇನೋ ಎಂಬ ಆತಂಕ ನನ್ನದು.

**–ಅಶ್ವತ್ಥ ಶಿಕಾರಿಪುರ**, ಬೆಂಗಳೂರು

**(ಇನ್ನಷ್ಟು ಅಭಿಪ್ರಾಯಗಳು ಮುಂದಿನ ಸಂಚಿಕೆಯಲ್ಲಿ)**

# ಉಡುಪಿಯಲ್ಲಿ 'ಮಲೆಗಳಲ್ಲಿ ಮದುಮಗಳು-೫೦' : ಒಂದು ವರದಿ




**ಕು**ವೆಂಪು ಅವರ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯು ಏಕಾಕೃತಿ ಮತ್ತು ಕೇಂದ್ರೀಕೃತಗೊಂಡ ಪ್ರಜ್ಞೆಯಿಲ್ಲದ, ಮಲೆನಾಡೆಂಬ ವಿಶಾಲ ಭಿತ್ತಿಯಲ್ಲಿ ಜೀವನದ ವೈವಿಧ್ಯಮಯ ನೆಲೆಯಲ್ಲಿ ಚಿತ್ರಣಗೊಂಡ ಬದುಕಿನ ಬಗೆಗಿನ ಕಾದಂಬರಿಯಾಗಿರುವುದೇ ಅದರ ಶ್ರೇಷ್ಠತೆ, ವಿಶಿಷ್ಟತೆ ಮತ್ತು ಸೊಬಗಿಗೆ ಕಾರಣವಾಗಿದೆ ಎಂದು ಕನ್ನಡದ ಹಿರಿಯ ವಿದ್ವಾಂಸರಾದ ಡಾ. ಬಿ.ಎ.ವಿವೇಕ ರೈ ಅವರು ಅಭಿಪ್ರಾಯಪಟ್ಟರು. ಅವರು ಕಳೆದ ಜನವರಿ ಐದರಂದು ಶಿವಮೊಗ್ಗದ ಲೋಹಿಯಾ ಜನ್ಮಶತಾಬ್ದಿ ಪ್ರತಿಷ್ಠಾನವು ಉಡುಪಿಯ 'ರಥಬೀದಿ ಗೆಳೆಯರ ಬಳಗ'ದ ಸಹಯೋಗದಲ್ಲಿ ಉಡುಪಿಯ ಎಂಜಿಎಂ ಕಾಲೇಜಿನ 'ಧ್ವನ್ಯಾಲೋಕ' ಸಭಾಂಗಣದಲ್ಲಿ ಆಯೋಜಿಸಿದ್ದ "ಮಲೆಗಳಲ್ಲಿ ಮದುಮಗಳು-೫೦" ವಿಚಾರ ಸಂಕಿರಣವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು. ಕಾದಂಬರಿಯಲ್ಲಿ ಮಾನವಕೇಂದ್ರಿತ ದೃಷ್ಟಿಕೋನವನ್ನು ಮೀರಿದ ಜೀವಕೇಂದ್ರಿತ ಲೋಕದೃಷ್ಟಿ ಅಂತರ್ಗತವಾಗಿದೆ ಎಂದೂ ಅವರು ಹೇಳಿದರು.

ಇದಕ್ಕೆ ಮುನ್ನ ಎಲ್ಲರನ್ನೂ ಸ್ವಾಗತಿಸಿ ಪ್ರಾಸ್ತಾವಿಕ ನುಡಿಗಳನ್ನಾಡಿದ ಲೋಹಿಯಾ ಜನ್ಮಶತಾಬ್ದಿ ಪ್ರತಿಷ್ಠಾನದ ಅಧ್ಯಕ್ಷ ಡಿ.ಎಸ್.ನಾಗಭೂಷಣ ಅವರು ದೇಶೀ ಪಾದ್ರಿ ಆರಂಭಿಸುವ ಮತಾಂತರದ ಪ್ರಯತ್ನದ ಭಾಗವಾಗಿ ಕಾದಂಬರಿಯನ್ನು ಪ್ರವೇಶಿಸುವ ಆಧುನಿಕತೆಯ ಈವರೆಗಿನ ಪ್ರಯಾಣವನ್ನು ಇಂದಿನ ಜಾಗತೀಕರಣದ ಪರಿಣಾಮಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸುವುದು ಮತ್ತು ಈ ಕಾದಂಬರಿಯಲ್ಲಿ ಅಡಕವಾಗಿರುವ ಧರ್ಮ ಜಿಜ್ಞಾಸೆಯನ್ನು ಇಂದಿನ ಕೋಮುವಾದ ಮತ್ತು ಸೆಕ್ಯುಲರಿಸಂಗಳ ಮುಖಾಮುಖಿಯ ಸಂದರ್ಭದಲ್ಲಿ ಪರಿಶೀಲಿಸುವುದು ಅರ್ಥಪೂರ್ಣವೆನಿಸಬಹುದು ಎಂದು ನುಡಿದರು.

ನಂತರ ನಡೆದ ವಿಚಾರಗೋಷ್ಠಿಯಲ್ಲಿ 'ಮಲೆಗಳಲ್ಲಿ ಮದುಮಗಳು': ನನ್ನ ನೋಟದಲ್ಲಿ' ಎಂಬ ಶೀರ್ಷಿಕೆಯಡಿ ಮುವ್ವರು ಚಿಂತಕರು ತಮ್ಮ ವಿಚಾರಗಳನ್ನು ಮಂಡಿಸಿದರು. ಮೊದಲು ಮಾತನಾಡಿದ ಹಿರಿಯ ಚಿಂತಕ ಜಿ. ರಾಜಶೇಖರ ಅವರು, ಮನುಷ್ಯ ಬದುಕಿನ ಸಕಲ ವಿವರಗಳನ್ನೂ ಮಲೆನಾಡಿನ ಜೀವವೈವಿಧ್ಯದ ದಟ್ಟ ಹಿನ್ನೆಲೆಯಲ್ಲಿ ರಾಗದ ಆಲಾಪದಂತೆ ಅತ್ಯಂತ ನಿರುದ್ವಿಗ್ನತೆಯಲ್ಲಿ ವಿಸ್ತರಿಸುತ್ತಾ ಹೋಗುವುದು ಕುವೆಂಪು ಅವರ ಸ್ವಭಾವದಲ್ಲೇ ಬೆರೆತುಹೋಗಿರುವ ಜೀವದಯೆ ಮತ್ತು ನಿರಂಕುಶಮತಿತ್ವಕ್ಕೆ ದೊಡ್ಡ ಉದಾಹರಣೆ ಎಂದು ಹೇಳಿದರು.

ನಂತರ ಮಾತನಾಡಿದ ಇನ್ನೊರ್ವ ಚಿಂತಕ ಡಾ. ವಾಸುದೇವ ಬೆಳ್ಳೆಯವರು 'ಮಲೆಗಳಲ್ಲಿ ಮದುಮಗಳು'ವಿನಲ್ಲಿ ಕುವೆಂಪು ಅನೇಕ ಶೂದ್ರ, ತಳವರ್ಗಗಳ, ಮಹಿಳಾ ಕಥನಗಳನ್ನು ಕನ್ನಡದ ಸಾರಸ್ವತ ಲೋಕದೊಳಗೆ ತಂದಿರುವುದು ಚಾರಿತ್ರಿಕವಾಗಿ ಬಹಳ ಮುಖ್ಯವಾದ ಸಂಗತಿಯಾಗಿದ್ದು, ಈ ಮೂಲಕ ಅವರು ಈ ಸಮುದಾಯಗಳ ವಿಮೋಚನೆಯ ಸಾಧ್ಯತೆಯನ್ನು ಕನ್ನಡ ಸಮಾಜದ ಮುಂದಿಟ್ಟಿದ್ದಾರೆ ಎಂದರು.ಕೊನೆಯಲ್ಲಿ ಮಾತನಾಡಿದ ಹಿರಿಯ ಚಿಂತಕ ಲಕ್ಷ್ಮೀಶ ತೋಳ್ಪಾಡಿ 'ಮಲೆಗಳಲ್ಲಿ ಮದುಮಗಳು'ವಿನಲ್ಲಿ ಕುವೆಂಪು ಸಾದಾರಣೀಕರಣವನ್ನು ಅದರ ಗರಿಷ್ಠ ಮಟ್ಟಕ್ಕೆ ತೆಗೆದುಕೊಂಡುಹೋಗಿ. ತರ್ಕಬದ್ಧತೆಯನ್ನು ಮೀರಿ, ಅದು ಇದ್ದ ಹಾಗೇ ನೋಡುವ, ಚಿತ್ರಿಸುವ-ಕ್ರಮವನ್ನು ಇಲ್ಲಿ ಅದ್ಭುತವಾಗಿ ಸಾಧಿಸಿದ್ದಾರೆ ಎಂದರು. ಈ ಕಾದಂಬರಿಯನ್ನು ಓದಿದಮೇಲೆ ಆಗುವ ಆಂತರಿಕ ಕ್ರಾಂತಿಯೇ ಬೇರೆತೆರನದ್ದು ಎಂದು ಅವರು ಹೇಳಿದರು. ಕೊನೆಯಲ್ಲಿ ಸ್ವಾಮಿ ವಿವೇಕಾನಂದರು ಶೂದ್ರರಾಗಿರದಿದ್ದಲ್ಲಿ ಕುವೆಂಪು ನಮಗೆ ದಕ್ಕುತ್ತಿರಲಿಲ್ಲವೇನೋ ಎಂದೂ ಅವರು ನುಡಿದರು.

ವಾಸಂತಿ ಶೆಣೈ ಅವರು ಹಾಡಿದ ಕುವೆಂಪು ಅವರ ಗೀತೆಯೊಂದಿಗೆ ಆರಂಭವಾದ ಕಾರ್ಯಕ್ರಮವನ್ನು 'ರಥಬೀದಿ ಗೆಳಯರು'ವಿನ ಕಾರ್ಯದರ್ಶಿ ಸುಬ್ರಮಣ್ಯ ಜೋಶಿ ನಿರೂಪಿಸಿದರು. ಅಧ್ಯಕ್ಷ ಮುರಳೀಧರ ಉಪಾಧ್ಯ ವಂದಿಸಿದರು.

(ವರದಿ: ಬಿ.ವಿ. ಸುರೇಂದ್ರ)

---

೨ನೇ ಪುಟದಿಂದ)

ರೈತರು. ಏಕೆಂದರೆ ನಮ್ಮ ಸರ್ಕಾರಗಳು ಮತ್ತು ರೈತರು ಅವರು ಹೇಳುವ ಕೃಷಿಗೇ, ಹಳ್ಳಿಗೇ ಬದ್ಧವಾದ ಬದುಕಿನ ಮಾದರಿಯನ್ನು ಒಪ್ಪಲು ಸಿದ್ಧರಿರಲಿಲ್ಲ. ಆದರೇನು, ಕೃಷಿಲೋಕದ ಗಾಂಧಿ ಎಂದು ಕರೆಯಬಹುದಾದ ಜಪಾನ್‌ನ ಮಸನೊಬ ಫುಕೊವೋಕಾರೇ ಇವರನ್ನು ನೋಡಲು ಅವರ ಹಳ್ಳಿಗೆ ಬಂದರು. ಅದನ್ನು ರೆಡ್ಡಿಯವರು ನನ್ನ ಬಳಿ ವರ್ಣಿಸಿದ್ದ ಹೀಗೆ:' ನನ್ನ ಕಣ್ಣಿಗೆ ಅವರು ವೈಕುಂಠದಿಂದ ಶ್ರೀಮನ್ನಾರಯಣನೇ ಬಂದು ಇಳಿದ ಹಾಗೆ ಕಂಡು ನನ್ನ ಕಣ್ಣು ಮಂಜಾಗಿ ಆ ದೃಶ್ಯವನ್ನು ಅವರು ಬಂದು ನನ್ನನ್ನು ಮುಟ್ಟುವವರೆಗೂ ನಂಬಲೇ ಆಗಲಿಲ್ಲ!' ನಾನು ಅವರನ್ನು ನೀವಿಬ್ಬರೂ ಏನು ಮಾತಾಡಿದಿರಿ ಎಂದು ಕೇಳಿದ್ದಕ್ಕೆ ರೆಡ್ಡಿಯವರು ಹೇಳಿದ್ದು : 'ಅವರೆಲ್ಲಿ ನನ್ನೊಡನೆ ಮಾತಾಡಿದರು. ನನ್ನ ಹೊಲದ ಪಕ್ಕ ಆಗ ಹರಿಯುತ್ತಿದ್ದ ದಕ್ಷಿಣ ಪಿನಾಕಿನಿ ತೊರೆಯ ನೀರಿನ ಹರಿವನ್ನು ನೋಡುತ್ತಾ ಖುಷಿಯಂತೆ ಕೂತುಬಿಟ್ಟಿದ್ದರು!;' (ಅಂದಹಾಗೆ ನಾನೂ ಈ ನದಿಯ ದಡದ ಹಳ್ಳಿಯೊದರಲ್ಲಿ ಹುಟ್ಟಿ ಅದರ ಮೇಲೆ ತೆಪ್ಪದ ಪ್ರಯಾಣ ಸವಿದವನೇ!)

ಬಾಲ್ಯದಲ್ಲಿ ಕುರಿ ಕಾಯುತ್ತಲೇ ಶಾಲೆಗೆ ಹೋಗುತ್ತಿದ್ದ, ಹೆಚ್ಚೇನೂ ಓದದ (ನನಗೆ ತಿಳಿಸಿದಂತೆ ಅವರು ಪಿಯುಸಿವರೆಗೆ ಓದಿದ್ದರು) ರೆಡ್ಡಿಯವರು ನೆದರ್‌ಲ್ಯಾಂಡ-ಬೆಲ್ಜಿಯಂ ಮುಂತಾದ ದೇಶಗಳಿಗೆ ಕೃಷಿ ಸಲಹಾಕಾರರಾಗಿ ಈ ದೇಶಗಳಿಗೆ ಹಲವಾರು ಬಾರಿ ಹೋಗಿ ಬಂದವರಾಗಿದ್ದರಾದರೂ ಕರ್ನಾಟಕ ಸರ್ಕಾರ ಅವರ ಸೇವೆಯನ್ನು ಬಳಸಿದ್ದು ಬಹು ವಿರಳ ಮತ್ತು ನಾಮಕಾವಸ್ತೆಯದ್ದು ಮಾತ್ರ. ಇದು ಕರ್ನಾಟಕದ ದುರಂತ. ಅವರು ನಮ್ಮ ಕುಪ್ಪಳಿ ಶಿಬಿರದಲ್ಲಿ ಹೇಳಿದ ಈ ಮುಖ್ಯ ಮಾತುಗಳೇ ಅವರ ಒಟ್ಟು ಜೀವನದ ತಾತ್ವಿಕತೆಯೂ ಆಗಿತ್ತು: ' ಫಲವತ್ತಾದ ಭೂಮಿ, ದನಕರುಗಳು, ಹಸಿರು ತುಂಬಿದ ಮರಗಿಡಗಳು, ಆರೋಗ್ಯವಂತರಾಗಿ, ಶಕ್ತಿವಂತರಾಗಿ ದುಡಿಯುವ ಜನ ಸಮಾಜದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿದ್ದರೆ ಅದು ಅಭಿವೃದ್ಧಿಯ ಸಂಕೇತ. ಇವುಗಳನ್ನು ಬಿಟ್ಟು ಗಗನಚುಂಬಿ ಕಟ್ಟಡಗಳು, ಅಗಲವಾದ ರಸ್ತೆಗಳು ಇದ್ದ ಮಾತ್ರಕ್ಕೆ ಅದನ್ನು ಅಭಿವೃದ್ಧಿ ಎನ್ನಲಾಗದು' (ವಿವರಗಳಿಗಾಗಿ ನೋಡಿ, ;ಹೊಸ ಮನುಷ್ಯ'ದ ೨೦೧೮ರ ನವೆಂಬರ್ ಸಂಚಿಕೆ).

ರೆಡ್ಡಿಯವರು ಊಟದ ಸಮಯದಲ್ಲಿ ನನ್ನೊಂದಿಗೆ ಮಾತನಾಡುತ್ತಾ ಹೇಳಿದ ಇನ್ನೊಂದು ಮಾತೂ ಅಷ್ಟೇ ಅರ್ಥಪೂರ್ಣ; 'ಸ್ವಾಮೀ ಈ ಆಧುನಿಕತೆಯ ರೋಗ ಎಲ್ಲ ಕಡೆ ಹೇಗೆ ಹರಡಿದೆ ಎಂದರೆ, ಇವೊತ್ತು ನಗರದಲ್ಲಿ ಮಕ್ಕಳನ್ನ ನಮ್ಮ ಪೋಷಕರು ಅವರ ಉದ್ಧಾರಕ್ಕೇಂತ ಹಗಲು ರಾತ್ರಿ ಟ್ಯೂಷನ್ನುಗಳಿಗೆ, ಪ್ರವೇಶ ಪರೀಕ್ಷೆಗಳಿಗೇಂತ ತರಬೇತಿಗಳಿಗೆ ಹಾಕಿ ಅರೀತಾರಲ್ಲ, ಅದೇ ರೋಗ ನಮ್ಮ ರೈತರಿಗೂ ಹರಡಿ ಅವರು ಬೆಳೆ ಉದ್ಧಾರಕ್ಕೇಂತ ಟ್ರ್ಯಾಕ್ಟರು, ರಸಗೊಬ್ಬರ. ಕಳೇನಾಶಕ, ಕೀಟ ನಾಶಕ ತಂದು ಜಬರ್‌ದಸ್ತಾಗಿ ಬೇಸಾಯ ಮಾಡಿ ಕಷ್ಟಕ್ಕೆ ಸಿಕ್ಕಿಹಾಕಿಕೊಂಡಿದ್ದಾರೆ. ಪಟ್ಟಣದವರಿಗೂ ಶಾಂತಿ ನೆಮ್ಮದಿ ಬೇಕಾಗಿಲ್ಲ. ಹಳಿಯ್ಯವರಿಗೂ ಬೇಕಾಗಿಲ್ಲ. ಪೋಲಿ ಪುಂಡರನ್ನೆಲ್ಲ ಆರಿಸಿ ರಾಜ್ಯಭಾರ ಮಾಡಕ್ಕೆ ಕಳಿಸಿರೋ ಇವರಿಗೆಲ್ಲ ಸತ್ತು ಸುಣ್ಣವಾದಗಲೇ ಬುದ್ಧಿ ಬರೋದು!'

ಆದರೆ ನಾರಾಯಣ ರೆಡ್ಡಿಯವರ ಈ ಮಾತುಗಳು ಹತಾಶೆಯ ಮಾತುಗಳಾಗಿರಲಿಲ್ಲ. ಅವರ ಮೂಲ ಗ್ರಾಮ ಬೆಂಗಳೂರು ನಗರದ ವಶವಾದಾಗ ಅವರು ದೊಡ್ಡಬಳ್ಳಾಪುರದ ಬಳಿಯ ಮರಳೇನಹಳ್ಳಿಗೆ ಬಂದು ಅಲ್ಲೊಂದು ಮಾದರಿ ಬೇಸಾಯ ಕ್ಷೇತ್ರವನ್ನೇ ನಿರ್ಮಿಸಿದ್ದು.. ಅದು ಮನೆಗೆ ಬೇಕಾದ ಎಲ್ಲ ಬೆಳೆಗಳನ್ನೂ ಬೆಳೆಯುವ ಮಾದರಿ ತರಬೇತಿ ಮತ್ತು ಪ್ರಾತ್ಯಕ್ಷಿಕೆಯೂ ಅದಾಗಿತ್ತು. ಅವರು ನಮ್ಮನ್ನು ಅಲ್ಲೊಂದು ಅಧ್ಯಯನ ಶಿಬಿರ ಮಾಡಲು ಆಹ್ವಾನಿಸಿದ್ದರು. ಆದರೆ ನಾನು ಅವರು ಹೇಗೂ ದೀರ್ಘ ಕಾಲ ಬದುಕುವರಲ್ಲ ಎಂದು ಸ್ವಲ್ಪ ಉದಾಸೀನ ಮಾಡಿದೆ. ಅದು ನನ್ನ ಜೀವನದ ದೊಡ್ಡ ಲೋಪವಾಗಿ ನನ್ನನ್ನು ಬಹುದಿನ ಕಾಡಲಿದೆ.

-ಡಿ.ಎಸ್. ನಾಗಭೂಷಣ

**ಇತ್ತೀಚೆಗೆ ನಿಧನರಾದ ಚಲಚಿತ್ರ ನಿರ್ದೇಶಕ ಮೃಣಾಲ್ ಸೇನ್ ಹಾಗೂ ಹಿರಿಯ ಪತ್ರಕರ್ತ ಈಶ್ವರಯ್ಯ ಅವರ ನೆನಪಿಗೆ 'ಹೊಸ ಮನುಷ್ಯ' ತನ್ನ ಶ್ರದ್ಧಾಂಜಲಿ ಸಲ್ಲಿಸುತ್ತದೆ-ಸಂಪಾದಕ**

# ಕುಪ್ಪಳಿಯಲ್ಲಿ 'ರಾಷ್ಟ್ರೀಯತೆಯ ಅರ್ಥ–ಅಪಾರ್ಥಗಳು' ಕುರಿತ ಶಿಬಿರ: ಒಂದು ವರದಿ



೧೮೫೧ರ ಹೊತ್ತಿಗೆ ದಾದಾಭಾಯಿ ನವರೋಜಿ ಅವರಿಂದ ಪ್ರಾರಂಭವಾದ ರಾಷ್ಟ್ರೀಯತೆಯ ಪರಿಕಲ್ಪನೆ ವಿಶಾಲ ಮತ್ತು ಎಲ್ಲರನ್ನೂ ಒಳಗೊಳ್ಳುವ ಮಾದರಿಯದಾಗಿತ್ತು. ಆದರೆ ನಂತರದಲ್ಲಿ ಆ ರಾಷ್ಟ್ರೀಯತೆಯ ಚಳುವಳಿಗೆ ಅನೇಕ ಭಿನ್ನ ಚಿಂತನೆಯ ಧಾರೆಗಳು ಸೇರಿಕೊಂಡು ಈ ವೈಶಾಲ್ಯತೆಯ ತಳಹದಿಯನ್ನು ಶಿಥಿಲಗೊಳಿಸಲಾಯಿತು ಎಂದು ಹಿರಿಯ ಇತಿಹಾಸ ತಜ್ಞ, ಕಲಬುರ್ಗಿ ವಿಶ್ವವಿದ್ಯಾಲಯದ ನಿವೃತ್ತ ಸಹಾಯಕ ಕುಲಪತಿ ಡಾ. ಎಸ್. ಚಂದ್ರಶೇಖರ್ ಹೇಳಿದರು. ಅವರು ಶಿವಮೊಗ್ಗದ ಲೋಹಿಯಾ ಜನ್ಮಶತಾಬ್ದಿ ಪ್ರತಿಷ್ಠಾನ ಹಾಗು ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನದ ಸಂಯುಕ್ತಾಶ್ರಯದಲ್ಲಿ ಕುಪ್ಪಳಿಯಲ್ಲಿ ಏರ್ಪಡಿಸಿದ್ದ 'ರಾಷ್ಟ್ರೀಯತೆಯ ಅರ್ಥ ಮತ್ತು ಅಪಾರ್ಥಗಳು' ಕುರಿತ ಎರಡು ದಿನಗಳ ಅಧ್ಯಯನ ಶಿಬಿರವನ್ನು ಕಳೆದ ಜನವರಿ ೧೨ರಂದು ಉದ್ಘಾಟಿಸಿ ಮಾತನಾಡುತ್ತಿದ್ದರು. ಗಾಂಧೀಜಿ ಸ್ವಾತಂತ್ರ್ಯ ಚಳುವಳಿಯ ನೇತೃತ್ವ ವಹಿಸಿದಾಗ ಅವರ ವಿಶಾಲಾರ್ಥದ ರಾಷ್ಟ್ರೀಯತೆಯ ಚಿಂತನೆಯಿಂದಾಗಿ ತೀವ್ರವಾದಿ ಮತ್ತು ಮತೀಯತೆಯ ಧಾರೆಗಳು ಹಿನ್ನೆಲೆಗೆ ಸರಿದವು. ಆದರೆ ಇಂದು ಗೋಖಲೆ, ಗಾಂಧಿ ಅಂತಹವರು ಹಾಕಿಕೊಟ್ಟ ರಾಷ್ಟ್ರೀಯತೆಯ ಆವೃತ ಅಧ್ಯಾತ್ಮಿಕತೆಯ ಸ್ವರೂಪವನ್ನು ತೀವ್ರ ಮತೀಯ ವ್ಯಾಖ್ಯಾನ ಮತ್ತು ಕಾರ್ಯಕ್ರಮಗಳ ಮೂಲಕ ದುರ್ಬಲಗೊಳಿಸಲಾಗುತ್ತಿದೆ ಎಂದು ಅವರು ವಿಷಾದ ವ್ಯಕ್ತಪಡಿಸಿದರು.

ಇದಕ್ಕೆ ಮುನ್ನ ಲೋಹಿಯಾ ಜನ್ಮಶತಾಬ್ಧಿ ಪ್ರತಿಷ್ಠಾನದ ಆದ್ಯಕ್ಷರೂ, ಶಿಬಿರದ ನಿರ್ದೇಶಕರೂ ಆದ ಡಿ.ಎಸ್. ನಾಗಭೂಷಣ ಪ್ರಾಸ್ತಾವಿಕ ಮಾತುಗಳನ್ನಾಡಿ ಇದು ಕುಪ್ಪಳಿಯಲ್ಲಿ ಆಯೋಜಿಸುತ್ತಿರುವ ಒಂಬತ್ತನೇ ಸಮಾಜವಾದಿ ಅಧ್ಯಯನ ಶಿಬಿರವಾಗಿದ್ದು, ರಾಷ್ಟ್ರೀಯತೆ ಎಂಬುದು ಇಂದು ಅನೇಕ ವ್ಯಾಖ್ಯಾನಗಳಿಗೆ ಒಳಗಾಗಿ ಅನೇಕ ಅನಾಹುತಗಳಿಗೆ ಕಾರಣವಾಗುತ್ತಿರುವುದರಿಂದ ಸ್ವಾತಂತ್ರ್ಯ ಹೋರಾಟದ ಹಿನ್ನೆಲೆಯಲ್ಲಿ ನಾವು ಕಟ್ಟಿಕೊಂಡ ರಾಷ್ಟ್ರೀಯತೆಯ ಪರಿಕಲ್ಪನೆಯನ್ನು ಮರು ಮಥನ ಮಾಡುವ ಸಲುವಾಗಿ ಈ ಶಿಬಿರವನ್ನು ಆಯೋಜಿಸಲಾಗಿದೆ ಎಂದರು.

.ನಂತರದ ಎರಡು ದಿನಗಳ ಕಾಲ ಆರು ಚಿಂತನ–ಮಂಥನ ಗೋಷ್ಠಿಗಳು ನಡೆದವು. 'ರಾಷ್ಟ್ರ–ರಾಷ್ಟ್ರೀಯತೆಯ ಪರಿಕಲ್ಪನೆಗಳ ಚರಿತ್ರೆ' ವಿಷಯವಾಗಿ ಮಾತನಾಡಿದ ಡಾ. ಜೆ.ಎಸ್. ಸದಾನಂದ ರಾಷ್ಟ್ರೀಯತೆ ಎಂಬ ಪರಿಕಲ್ಪನೆಯು ಒಂದು ಕುಲಸಂಬಂಧೀ ಗುಂಪಿನ ಜನರು ತಾವು ಭಿನ್ನವೆಂದು ಗುರುತಿಸಿಕೊಳ್ಳುವ ಪ್ರಕ್ರಿಯೆಯಾಗಿ ಹುಟ್ಟಿಕೊಂಡಿತು ಎಂದು ಹೇಳುತ್ತಾ, ಅದು ನಂತರ ಕ್ರಿಶ್ಚಿಯನ್ ಧರ್ಮಾಧಾರಿತ ರಾಷ್ಟ್ರೀಯತೆಯಿಂದ ಹಿಡಿದು, ಫ್ರೆಂಚ್ ಕ್ರಾಂತಿ, ಹಿಟ್ಲರ್‌ನ ಜನಾಂಗವಾದ, ವಸಾಹತುಶಾಹಿ ವಿರೋಧಿ ಸ್ವಾತಂತ್ರ್ಯ ಚಳುವಳಿಗಳು ಮತ್ತು ಇಂದಿನ ಜಾಗತೀಕರಣದಿಂದಾಗಿ ವಿವಿಧ ರೂಪಗಳನ್ನು ತಾಳಿ ಇಂದು ಮತಾಧಾರಿತ ರಾಷ್ಟ್ರೀಯತೆಯ ರೂಪ ತಾಳುವ ಹಂತ ತಲುಪಿದೆ ಎಂದು ವಿವರಿಸಿದರು.

'ರಾಷ್ಟ್ರೀಯತೆ ಮತ್ತು ಉಪರಾಷ್ಟ್ರಿಯತೆ' ಬಗ್ಗೆ ಡಿ.ಎಸ್.ನಾಗಭೂಷಣ ಅವರು ಮಾತನಾಡಿ ನಮ್ಮ ಸ್ವಾತಂತ್ರ್ಯ ಆಂದೋಲನದಲ್ಲಿ ಮೂಡಿದ ರಾಷ್ಟ್ರೀಯತೆಗೆ ಬಂಗಾಳ ವಿಭಜನೆಯ ವಿರುದ್ಧದ ದಂಗೆಯಿಂದ ಆರಂಭಿಸಿದಂತೆ ಭಾಷಾ ರಾಷ್ಟ್ರೀಯತೆಗಳೇ ಸ್ಫೂರ್ತಿ ಒದಗಿಸಿದ್ದನ್ನು ನಾವು ಕಾಣುತ್ತೇವೆಯಾದರೂ, ಸ್ವಾತಂತ್ರ್ಯಾನಂತರ ಅಖಿಲ ಭಾರತ ಬಂಡವಾಳಶಾಹಿಗಳ ಪ್ರಭಾವದಿಂದಾಗಿ ಆಡಳಿತದಲ್ಲಿ ಕೇಂದ್ರೀಕರಣ ಹೆಚ್ಚುತ್ತಾ ಹೋಗಿ ಪ್ರಾದೇಶಿಕ ಭಾಷಾ ಅಸ್ಮಿತೆಗಳು ಸಾಂವಿಧಾನಿಕವಾಗಿಯೇ–ಮಾತೃಭಾಷಾ ಶಿಕ್ಷಣದ ಬಗೆಗಿನ ನಮ್ಮ ಸರ್ವೋಚ್ಚ ನ್ಯಾಯಾಲಯದ ತೀರ್ಪು ಸೂಚಿಸುತ್ತಿರುವಂತೆ–ದಮನಗೊಳ್ಳುತ್ತಾ ಅವು ಉಪರಾಷ್ಟ್ರೀಯತೆ ಎಂಬ ಪಳಯುಳಿಕೆಗಳಾಗಿ, ಇಂದು ಜಾಗತೀಕರಣದ ಒತ್ತಡದಲ್ಲಿ ನಾವು ನಮ್ಮ ಭಾಷೆಗಳನ್ನು ಕಳೆದುಕೊಳ್ಳುವ ಆತಂಕದಲ್ಲಿ ಸಿಕ್ಕಿದ್ದೇವೆ ಎಂದರು. ಇದು ಗಾಂಧಿ ನೇತೃತ್ವದ ರಾಷ್ಟ್ರೀಯ ಹೋರಾಟ ಕಟ್ಟಿಕೊಟ್ಟ ರಾಷ್ಟ್ರೀಯತೆಗೆ ವಿರುದ್ಧವಾಗಿದ್ದು ದೇಶದ ಭಾವೈಕ್ಯತೆಯ ದೃಷ್ಟಿಯಿಂದ ಒಳ್ಳೆಯದಲ್ಲ ಎಂದು ಎಚ್ಚರಿಸಿದರು.

'ಹಿಂದೂ ರಾಷ್ಟ್ರವಾದದ ಚರಿತ್ರೆ ಮತ್ತು ವರ್ತಮಾನ' ವಿಷಯವಾಗಿ ಮಾತನಾಡಿದ ಡಾ. ನಿತ್ಯಾನಂದ ಬಿ.ಶೆಟ್ಟಿ ಅವರು ಕೆಲವು ಬ್ರಿಟಿಷ್ ಇತಿಹಾಸಕಾರರು ೧೮೭೨ರ ಸಂದರ್ಭದಲ್ಲೇ ಭಾರತದ ಇತಿಹಾಸವನ್ನು ಮತಾಧಾರಿತವಾಗಿ ವಿಭಜಿಸಿ ಸೃಷ್ಟಿಸಿದ ಪಠ್ಯದಿಂದಲೇ ಹಿಂದೂ ರಾಷ್ಟ್ರವಾದದ ಬೀಜ ಮೊಳಕೆಯೊಡೆದಿತ್ತು ಎಂದು ಗುರುತಿಸುತ್ತಾ, 'ಪಿತೃಭೂಮಿ–ಪುಣ್ಯಭೂವಿ'ಗಳ ದ್ವಂದ್ವ ಕಲ್ಪನೆಯನ್ನಾಧರಿಸಿ ಸಾವರ್ಕರ್ ಮಂಡಿಸಿದ ಮತ್ತು ನಂತರ ಗೋಲ್ವಾಲ್ಕರ್‌ರಿಂದ ಇನ್ನಷ್ಟು ಸಂಕುಚಿತಗೊಂಡ ಹಿಂದುತ್ವ ರಾಷ್ಟ್ರದ ವಾಙ್ಮಯವನ್ನು ಆರೆಸ್ಸೆಸ್ ಮತೀಯ ಉದ್ದೇಶಗಳಿಗಾಗಿ ಬಳಸಿಕೊಂಡು ದೇಶದಲ್ಲಿ 'ಸಾಂಸ್ಕೃತಿಕ ರಾಷ್ಟ್ರೀಯತೆಯ ಹೆಸರಿನಲ್ಲಿ ವಿಭಜಕ ರಾಜಕಾರಣವನ್ನು ಮಾಡಹೊರಟಿದೆ ಎಂದರು.

ಎರಡನೆಯ ದಿನದ ಮೊದಲ ಗೋಷ್ಠಿಯಲ್ಲಿ 'ಗಾಂಧಿ ಕಟ್ಟಿಕೊಟ್ಟ ರಾಷ್ಟ್ರೀಯತೆ' ಬಗ್ಗೆ ಡಾ. ರಾಜೇಂದ್ರ ಚೆನ್ನಿಯವರು ಮಾತನಾಡುತ್ತಾ ಗಾಂಧೀಜಿಗೆ ರಾಷ್ಟ್ರ ಎಂಬ ಪರಿಕಲ್ಪನೆಯ ಬಗ್ಗೆ, ಅದು ಹಿಂಸೆಯನ್ನು ಸಮರ್ಥಿಸುವ, ಬಹುಮತಾಧಾರಿತವಾದ, ಏಕಾಕೃತಿಯ ಸಂಸ್ಕೃತಿಯನ್ನು ಸ್ಥಾಪಿಸಬಯಸುವ ಮತ್ತು ದುರಾಸೆಪೂರಿತ ಆಧುನಿಕ ನಾಗರಿಕತೆಯ ಉತ್ಪನ್ನವಾದುದರಿಂದ ಆಸಕ್ತಿ ಇರಲಿಲ್ಲ ಎನ್ನುತ್ತಾ, ಬಹುಮುಖಿಯಾದ ಜನಸಮುದಾಯಗಳ ಸ್ವಾಯತ್ತತೆುನ್ನು ಕಾಪಾಡುವ ಗ್ರಾಮಗಳ ಒಕ್ಕೂಟ ವ್ಯವಸ್ಥೆಯೇ ಅವರಿಗೆ ರಾಷ್ಟ್ರ– ರಾಷ್ಟ್ರೀಯತೆ ಆಗಿತ್ತು ಎಂದು ತಿಳಿಸಿದರು.

'ರಾಷ್ಟ್ರ ವಿಭಜನೆ ಸೃಷ್ಟಿಸಿದ ರಾಷ್ಟ್ರೀಯತೆಯ ಬಿಕ್ಕಟ್ಟುಗಳು' ಬಗ್ಗೆ ಡಾ. ರಾಜಾರಾಮ ತೋಳ್ಪಾಡಿಯವರು ಮಾತನಾಡಿ, ನಮ್ಮ ರಾಷ್ಟ್ರೀಯತೆಯನ್ನು ರೂಪಿಸಿತೆಂದು ಹೇಳಲಾಗುವ ಕಾಂಗ್ರೆಸ್ ನೇತೃತ್ವದ ಸ್ವಾತಂತ್ರ್ಯಾಂದೋಲನದಲ್ಲಿ ವಿಭಿನ್ನ ಚಿಂತನಾ ಧಾರೆಗಳು ಸೇರಿಕೊಂಡಿದ್ದು ಇವುಗಳ ನಡುವಣ ವೈರುಧ್ಯಗಳನ್ನು ಸಕಾಲದಲ್ಲಿ ಇತ್ಯರ್ಥಪಡಿಸಲಾಗದಿದ್ದುದೇ ರಾಷ್ಟ್ರ ವಿಭಜನೆಗೆ ಕಾರಣವಾಯಿತೇ ಹೊರತು ಇದಕ್ಕಾಗಿ ಯಾರನ್ನೂ ನಿರ್ದಿಷ್ಟವಾಗಿ ದೂರಲಾಗದು ಎಂದರು.

'ಜಾಗತೀಕರಣ ಮತ್ತು ರಾಷ್ಟ್ರೀಯತೆಯ ಬಿಕ್ಕಟ್ಟುಗಳು' ವಿಷಯವಾಗಿ ಜಿ.ರಾಜಶೇಖರ ಅವರು ಮಾತನಾಡಿ ಜಾಗತೀಕರಣದ ಒತ್ತಡಗಳಿಗೆ ಸಿಕ್ಕ ಭಾರತದಂತಹ ದೇಶಗಳು ತಮ್ಮ ಅಸ್ಮಿತೆಗಳ ನ್ನು ಉಳಿಸಿಕೊಳ್ಳಲು ಬಲಿಷ್ಟ ರಾಷ್ಟ್ರ ಪ್ರಭುತ್ವಗಳನ್ನು ಕಟ್ಟಲು ಹೊರಟು ತನ್ನೊಳಗಿನ ಎಲ್ಲ ವೈವಿಧ್ಯತೆಗಳನ್ನೂ, ಭಿನ್ನ ದನಿಗಳನ್ನೂ ದಮನ ಮಾಡಹೊರಟಿವೆ ಎಂದರು.



ಗೋಷ್ಠಿಗಳ ನಂತರ ಶಿಬಿರಾರ್ಥಿಗಳು ಶಿಬಿರದ ಕಾರ್ಯಕಲಾಪಗಳ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ಮಂಡಿಸಿದರು. ನಂತರ ನಡೆದ ಸಮಾರೋಪ ಸಮಾರಂಭದಲ್ಲಿ ಸಮಾರೋಪ ನುಡಿಗಳನ್ನಾಡಿದ ಹಿರಿಯ ಚಿಂತಕ ಲಕ್ಷ್ಮೀಶ ತೋಳ್ಪಾಡಿ ಕುವೆಂಪು ಅವರು 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಗಡ್ಡದಯ್ಯನ ಮೂಲಕ ಪ್ರಸ್ತಾಪಿಸುವ ಸ್ಥಳೀಯ ದೇವತೆಗಳನ್ನು ಎಚ್ಚರಿಸುವ ಕೆಲಸವನ್ನು ತಮ್ಮದೇ ಮಿತಿಯಲ್ಲಿ ಡಿ.ಎಸ್. ನಾಗಭೂಷಣ ಮತ್ತು ಬಳಗ ಮಾಡುತ್ತಿದೆ ಎಂದು ಮೆಚ್ಚುತ್ತಾ ಪ್ರಸ್ತುತ ಸಮಾಜದಲ್ಲಿ ರಾಷ್ಟ್ರೀಯತೆಯ ಹೆಸರಿನಲ್ಲಿ ಸಮೂಹಸನ್ನಿಯನ್ನು ಸೃಷ್ಟಿಸಲಾಗುತ್ತಿದ್ದು ಅದು ಅನೇಕ ರೀತಿಯ ಹಿಂಸಾಚಾರಗಳಿಗೆ ಕಾರಣವಾಗುತ್ತಿರುವ ಬಗ್ಗೆ ತಮ್ಮ ಆತಂಕ ವ್ಯಕ್ತಪಡಿಸಿದರು.

. ಶಿಬಿರದಲ್ಲಿ ರಾಜ್ಯದ ವಿವಿಧ ಭಾಗಗಳಿಂದ ಬಂದಿದ್ದ ನಲವತ್ತು ಶಿಬಿರಾರ್ಥಿಗಳು ಸೇರಿದಂತೆ ಐವತ್ತಕ್ಕೂ ಹೆಚ್ಚು ಜನ ಭಾಗವಹಿಸಿದ್ದರು. ೧೨ರ ರಾತ್ರಿ ಭಾರತದ ವಿಭಜನೆಯ ಹಿನ್ನೆಲೆಯ ಕಥೆಯುಳ್ಳ, ಎಂ.ಎಸ್. ಸತ್ಯು ನಿರ್ದೇಶನದ 'ಗರಂ ಹವಾ' ಚಿತ್ರವನ್ನು ಪ್ರದರ್ಶಿಸಿ, ಮಾರನೆಯ ದಿನ ಚರ್ಚಿಸಲಾಯಿತು.

ಕುವೆಂಪು ಪ್ರತಿಷ್ಠಾನದ ಸಮಕಾರ್ಯದರ್ಶಿ ಕಡಿದಾಳು ಪ್ರಕಾಶ್ ಉಪಸ್ಥಿತರಿದ್ದರು. ಎಂ.ರಾಜು, ಎನ್.ಎಂ. ಕುಲಕರ್ಣಿ ಮತ್ತು ಹೊನ್ನಾಳಿ ಚಂದ್ರಶೇಖರ್ ಕಾರ್ಯಕ್ರಮವನ್ನು ನಿರೂಪಿಸಿದರು. ಸವಿತಾ ನಾಗಭೂಷಣ ವಂದಿಸಿದರು .

(ವರದಿ: ಬಿ.ವಿ. ಸುರೇಂದ್ರ)

**ಪರಿಸರ ಹತ್ಯೆಯ ಭೀಕರ ಪರಿಣಾಮಗಳು**

ನೋಟ-೧

# ಈ ಭೂಮಿಗೆ ಬಂದೊದಗಿದೆ ಆಪತ್ತು: ವಿಜ್ಞಾನಿಗಳ ಎಚ್ಚರಿಕೆಯ ಘಂಟೆ!

–ರಾಬರ್ಟ್ ಹನ್ಸ್‌ಕರ್ ಮತ್ತು ಅಲೆಕ್ಸ್ ಕಿರ್ಬಿ



**ಸಾರ್ವಜನಿಕ ನೆನಪಿನ ಶಕ್ತಿ ತುಂಬ ಚಿಕ್ಕದು ಎಂಬ ಲೋಕೋಕ್ತಿ ಇದೆ. ಇದು ನಿಜವೆಂದು ಇತ್ತೀಚೆಗೆ ಮತ್ತೆ ಮತ್ತೆ ಸಾಬೀತು ಮಾಡುತ್ತಿರುವ ಸಂಗತಿ ಎಂದರೆ ನಮ್ಮ ಸುತ್ತಮುತ್ತಲೇ ಸಂಭವಿಸುತ್ತಿರುವ ನೈಸರ್ಗಿಕ ಅನಾಹುತಗಳನ್ನು ಅಲ್ಪಾವಧಿಯಲ್ಲೇ ಮರೆತು ಏನೂ ಆಗಿಲ್ಲವೆಂಬಂತೆ ಮಾಮೂಲಿ ಬದುಕು ನಡೆಸುತ್ತಿರುವುದು. ಈ ಮಾಮೂಲಿ ಬದುಕು ಎಂದರೆ, ಈ ಅನಾಹುತಗಳಿಂದ ಏನನ್ನೂ ಕಲಿಯದೆ ಮುಂದುವರೆಯುವುದು. ಐದು ವರ್ಷಗಳ ಹಿಂದಿನ ಉತ್ತರಾಖಂಡದ ಭೀಕರ ಜಲಪ್ರಳಯ, ನಂತರ ಶ್ರೀನಗರ ಮತ್ತು ಚೆನ್ನೈನಗರಗಳನ್ನು ಬಹುಪಾಲು ಮುಳುಗಿಸಿದ ಮಹಾಮಳೆ ಮತ್ತು ಕೇವಲ ಆರು ತಿಂಗಳ ಹಿಂದಿನ ಕೇರಳ–ಕೊಡಗುಗಳಲ್ಲಿನ ಅನಾಹುತಗಳ ನಂತರ ನಮ್ಮ ಮಾಮೂಲಿ ಬದುಕು ಏನೆಲ್ಲ ರೀತಿಯಲ್ಲಿ ಬದಲಾಗುವುದು ಅನಿವಾರ್ಯ ಎಂಬ ಚರ್ಚೆ ನಡೆದಿದೆ. ಹವಾಮಾನ ವೈಪರೀತ್ಯ ಕುರಿತ ಜಾಗತಿಕ ಒಪ್ಪಂದಕ್ಕೂ ಸಹಿ ಬಿದ್ದಿದೆ. ಆದರೆ ನಮ್ಮ ಬದುಕಿನ ರೀತಿ ನೀತಿಗಳಲ್ಲಿ ಏನಾದರೂ ಗಣನೀಯ ಬದಲಾವಣೆ ಆಗಿದೆಯೇ? ಈ ಕುರಿತ ನಾಲ್ಕು ನೋಟಗಳನ್ನು ಇಲ್ಲಿ ನೀಡುತ್ತಿದ್ದೇವೆ. ಓದುಗರ ಪ್ರತಿಕ್ರಿಯೆಗಳಿಗೆ ಸ್ವಾಗತ.**–ಸಂ.

ದಿನಾಂಕ ೩೧ ಅಕ್ಟೋಬರ್ ೨೦೧೮ ರಂದು ಬ್ರಿಟನ್ನಿನ ಕೆಲವು ವಿಜ್ಞಾನಿಗಳು ತಮ್ಮ ಸರ್ಕಾರ ಹವಾಮಾನ ಬದಲಾವಣೆಯಿಂದ ಆಗುತ್ತಿರುವ ಪರಿಸರ ವಿನಾಶವನ್ನು ಕುರಿತು ಧೂರ್ತ ನಿರ್ಲಕ್ಷ್ಯ ತೋರಿದೆ ಎಂದು ಪ್ರತಿಭಟಿಸಿ ಸಂಸತ್ತಿನ ಮುಂಂದೆ ತಮ್ಮ ಭಿನ್ನಮತವನ್ನು ದಾಖಲಿಸಿದ್ದಾರೆ. ಇವರ ಪ್ರಕಾರ ಪರಿಸರ ವಿನಾಶದ ವಿರುದ್ಧ ಹೋರಾಡಲು ಇದು ಸರಿಯಾದ ಕಾಲವಾಗಿದೆ. ಸರಿಸುಮಾರು ೧೦೦ ಜನ ವಿಜ್ಞಾನಿಗಳು, ಬರಹಗಾರರು ಮತ್ತು ಚಿಂತಕರು ಪರಿಸರ ಸಂರಕ್ಷಣೆಗಾಗಿ ಸರ್ಕಾರಗಳ ಮೇಲೆ ಒತ್ತಡ ಹೇರಲು ತಾವು ಜೈಲಿಗೆ ಹೋಗಲೂ ಸಿದ್ಧ ಎಂದು ಸಾರಿದ್ದಾರೆ. ಹವಾಮಾನದಲ್ಲಾಗುತ್ತಿರುವ ಬದಲಾವಣೆ ಮತ್ತು ನೈಸರ್ಗಿಕ ಪರಿಸರದ ಸಂರಕ್ಷಣೆಗಾಗಿ Extinction Rebellion(*ಅಳಿವಿನ ಬಂಡಾಯಗಾರರು*) ಎಂಬ ವೇದಿಕೆಯ ಹೆಸರಿನಲ್ಲಿ ಅಂತರರಾಷ್ಟ್ರೀಯ ಜನಾಂದೋಲನವನ್ನು ಸಹ ಹುಟ್ಟಿಹಾಕಲಾಗಿದೆ. ಈ ವಿಜ್ಞಾನಿಗಳು ಎರಡನೆಯ ಮಹಾಯುದ್ಧದ ಸಂದರ್ಭದಲ್ಲಿ ವಿಶ್ವಶಾಂತಿಗೆ ಮಾಡಿದ ಹೋರಾಟದ ಮಾದರಿಯನ್ನು ಗಮನದಲ್ಲಿಟ್ಟುಕೊಂಡು ಅಂತರರಾಷ್ಟ್ರೀಯ ಮಟ್ಟದಲ್ಲಿ ನಾಗರೀಕ ಅಸಹಕಾರ ಆಂದೋಲನವನ್ನು ಸಂಘಟಿಸಿದ್ದಾರೆ.

ಹೌದು; ತೀವ್ರವಾದ ನಾಗರೀಕ ಅಸಹಕಾರ ಆಂದೋಲನವೇ ತಮ್ಮ ಪ್ರತಿರೋಧಕ್ಕೆ ಸರಿಯಾದ ಮಾರ್ಗ ಎಂದು ಈ ವಿಜ್ಞಾನಿಗಳು ಭಾವಿಸಿದ್ದಾರೆ. ಇವರು ಘೋಷಿಸಿರುವಂತೆ 'ಸರ್ಕಾರಗಳು ತಮ್ಮ ಬೇಡಿಕೆಯನ್ನು ನಿರ್ಲಕ್ಷಿಸಿದರೆ ಶಾಂತಿಯುತ, ಆದರೆ ತೀವ್ರವಾದ ನಾಗರೀಕ ಅಸಹಕಾರವನ್ನು ಪದೇ ಪದೇ ನಡೆಸಲಾಗುವುದು. ಇದರಲ್ಲಿ ಅನೇಕರು ಬಂಧನವಾಗುವ ಸಾಧ್ಯತೆಯೂ ಇದೆ.'

ಈ ವಿಜ್ಞಾನಿಗಳು ಪರಿಸರ ಸಂಕರ್ಷಣೆಯ ಆಂದೋಲನಕ್ಕಾಗಿ ಎಲ್ಲಾ ಬಗೆಯ ವೈಯಕ್ತಿಕ ತ್ಯಾಗಕ್ಕೂ ಸಿದ್ಧರಿದ್ದಾರೆ. ೧೮ನೇ ಶತಮಾನದಲ್ಲಿ ಅಮೇರಿಕಾ ಸ್ವಾತಂತ್ರ್ಯ ಹೋರಾಟಗಾರರು 'ನಮಗೆ ಸ್ವಾತಂತ್ರ್ಯ ನೀಡಿ ಇಲ್ಲವೇ ಸಾವು ಕೊಡಿ' ಎಂದು ಘೋಷಿಸಿದಂತೆ ಇವರೂ ಸಹ ಜೈಲಿಗೆ ಹೋಗುವಂತಹ ಉಗ್ರ ಪ್ರತಿಭಟನೆಗೂ ಸಿದ್ಧರಿದ್ದಾರೆ. ಇವರ ಪ್ರಕಾರ ಈ ಹವಾಮಾನದ ಬದಲಾವಣೆಯ ವಿರುದ್ಧದ ಚಳುವಳಿ ಇಂಗ್ಲೆಂಡಿನಿಂದಲೇ ಪ್ರಾರಂಭವಾಗುವುದು ಸೂಕ್ತ. ಏಕೆಂದರೆ ಕೈಗಾರಿಕಾ ಕ್ರಾಂತಿ ಶುರುವಾಗಿದ್ದೇ ಇಂಗ್ಲೆಂಡಿನಲ್ಲಿ.

ಇತ್ತೀಚಿನ ಒಂದು ವರದಿಯ ಪ್ರಕಾರ ಕಳೆದ ೫೦ ವರ್ಷಗಳಲ್ಲಿ ಶೇ. ೬೦ರಷ್ಟು ಪ್ರಾಣಿಗಳ ಸಂತತಿ ಭೂಮಿಯಿಂದ ಮರೆಯಾಗಿದೆ. ಇದೆಲ್ಲವನ್ನು ಗಮನಿಸಿದಾಗ ನಮ್ಮನ್ನು ಒಂದು ಪ್ರಶ್ನೆ ಬಾಧಿಸುತ್ತದೆ. ಅದೆಂದರೆ ಮುಂದಿನ ೫೦ ವರ್ಷಗಳಲ್ಲಿ ಜಾಗತಿಕ ತಾಪಮಾನ ಏರಿಕೆಯ ಸೂಚ್ಯಂಕಗಳು ಭಾರೀ ಪ್ರಮಾಣದಲ್ಲಿ ಏರಿಕೆಯಾದಾಗ ನಾವೇನು ಮಾಡಬೇಕು? ಎಂಬುದು. ಉದಾಹರಣೆಗೆ ತೀರಾ ಆತಂಕ ಸೂಚಿಸುವ ಇತ್ತೀಚಿನ ಪರಿಸರ ವಿನಾಶವನ್ನು ಕುರಿತ ವರದಿಯೊಂದು ಹೇಳುವಂತೆ "ಉಷ್ಣ ವಲಯದ ಮಳೆನಾಡಿನ ಪ್ರದೇಶದಲ್ಲಿ ೨ ರಿಂದ ೨.೫ ಡಿಗ್ರಿ ಸೆಂಟಿಗ್ರೇಡ್ ಉಷ್ಣತೆಯ ಹೆಚ್ಚಳದ ಕಾರಣದಿಂದ ಆಹಾರ ಸರಣಿಯಲ್ಲಿ ಶೇ. ೬೦ರಷ್ಟು ಭಾರೀ ವ್ಯತ್ಯಾಸವಾಗಿದೆ. ನಮ್ಮ ಕಣ್ಣೆದಿರಿಗೇ ಮಳೆಕಾಡಿನ ಪ್ರದೇಶ ಕಂದುಬಣ್ಣದ ದಟ್ಟ ಧೂಳಿಗೆ ಸಿಕ್ಕಿ ಅಳಿವಿನ ಅಂಚನ್ನು ತಲುಪಿದೆ. ಈ ಬಗೆಯ ಪರಿಸರದಲ್ಲಾಗುತ್ತಿರುವ ಬದಲಾವಣೆ ಸಹಜವಲ್ಲ. ಮನುಷ್ಯನ ಮಿತಿಯಿಲ್ಲದ ಹಸ್ತಕ್ಷೇಪದಿಂದಾಗಿ ಪ್ರಕೃತಿ ಆಯಾಸದಿಂದ ಏದುಸಿರು ಬಿಡುತ್ತಿದೆ. ಆರ್ಕಟಿಕ್ ಪ್ರದೇಶದಿಂದ ಅಂಟಾರ್ಟಿಕಾವರೆಗಿನ ನೈಸರ್ಗಿಕ ಪರಿಸರ ವ್ಯವಸ್ಥೆ ನಮ್ಮ ಕಣ್ಣೆದುರಿಗೇ ಕುಸಿದು ಬೀಳುತ್ತಿದೆ. ಇದು ನಿರ್ಜನ ಪ್ರದೇಶವಾಗಿರುವುದರಿಂದ ಈ ತೀವ್ರತಮ ಬದಲಾವಣೆಯನ್ನು ಯಾರೂ ಗಮನಿಸುತ್ತಿಲ್ಲ. ಉದಾಃ ಈ ಕೆಳಗಿನ ಅಂಕಿ ಅಂಶಗಳನ್ನು ಗಮನಿಸಿ.

- ರಷ್ಯಾದ ಆರ್ಕಿಟಕ್ ಪ್ರದೇಶದಲ್ಲಿ ೭೦೦ ಚದುರ ಮೈಲಿ ಆವೃತವಾಗಿರುವ ಮಂಜುಗಡ್ಡೆಯ ಟೋಪಿ ದಿನಕ್ಕೆ ೧೫ ರಿಂದ ೩೫ ಅಡಿಯವರೆಗೆ ಕುಸಿಯುತ್ತಿದೆ. ಸಾಧಾರಣವಾಗಿ ಇದರ ಪ್ರಮಾಣ ದಿನಕ್ಕೆ ೨ ಇಂಚು ಇರಬೇಕಿತ್ತು.
- ಕಳೆದ ೧೦ ವರ್ಷಗಳಲ್ಲಿ ಅಮೆಜಾನ್ ಅರಣ್ಯ ಪ್ರದೇಶದಲ್ಲಿ ೩ ಭಾರೀ ಅನಾವೃಷ್ಟಿ ಕಾಣಿಸಿಕೊಂಡಿದೆ. ಇದು ೧೦೦ ವರ್ಷಕ್ಕೆ ಒಮ್ಮೆ ಬರುವುದು ಸಹಜವಾಗಿತ್ತು.
- ಟಾಟನ್ ಹೆಸರಿನ ಮಂಜುಗಡ್ಡೆಯ ಶ್ರೇಣಿ ತೀರಾ ದೊಡ್ಡ ಮಟ್ಟದ ಹವಾಮಾನ ವ್ಯತ್ಯಾಸವನ್ನು ತೋರಿಸುತ್ತದೆ. ಪಶ್ಚಿಮ ಅಂಟಾರ್ಟಿಕಾದ ಮಂಜು ಕರಗುವ ಪ್ರಮಾಣ ಕಳೆದ ೧೫ ವರ್ಷದಲ್ಲಿ ಮೂರು ಪಟ್ಟು ಹೆಚ್ಚಾಗಿದೆ.
- ಆರ್ಕಟಿಕ್–ಅಂಟಾರ್ಟಿಕ್ ಪ್ರದೇಶದ ಮಂಜುಗಡ್ಡೆಯ ದಪ್ಪನೆಯ ಹೊದಿಕೆ ತೀವ್ರ ಪ್ರಮಾಣದಲ್ಲಿ ಕರಗುತ್ತಿರುವುದರಿಂದ ಉತ್ತರ ಭೂಖಂಡಗಳ ಉಷ್ಣಾಂಶ ಇನ್ನೂ ಹೆಚ್ಚಾಗಿ ಅಲ್ಲಿನ ಹೊಲ ಗದ್ದೆ ತೋಟಗಳ ಬೆಳೆಗಳು ನಾಶವಾಗುತ್ತಿವೆ.
- ಗ್ರೀನ್‌ಲ್ಯಾಂಡಿನ ೨೨ ಅಡಿ ದಪ್ಪ ಗಾತ್ರದ ನೀರಿನ ಹೊದಿಕೆ ಕೊಳೆ ನೀರಾಗಿ ಪರಿವರ್ತನೆಯಾಗಿದ್ದು, ಈ ಪ್ರಕ್ರಿಯೆ ವಿಜ್ಞಾನಿಗಳನ್ನು ಚಿಂತೆಗೆ ಈಡುಮಾಡಿದೆ.
- ೧೩೩೦ ಮೈಲು ದೂರ ಹರಿಯುವ ಚೀನಾದ ಲ್ಯಾನ್‌ಕಾಂಗ್ ನದಿ ಜಾಗತಿಕ ತಾಪಮಾನದಲ್ಲಾದ ಹೆಚ್ಚಳದಿಂದ ಶೇ: ೭೦ರಷ್ಟು ತಲೆನೀರಿನ ಹೊದಿಕೆಯನ್ನು ಕಳೆದುಕೊಂಡಿದೆ. ಇದು ಆಗ್ನೇಯ ಏಷ್ಯಾದ ಎಲ್ಲಾ ನದಿಗಳ ನೀರು ಹರಿಯುವಿಕೆಯ ಪ್ರಮಾಣದ ಮೇಲೆ ಪರಿಣಾಮ ಬೀರಬಹುದು.
- ವಿಶ್ವಬ್ಯಾಂಕ್ ಎಚ್ಚರಿಸಿರುವಂತೆ ಆ್ಯಂಡೀಸ್ ಪರ್ವತಶ್ರೇಣಿಯಲ್ಲಿ ಮಂಜು ಕರಗುತ್ತಿರುವ ಪರಿಣಾಮದಿಂದ ಸುಮಾರು ೧೦೦ ದಶಲಕ್ಷ ಜನರು ಕೃಷಿ, ಕುಡಿಯುವ ನೀರು ಮತ್ತು ಜಲವಿದ್ಯುತ್ ಕೊರತೆಯನ್ನು ಎದುರಿಸಬೇಕಾಗಬಹುದು.
- ಸೈಬೀರಿಯಾದಲ್ಲಿ 'ಪಿಂಗೊ' ಎಂಬ ಜಲಮೂಲ ಜೀವಿಗಳು ವಿಷಕಾರಕ ಮಿಥೇನ್‌ನನ್ನು ಉಗುಳ ತೊಡಗಿವೆ. ಸುಮಾರು ೭೦೦೦ ಇಂತಹ ಪಿಂಗೋಗಳನ್ನು ಗುರುತಿಸಲಾಗಿದ್ದು ಸೈಬೀರಿಯಾದ ನೈಸರ್ಗಿಕ ಪರಿಸರ ವಿನಾಶದ ಹಂತ ತಲುಪಿದೆ.
- ಕ್ಯಾಲಿಫೋರ್ನಿಯಾದ ಉತ್ತರ ಕರಾವಳಿಯಲ್ಲಿರುವ ಸಮುದ್ರದ ಒಳಗಿರುವ 'ಕೆಲ್ಫ್' ಅರಣ್ಯ ಅವಸಾನ ಹೊಂದಿದೆ. ಆಸ್ಟ್ರೇಲಿಯಾದ 'ಕೆಲ್ಫ್' ಅರಣ್ಯವು ಉಷ್ಣಾಂಶದ ಹೆಚ್ಚಳದಿಂದ ಅವನತಿ ಕಂಡಿದೆ.
- ಯುರೋಪಿನಲ್ಲಿ ಕೀಟಗಳ ಪ್ರಮಾಣದಲ್ಲಿ ಶೇ. ೮೦ರಷ್ಟು ಇಳಿಕೆ ಕಂಡಿರುವುದು ವಿಜ್ಞಾನಿಗಳನ್ನು ವಿಚಲಿತಗೊಳಿಸಿದೆ.

ಈ ಎಲ್ಲ ಹಿನ್ನೆಲೆಯಲ್ಲಿ ಮೇಲ್ಕಂಡ ಪ್ರತಿಭಟನೆಯ ಪತ್ರಕ್ಕೆ ಶೈಕ್ಷಣಿಕ ಕೇವಲ ವಿಜ್ಞಾನಿಗಳು ಮಾತ್ರವಲ್ಲದೆ ಧಾರ್ಮಿಕ ಮುಂಖಂಡರು ಪತ್ರಕರ್ತರೂ, ಗ್ರೀನ್ ಪಾರ್ಟಿಯ ಸಂಸತ್ಸದಸ್ಯರು ಕೂಡ ಸಹಿ ಮಾಡಿದ್ದಾರೆ.

(ಕನ್ನಡಕ್ಕೆ: **ಅವಿನಾಶ್, ಟಿ**

(ಕೃಪೆ: ***ಜನತಾ,*** ೧೧ ನವೆಂಬರ್, ೨೦೧೮)

ನೋಟ-೨

# ಪಶ್ಚಿಮ ಘಟ್ಟಗಳನ್ನು ಉಳಿಸಿ ಇಲ್ಲವೇ ಮತ್ತಷ್ಟು ವಿಪತ್ತುಗಳಿಗೆ ಸಿದ್ಧರಾಗಿ!

–ಡಾ. ಟಿ.ವಿ. ರಾಮಚಂದ್ರ

ಈ ಜಗತ್ತನ್ನು ಸೃಷ್ಟಿಸಿದವನು ಮನುಷ್ಯನಲ್ಲ. ಆದ್ದರಿಂದ ಅದರೊಡನೆಯ ಅವನ ಒಡನಾಟದ ರೀತಿನೀತಿಗಳನ್ನು ಅದು ಹೇಳುವ ಪಾಠಗಳಿಂದಲೇ ಕಲಿಯಬೇಕು. ಈ ನಮ್ರತೆಯ ತಿಳುವಳಕೆಯನ್ನು ಮರೆತ ಮನುಷ್ಯ ಈ ಪ್ರಕೃತಿಯನ್ನು ತನಗೆ ಬೇಕಾದಂತೆ-ತನ್ನ ಮಿತಿಯಿಲ್ಲದ ಸುಖ ಸೌಲಭ್ಯಗಳಿಗಾಗಿ-ಸೂರೆ ಮಾಡತೊಡಗಿದ ಪರಿಣಾಮಗಳೇ ಇಂದಿನ ಹವಾಮಾನ ವೈಪರೀತ್ಯ-ನೈಸರ್ಗಿಕ ಆಪತ್ತುಗಳು. ಈ ಸತ್ಯವನ್ನು ಇಲ್ಲಿ ಲೇಖಕರು ಭಾರತದ ಜೀವಕೇಂದ್ರವೆಂದೇ ಗುರುತಿಸಲಾಗಿರುವ ಪಶ್ಚಿಮಘಟ್ಟಗಳ ಸಂರಕ್ಷಣೆಯ ಅಗತ್ಯವನ್ನು ವೈಜ್ಞಾನಿಕ ಅಂಶಗಳೊಂದಿಗೆ ಎಳೆ ಎಳೆಯಾಗಿ ಬಿಡಿಸಿಟ್ಟಿದ್ದಾರೆ.-**ಸಂ**.



**ಲ**ಕ್ಷಾಂತರ ವರ್ಷಗಳ ಹಿಂದೆ, ಭೂಮಿಯ ಮೇಲೆ ಜೀವೋತ್ಪತ್ತಿಗೆ ಕಾರಣವಾಗಿದ್ದು ಜಗತ್ತಿನ ಮೂಲಭೂತ ಧಾತುಗಳಲ್ಲೊಂದಾದ ನೀರು.

ಏಕಕೋಶಜೀವಿಗಳಿಂದ ಹಿಡಿದು ತಿಮಿಂಗಿಲಗಳಂತಹ ಬೃಹತ್ ಪ್ರಾಣಿಯವರೆಗೆ ಹಲವಾರು ಜೀವಪ್ರಬೇಧಗಳನ್ನು ಪೋಷಿಸುವ ನೀರು ಎಲ್ಲ ಜೀವಿಗಳಿಗೂ ಅನಿವಾರ್ಯ. ಮಾನವನ ವಿಕಾಸವಾದಂತೆ ಅವನು ನದಿಗಳ ದಂಡೆಗಳ ಫಲವತ್ತಾದ ಪ್ರದೇಶಗಳಲ್ಲಿ ನೆಲೆಸ ತೊಡಗಿದ, ಆದ್ದರಿಂದಲೇ ನದಿ ಪಾತ್ರಗಳನ್ನು ಮಾನವ ನಾಗರೀಕತೆಯ ತೊಟ್ಟಿಲು ಎನ್ನಲಾಗುತ್ತದೆ.

ಈ ನದಿ ಅಥವಾ ಸರೋವರಗಳು ಕುಡಿಯುವ ನೀರು ಮತ್ತು ಕೃಷಿಗೆ ಬೇಕಾದ ಖನಿಜಯುಕ್ತ ಫಲವತ್ತಾದ ಮಣ್ಣನ್ನು ಒದಗಿಸುತ್ತಿದ್ದವು. ಯಾವುದೇ ಒಂದು ಪ್ರಾಂತ್ಯದ ಸುಸ್ಥಿರ ಅಭಿವೃದ್ಧಿಯಲ್ಲಿ ಸಾಕಷ್ಟು ಪ್ರಮಾಣದ ಶುದ್ಧವಾದ ನೀರು ಬಹುಮುಖ್ಯ ಪಾತ್ರವನ್ನು ವಹಿಸುತ್ತದೆ.

ಪಶ್ಚಿಮ ಘಟ್ಟಗಳು ನಿರಂತರ ಹರಿಯುವ ಹಲವಾರು ನದಿಗಳನ್ನು ಪೋಷಿಸುತ್ತ ಆಹಾರ ಮತ್ತು ನೀರಿನ ಭದ್ರತೆಯನ್ನು ಒದಗಿಸುವ ಕಾರಣದಿಂದ ಅವನ್ನು ಭಾರತ ಪರ್ಯಾಯ ದ್ವೀಪದ ನೀರಿನ ಟ್ಯಾಂಕ್ ಎಂದು ಕರೆಯಲಾಗುತ್ತದೆ. ಭಾರತದ ಪಶ್ಚಿಮಕ್ಕೆ ಸುಮಾರು ೧೬೦೦ ಕಿ, ಮೀ. ಉದ್ದಕ್ಕೆ ಅಲೆಅಲೆಯಾಗಿ ಹಬ್ಬಿರುವ ಈ ಶ್ರೇಣಿಯು ಅರಬ್ಬಿ ಸಮುದ್ರಕ್ಕೆ ಸಮಾನಾಂತರವಾಗಿ ಪಶ್ಚಿಮ ಕರಾವಳಿಯಲ್ಲಿ ಗುಜರಾತ್‌ನ ದಕ್ಷಿಣದಿಂದ ಪ್ರಾರಂಭವಾಗಿ ಪರ್ಯಾಯ ದ್ವೀಪದ ದಕ್ಷಿಣದ ತುದಿಯವರೆಗೂ ಚಾಚಿದೆ. ಇದು ಹಬ್ಬಿರುವ ಪ್ರದೇಶದ ವ್ಯಾಪ್ತಿ ೧,೬೪,೨೮೦ ಚ ಕಿ, ಮೀ,( ಅಂದರೆ ಭಾರತದ ವಿಸ್ತೀರ್ಣದ ೫% ಗಿಂತಲೂ ಅಧಿಕ.) ಈ ಶ್ರೇಣಿಯು ಕೇರಳದ ಪಾಲ್ಘಾಟ್ ಪ್ರದೇಶದಲ್ಲಿ ೩೦ ಕಿ, ಮೀ, ದೂರದ ಒಂದು ತೆರವನ್ನು ಹೊಂದಿದೆ. ಪಶ್ಚಿಮ ಘಟ್ಟಗಳ ಸರಾಸರಿ ಎತ್ತರ ೯೦೦ ಮೀಟರ್‌ಗಳಾದರೆ ಹಲವಾರು ಶಿಖರಗಳು ೧೦೦೦ ಮೀಟರ್‌ಗೂ ಅಧಿಕ ಎತ್ತರವಾಗಿವೆ. ಪಾಲ್ಘಾಟ್‌ನ ಉತ್ತರಕ್ಕಿರುವ ನೀಲಗಿರಿ ಪ್ರಸ್ಥಭೂಮಿ ಮತ್ತು ದಕ್ಷಿಣಕ್ಕಿರುವ ಅಣ್ಣಾಮಲೈ ಶ್ರೇಣಿಗಳು ಹಲವು ಕಡೆ ೨೦೦೦ ಮೀ ಎತ್ತರವನ್ನು ಮೀರುತ್ತವೆ.

ಈ ಶ್ರೇಣಿಯ ಪೂರ್ವ ಭಾಗವು ದಕ್ಷಿಣ ಪ್ರಸ್ಥಭೂಮಿಯ ಜೊತೆಗೆ ಒತ್ತಿಕೊಳ್ಳುತ್ತಾ ಪೂರ್ವದ ಬಂಗಾಳ ಕೊಲ್ಲಿಯ ಕಡೆಗೆ ಚಾಚಿಕೊಳ್ಳುತ್ತದೆ. ಈ ಪ್ರದೇಶವು ಅರಬ್ಬೀ ಸಮುದ್ರದ ಕಡೆಗೆ ಭೋರ್ಗರೆದು ಹರಿಯುವ (ನೇತ್ರಾವತಿ, ಶರಾವತಿ, ಕಾಳಿ ಮುಂತಾದ ಹಲವಾರು ನದಿ–ತೊರೆಗಳ ಜನ್ಮ ಸ್ಥಳವಾಗಿದೆ. ಹಾಗೆಯೇ ಇಲ್ಲಿ ಉಗಮಿಸಿ ಪೂರ್ವಕ್ಕೆ ಹರಿಯುತ್ತಾ ತಮ್ಮ ಪಾತ್ರದುದ್ದಕ್ಕೂ ಇತರ ಹಲವಾರು ನದಿಗಳನ್ನು ತಮ್ಮೊಡನೆ ಸಂಗಮಿಸಿಕೊಂಡು ಬಂಗಾಳ ಕೊಲ್ಲಿಯನ್ನು ಸೇರುವ (ಗೋದಾವರಿ, ಕೃಷ್ಣಾ, ಕಾವೇರಿ ಎಂಬ) ಮೂರು ಪ್ರಮುಖ ನದಿಗಳೂ ಇವೆ.. ಈ ನದಿಗಳು ದಕ್ಷಿಣ ಭಾರತದ ಮುಖ್ಯ ಜಲಮೂಲಗಳಾಗಿವೆ. ಇದರ ಸಂಕೀರ್ಣವಾದ ಭೂ ಪ್ರದೇಶ, ಎತ್ತರದಲ್ಲಿಯ ವ್ಯತ್ಯಾಸಗಳು, ವಿಭಿನ್ನವಾದ ಭೂಸ್ವರೂಪ, ಶಿಲಾ ರಚನೆ, ೧೦೦೦ ಮಿ.ಮೀ ನಿಂದ ಹಿಡಿದು ೬೦೦೦ ಮಿ, ಮೀ ವರೆಗೆ ಮಳೆಯಲ್ಲಿನ ವ್ಯತ್ಯಾಸ, ಇವುಗಳ ಕಾರಣದಿಂದ ಪಶ್ಚಿಮ ಘಟ್ಟಗಳು ಅಪಾರವಾದ ಸಸ್ಯವೈವಿಧ್ಯತೆಯ ತಾಣಗಳಾಗಿವೆ. ಉಷ್ಣಪ್ರದೇಶದ ನಿತ್ಯಹರಿದ್ವರ್ಣ ಕಾಡುಗಳು ಪಶ್ಚಿಮ ಇಳಿಜಾರಿನ ಪ್ರಾಕೃತಿಕ ಶಿಖರ ಸಸ್ಯಸಂಕುಲ(climax vegetation) ಆಗಿದ್ದು ಈ ಕಾಡುಗಳು ನೈರುತ್ಯ ಮಳೆ ಮಾರುತಗಳನ್ನು ತಡೆಯುತ್ತವೆ. ಇಲ್ಲಿಯ ಸಸ್ಯಸಂಕುಲ ಅರೆ ನಿತ್ಯ ಹರಿದ್ವರ್ಣದಿಂದ, ಅತ್ಯಂತ ಎಲೆ ಉದುರುವ ತೇವಯುಕ್ತ ಕಾಡಿನಿಂದ ತನ್ನ ಪೂರ್ವಭಾಗಗಳ ಎಲೆ ಉದುರುವ ಶುಷ್ಕ ಕಾಡುಗಳವರೆಗೆ, ಅಲ್ಲಿಂದ ಮಳೆ ನೆರಳಿನ (Rain shadow) ಪ್ರದೇಶಗಳವರೆಗೆ ಚಾಚಿ ನಂತರ ಶುಷ್ಕ ಡೆಕ್ಕನ್ ಪ್ರಾಂತ್ಯದ ಅರೆ ಒಣಪ್ರಾಂತ್ಯದ ವಿಶಿಷ್ಟ ಪ್ರದೇಶಗಳವರೆಗೆ ವಿಸ್ತರಿಸುತ್ತದೆ. ಈ ಸೂಕ್ಷ್ಮ ಜೀವಿಪರಿಸ್ಥಿತಿ ಜೀವಾವಾರವನ್ನು(biosphere) ಪೋಷಿಸುತ್ತದೆ ಮತ್ತು ಜೀವಸತ್ವ ಆವರ್ತನೆಯಿಂದ (nutrient cycling) ಹಿಡಿದು ಬಯೋಜಿಯೋ ಕೆಮಿಕಲ್ ಸೈಕಲ್, ಹೈಡ್ರೋ ಸ್ಯಕ್ಲಿಂಗ್ ಮುಂತಾದ ವಿವಿಧ ಲಕ್ಷಣಗಳನ್ನು ಹೊಂದಿದೆ. ಪ್ರಾಕೃತಿಕ ಭೂಪ್ರದೇಶಗಳ ಲಕ್ಷಣಗಳನ್ನೇ ಬದಲಾಯಿಸುವಷ್ಟು ಪ್ರಬಲವಾಗಿರುವ ಪಾರಿಸರಿಕ ಕ್ಷೋಭೆಗಳನ್ನು (disturbance) ನಿಭಾಯಿಸುವ ಸಾಮರ್ಥ್ಯವನ್ನು ಒಂದು ಜೀವಿಪರಿಸರದ ಜೀವಿಪರಿಸರಸೂಕ್ಷ್ಮತೆ ಎಂದು ಕರೆಯಲಾಗುತ್ತದೆ. ಆದರೆ ಇತ್ತೀಚಿನ ವರ್ಷಗಳಲ್ಲಿ ಮನುಷ್ಯಮೂಲದ ಚಟುವಟಿಕೆಗಳಿಂದಾಗಿ ಜೀವ ವೈವಿಧ್ಯದ ಪ್ರಮುಖ ತಾಣಗಳು, ಜೈವಿಕ ಸಮುದಾಯಗಳು ತಮ್ಮ ಮೂಲ ಸ್ಥಿತಿಗೆ ಬರಲು ಸಾಧ್ಯವೇ ಆಗದಷ್ಟು ಮಟ್ಟಿಗಿನ ಬದಲಾವಣೆಗೆ ಒಳಗಾಗುತ್ತಿವೆ.

ಜಗತ್ತಿನ ಪ್ರಮುಖ ೩೫ ಜೀವಿವೈವಿಧ್ಯದ ತಾಣಗಳ ಪೈಕಿ ಪಶ್ಚಿಮಘಟ್ಟವೂ ಒಂದು. ಇದು ಅತಿ ವಿಶೇಷವಾದ ಹಲವು ಸಸ್ಯ, ಮತ್ತು ಪ್ರಾಣಿಸಂಕುಲಗಳ ತಾಣ. ಇಲ್ಲಿನ ೪೬೦೦ ಹೂ ಬಿಡುವ ಸಸ್ಯಗಳ ಪೈಕಿ ಶೇ. ೩೮ ಸ್ಥಳವಿಶಿಷ್ಟವಾದಂಥವು (endemic). ಇಲ್ಲಿ ೩೩೦ ಬಗೆಯ ಚಿಟ್ಟೆಗಳಿದ್ದು ಅವುಗಳಲ್ಲಿ ೧೧%, ೧೯೭ ಜಾತಿಯ ಹಾವುಗಳಲ್ಲಿ ಶೇ.೫೨, ೫೨೯ ಜಾತಿಯ ಹಕ್ಕಿಗಳ ಪೈಕಿ ಶೇ,೪೫, ೧೬೧ ಜಾತಿಯ ಸಸ್ತನಿಗಳು ಇದ್ದು ಅವುಗಳಲ್ಲಿ ಶೇ. ೯, ೩೪೩ ಜಾತಿಯ ಮೀನುಗಳಲ್ಲಿ ಶೇ. ೩೧, ೨೪೮ ಜಾತಿ ಉಭಯವಾಸಿಗಳಿದ್ದು ಶೇ. ೬೨ ಸ್ಥಳವಿಶಿಷ್ಟವಾದವುಗಳಾಗಿವೆ. ಉತ್ತರಕ್ಕೆ ಚಲಿಸಿದಂತೆ ಪಶ್ಚಿಮ ಘಟ್ಟಗಳಲ್ಲಿ ಸ್ಥಳವಿಶಿಷ್ಟವಾದ ಮರಗಳ ಸಂಖ್ಯೆ ಕಡಿಮೆಯಾಗುತ್ತಾ ಹೋಗುವುದು ಕಂಡುಬರುತ್ತದೆ. ಸ್ಥಳವಿಶಿಷ್ಟವೆಂದು ಪರಿಗಣಿಸಲಾದ ೩೧೮ ಜಾತಿಯ ಮರಗಳ ಪೈಕಿ ಶೇ.೮೫ ಮರಗಳು ಗರಿಷ್ಟ ೮ ರಿಂದ ೧೦ ತಿಂಗಳು ಮಳೆ ಬೀಳುವ ಪ್ರದೇಶದಲ್ಲೇ ಕಂಡು ಬರುತ್ತವೆ. ಉತ್ತರಕ್ಕೆ ಚಲಿಸಿದಂತೆ ಈ ಪ್ರಮಾಣ ಕಡಿಮೆಯಾಗುವುದು. ಎತ್ತರದ ಪ್ರದೇಶಗಳಲ್ಲಿ ಹೆಚ್ಚು ಸೂಕ್ಷ್ಮವಾದ ಹೈಗ್ರೋಫಿಲಸ್ (ತೇವಯುಕ್ತ ಪ್ರದೇಶದಲ್ಲಿ ಬೆಳೆಯುವ ಸಸ್ಯಗಳು) ಪ್ರಭೇದದ ಮರಗಳು ಕೆಲವೇ ಸ್ಥಳಗಳಲ್ಲಿ ಮಾತ್ರವೇ ಕಂಡುಬರುತ್ತವೆ.

ಪಶ್ಚಿಮ ಘಟ್ಟ ಪ್ರದೇಶದಲ್ಲಿ ಹೆಚ್ಚಿನ ಪ್ರಮಾಣದ ಸ್ಥಳವಿಶಿಷ್ಟತೆಯುಳ್ಳ ಜೀವವೈವಿಧ್ಯವು ಸಾಧ್ಯವಾಗಿರುವುದು ತೇವಾಂಶಭರಿತ ಉಷ್ಣವಲಯ, ಅಲ್ಲಿನ ಭೂಸ್ವರೂಪ, ಭೂಲಕ್ಷಣ, ಪಶ್ಚಿಮಕ್ಕೆ ಅರಬ್ಬೀ ಸಮುದ್ರ ಮತ್ತು ಉತ್ತರಕ್ಕೆ ಅರೆ ಒಣಪ್ರದೇಶದ ಡೆಕ್ಕನ್ ಪ್ರಸ್ಥಭೂಮಿ ಇರುವ ಕಾರಣಗಳಿಂದಾಗಿ. ಉತ್ಪಾದಕತೆ, ಆದಾಯ ಸೃಷ್ಟಿ, ಉದ್ಯೋಗ ಸೃಷ್ಟಿ ಮತ್ತು ಜೀವನಾಧಾರದ ದೃಷ್ಟಿಯಿಂದ ಈ ಸೂಕ್ಷ್ಮವಾದ ಜೀವಿವಲಯವು ಮನುಷ್ಯನ ಅಸ್ಥಿತ್ವಕ್ಕೆ ಬಹು ಮುಖ್ಯ. ಅರಣ್ಯಗಳ

ಉತ್ಪನ್ನ ಮತ್ತು ಅದರ ಇತರ ಜೀವಪೂರಕ ಪ್ರಯೋಜನೆಗಳನ್ನು ಸಕಲ ದೃಷ್ಟಿಯಿಂದಲೂ ಸಮಗ್ರವಾಗಿ ಪರಿಗಣಿಸಿ ಒಂದು ಹೆಕ್ಟೇರ್‌ಗೆ ವರ್ಷವೊಂದಕ್ಕೆ ೨ ಲಕ್ಷದಿಂದ ೧೦ ಲಕ್ಷ ರೂ.ಗಳವರೆಗೆ ಬೆಲೆ ನಿಗದಿ ಮಾಡಬಹುದು. ಜೀವಾವಾರಗಳ ಸಂರಕ್ಷಣೆ, ಪುನಶ್ಚೇತನಕಾರ್ಯಗಳಿಗಾಗಿ ಸುಸ್ಥಿರ ಅಭಿವೃದ್ಧಿ ನೀತಿಗಳನ್ನು, ಆದ್ಯತೆಗಳನ್ನು ರೂಪಿಸಿ ಅವುಗಳನ್ನು ಸಮರ್ಥಿಸುವುದಕ್ಕಾಗಿ ಜೀವಾವಾರದ ಬೆಲೆನಿಗದಿ ಮಾಡುವುದು ಮುಖ್ಯವಾಗುತ್ತದೆ. ವಿವೇಕಯುತವಾದ ಜೀವಾವಾರ ಬೆಲೆ ನಿಗದಿಯ ವ್ಯವಸ್ಥೆ ಆಗದಿದ್ದ ಪಕ್ಷದಲ್ಲಿ ಪಾರಿಸರಿಕ ವಿನಾಶದ ದುಷ್ಕೃತ್ಯಗಳಿಗೆ ಸಹಾಯಕವಾಗುವ ರೀತಿಯ ನೀತಿ ನಿರೂಪಣೆಗಳಿಗೆ, ಒಟ್ಟಾರೆ ಸಾಮಾಜಿಕ ಹಿತದ ಅವಗಣನೆಗೆ ದಾರಿಯಾಗಬಹುದು. ಭೂಪ್ರದೇಶಗಳ ನಿರ್ವಹಣೆಯ ಸಂದರ್ಭಗಳಲ್ಲಿ ಜೀವಪರಿಸ್ಥಿತಿಯನ್ನು, ಜಲಪರಿಸ್ಥಿತಿಯನ್ನು, ಒಟ್ಟಾರೆ ಆ ವಾತಾವರಣವನ್ನು ಆರ್ಥಿಕವಾದ ಮತ್ತು ಸಮಾಜಿಕವಾದ ದೃಷ್ಟಿಕೋನದೊಂದಿಗೆ ಸುಸ್ಥಿರವಾದ ರೀತಿಯಲ್ಲಿ ನಿರ್ವಹಿಸ ಬೇಕಾದ ಅನಿವಾರ್ಯತೆ ಈಗ ಉಂಟಾಗಿದೆ...

ಮಿತಿಯಿಲ್ಲದ, ಅನಿಯಂತ್ರಿತ ಸಂಪನ್ಮೂಲಗಳ ಸೂರೆ ಮತ್ತು ಯಾವುದೇ ಯೋಜನೆ ಇಲ್ಲದ ಅಭಿವೃದ್ಧಿ ಕಾರ್ಯಕ್ರಮಗಳು ಒಟ್ಟಾಗಿ, ಸಂಪನ್ಮೂಲಗಳ ಲಭ್ಯತೆ ಮತ್ತು ಜೀವವೈವಿಧ್ಯತೆಯ ಮೇಲೆ ಅತಿಯಾದ ಒತ್ತಡವನ್ನು ಉಂಟುಮಾಡುತ್ತಿದ್ದು, ಇದು ಬೋಳಾದ ಬೆಟ್ಟಗಳ ನೆತ್ತಿಗಳು ಹಾಗೂ ನದಿಗಳಲ್ಲಿ, ತೊರೆಗಳಲ್ಲಿ ಹರಿಯುವ ನೀರಿನ ಪ್ರಮಾಣ ಮತ್ತು ಹರಿವಿನ ಅವಧಿ ಇವುಗಳ ಕೊರತೆಯ ರೂಪದಲ್ಲಿ ವ್ಯಕ್ತವಾಗುತ್ತಿದೆ. ಉದಾ : ಸ್ಥಳೀಯ ಸಸ್ಯಪ್ರಬೇಧಗಳು ಪ್ರಧಾನವಾಗಿ ಕಂಡುಬರುವ ಎಡೆಗಳಲ್ಲಿ(ಶೇ. ೫೫ಕ್ಕೂ ಹೆಚ್ಚು) ತೊರೆಗಳಲ್ಲಿ ನೀರಿನ ಹರಿವು ನಿರಂತರವಾಗಿದ್ದರೆ, ಈ ಬಗೆಯ ಸ್ಥಳೀಯ ಸಸ್ಯ ಪ್ರಬೇಧಗಳು ಕಡಿಮೆ ಇದ್ದಾಗ (ಶೇ. ೩೫ಕ್ಕೂ ಕಡಿಮೆ) ತೊರೆಗಳಲ್ಲಿ ನೀರಿನ ಹರಿವು ಏರುಪೇರಾಗುತ್ತದೆ. ಇದರಿಂದ ಸ್ಥಳೀಯ ಸಸ್ಯ ಪ್ರಬೇಧಗಳ ಹಸಿರುಹೊದಿಕೆಯನ್ನು ಕಾಪಾಡುವುದು, ಜಲಾನಯನ ಪ್ರದೇಶವನ್ನು ಕಾಪಾಡುವ ಮೂಲಕ ಜನರ ಜೀವನಾಧಾರವನ್ನು ಕಾಪಾಡುವ ದೃಷ್ಟಿಯಿಂದ ಎಷ್ಟು ಮುಖ್ಯ ಎಂಬುದು ಸ್ಪಷ್ಟವಾಗುತ್ತದೆ. ಜಲಾನಯನ ಪ್ರದೇಶದಲ್ಲಿ ಸ್ಥಳೀಯ ಸಸ್ಯಪ್ರಬೇಧಗಳ ಹೊದಿಕೆಯಿದ್ದಾಗ ಆ ಭೂಪ್ರದೇಶದ ನೀರನ್ನು ಹಿಡಿದಿಡುವ ಶಕ್ತಿಯು ಹೆಚ್ಚುತ್ತದೆ. ಇದರಿಂದ ತೊರೆಗಳಲ್ಲಿ ನೀರು ಎಲ್ಲಾ ಕಾಲದಲ್ಲೂ ಹರಿಯುವ ಸಾಧ್ಯತೆ ಹೆಚ್ಚುತ್ತದೆ. ಉಷ್ಣಪ್ರದೇಶಗಳ ಕಾಡುಗಳಲ್ಲಿಯ ಭೂಮಿಯ ದುರ್ಬಳಕೆಯ ಪ್ರಭಾವ ತೊರೆಗಳಲ್ಲಿನ ಶುಷ್ಕಕಾಲದ ಹರಿವಿನ ಮೇಲೆ ಆಗುತ್ತದೆಂಬುದು ಸುಸ್ಪಷ್ಟ, ಏಕೆಂದರೆ ನೀರನ್ನು ಇಂಗಿಸಿಕೊಳ್ಳುವ ಕಾಡಿನ ಗುಣದಲ್ಲಿ ಹರಿದು ಹೋಗುವ ನೀರನ್ನು ಮತ್ತು ಇಂಗುವ ನೀರನ್ನು ವಿಭಾಗಿಸಿಕೊಳ್ಳುವ ಶಕ್ತಿ ಅಂತರ್ಗತವಾಗಿರುತ್ತದೆ. ವಾಯುವಿನ ಗುಣಮಟ್ಟದ ಸುಧಾರಣೆ, ಕಲ್ಮಶಗಳ ಶುದ್ಧೀಕರಣ, ಹೂಳು ತಡೆ, ಭೂಕುಸಿತ ಪ್ರತಿರೋಧ ಮುಂತಾದುವು ಸ್ಥಳೀಯ ಸಸ್ಯ ಸಂಕುಲವನ್ನು ಕಾಪಾಡುವುದರಿಂದ ಆಗುವ ಇತರ ಲಾಭಗಳು.

ಸೂಕ್ಷ್ಮವಾದ ಜೀವಿಪರಿಸರವನ್ನು ಕೆಟ್ಟ ರೀತಿಯಲ್ಲಿ ನಿರ್ವಹಿಸುವುದರಿಂದ ಉಂಟಾಗುವ ಗಂಭೀರ ಪರಿಣಾಮಗಳು ಇತ್ತೀಚಿನ ಕೇರಳ ಮತ್ತು ಕೊಡಗುಗಳಲ್ಲಿ ಉಂಟಾದ ವಿಪತ್ತುಗಳಿಂದ ಸ್ಪಷ್ಟವಾಗಿದೆ. ಈ ಪ್ರದೇಶಗಳಲ್ಲಿ ಉಂಟಾದ ವಿಪತ್ತುಗಳಿಗೆ ಕಾಡುನಾಶವೇ (ಕಳೆದ ಐದು ದಶಕಗಳಲ್ಲಿ ಕೇರಳದಲ್ಲಿ ಶೇ. ೩೬ ಮತ್ತು ಕೊಡಗಿನಲ್ಲಿ ಶೇ. ೨೪ ಹಸಿರು ಹೊದಿಕೆ ನಾಶವಾಗಿದೆ.) ಹೀಗೆ ಕಾರಣವಾಗಿದೆ: (೧) ಕಾಡಿನ ನೀರು ಹಿಡಿದಿಡುವ ಸಾಮರ್ಥ್ಯದ ನಾಶದಿಂದ ಉಂಟಾಗಿರುವ ಪ್ರವಾಹ, (೨.) ಸಾಕಷ್ಟು ನೀರು ಇಂಗದೆ ಇರುವುದರಿಂದ ತೊರೆಗಳು ಒಣಗಿರುವುದು ಮತ್ತು ಅಂತರ್ಜಲದ ಮಟ್ಟದಲ್ಲಿ ಕುಸಿತ, ಸ್ಥಳೀಯ ಸಸ್ಯಪ್ರಬೇಧಗಳ ನಾಶದಿಂದಾಗಿ ಭೂ ಕುಸಿತ ಈ ಪ್ರದೇಶಗಳು ಅಭಿವೃದ್ಧಿಯಾಗಬೇಕೆಂಬುದು ನಿಜ ಆದರೆ ಈ ಅಭಿವೃದ್ಧಿಗೆ ತೆರಬೇಕಾದ ಬೆಲೆ ಪ್ರಾಕೃತಿಕ ಸಂಪನ್ಮೂಲಗಳ ನಾಶವಲ್ಲ. ಭೂಮಿಯ ತಾಳಿಕೆಯ ಸಾಮರ್ಥ್ಯವನ್ನು ನಾಶಮಾಡುವುದು ಅಭಿವೃದ್ಧಿಯಲ್ಲ. ಅಹಂಕಾರಿಗಳಾದ ಮತ್ತು ತಿಳುವಳಿಕೆಯ ಕೊರತೆಯುಳ್ಳ ನೀತಿ ರೂಪಿಸುವ ಜನ ಜಲಸಂಪತ್ತನ್ನು ಕಾಪಾಡುವುದಕ್ಕಾಗಿ ಜಲಾನಯನದ ಪ್ರಾಮುಖ್ಯತೆಯನ್ನು ಅರಿಯಬೇಕಾದುದು ಬಹಳ ಮುಖ್ಯ.

ನೀರನ್ನು ಹಿಡಿದಿಡುವ ಭೂಮಿಯ ಸಾಮರ್ಥ್ಯವನ್ನು ಹೆಚ್ಚಿಸುವುದಕ್ಕಾಗಿ ಜಲಾನಯನ ಪ್ರದೇಶಗಳಲ್ಲಿ ಸ್ಥಳೀಯ ಸಸ್ಯ ಪ್ರಭೇಧಗಳನ್ನು ಹೆಚ್ಚಿಸಿ ಹಸಿರು ಹೊದಿಕೆ ನಿರ್ಮಿಸುವುದು, ಆ ಮೂಲಕ ನೀರಿನ ಸ್ಥಿರತೆ, ಭೂಸವಕಳಿಯನ್ನು ತಡೆಯುವುದು, ಹೂಳಿನ ಸಮಸ್ಯೆಯನ್ನು ತಡೆಗಟ್ಟುವುದು, ಇಂಗಾಲವನ್ನು ನಿರ್ವಹಿಸುವುದು ಮತ್ತು ಭೂಕುಸಿತ ಹಾಗೂ ಪ್ರವಾಹದ ಸಂದರ್ಭಗಳನ್ನು ಕಡಿಮೆ ಮಾಡುವುದಕ್ಕಾಗಿ ಕ್ರಮಗಳನ್ನು ಕೈಗೊಳ್ಳುವುದು ಅಗತ್ಯ.

ನಿರಂತರ ನೀರಿನ ಹರಿವಿರುವ ಜೀವಿಪರಿಸರದ, ಪಶ್ಚಿಮ ಘಟ್ಟಗಳಿಗೆ ವಿಶಿಷ್ಟವಾದ ಸಸ್ಯಗಳು ಮತ್ತು ಅಳಿದುಳಿದಿರುವ (relic species) ಸಸ್ಯಗಳ ಬಗ್ಗೆ ನೀತಿ ನಿರ್ಮಾಪಕರು ತೀವ್ರಗಮನ ಹರಿಸಬೇಕಾದ ಅಗತ್ಯವಿದೆ.

ನೀರು ಹರಿಯುವ ಎಡೆಗಳಲ್ಲಿ ಬೆಳೆಯುವ ಕಾಡುಗಳು ವಿಶೇಷ ತಳಿಯ ಮರಗಳನ್ನು ಹೊಂದಿದ್ದು ಅವಕ್ಕೆ ಅತಿ ಹೆಚ್ಚಿನ ಮಟ್ಟದಲ್ಲಿ ಜೈವಿಕ ದ್ರವ್ಯ (bio-mass) ಉತ್ಪಾದಿಸುವ ಸಾಮರ್ಥ್ಯ ಮತ್ತು ಇಂಗಾಲವನ್ನು ದೂರವಿರಿಸುವ (carbon sequestration) ಸಾಮರ್ಥ್ಯ ಸಹ ಇರುತ್ತದೆಯಾದ್ದರಿಂದ ಮತ್ತು ಅವು ಕಾಡುಗಳ ಜಲಾನಯನತೆಯನ್ನು ಉತ್ತಮಪಡಿಸುವುದರಿಂದ ಆ ಕಾಡುಗಳನ್ನು ಉಳಿಸುವ ದೃಷ್ಟಿಯಿಂದ ವಿಶೇಷವಾದ ಅರಣ್ಯ ನಿರ್ವಹಣೆಯ ನೀತಿಗಳನ್ನು ರೂಪಿಸಬೇಕಾದ ಅಗತ್ಯವಿದೆ. ಪಶ್ಚಿಮ ಘಟ್ಟಗಳ ಅಸಂಖ್ಯಾತ ತೊರೆಗಳು ಇಡೀ ಭಾರತ ಪರ್ಯಾಯ ದ್ವೀಪದ ಜಲಾನಯನವನ್ನು (watershed) ರೂಪಿಸುತ್ತವೆ. ಕೋಟ್ಯಾಂತರ ಅರಣ್ಯವಾಸಿಗಳು ಮತ್ತು ಬಡರೈತರು ವಿವೇಕಯುತ ನೀರಿನ ಬಳಕೆ ಮತ್ತು ಜಲಾನಯನ ಸಸ್ಯ ಸಂಪತ್ತನ್ನು ಉಳಿಸುವ ಕಾರ್ಯಕ್ಕೆ ಸಂಬಂಧಿಸಿದಂತೆ ನೀತಿಗಳನ್ನು ರೂಪಿಸುವ ಮಟ್ಟದಲ್ಲಿ ಪಾಲುದಾರರಾಗಬೇಕು.

ಅತಿ ಹೆಚ್ಚು ಮಾನವ ಚಟುವಟಿಕೆ ಇರುವ ಜೀವವೈವಿಧ್ಯತೆಯ ಪ್ರಮುಖ ತಾಣಗಳಲ್ಲಿ ಆದಿವಾಸಿಗಳನ್ನು ಮತ್ತು ಸಣ್ಣ ರೈತರನ್ನು ಜಲಾನಯನ ಪ್ರದೇಶದ ಕಾಡುಗಳ ಪೋಷಕರನ್ನಾಗಿ ಮತ್ತು ಕೃಷಿಗಾಗಿ ನೀರನ್ನು ನಿಯಂತ್ರಿತ ರೀತಿಯಲ್ಲಿ ಬಳಸುವ ವಿಚಾರದಲ್ಲಿ ಪಾಲುದಾರರನ್ನಾಗಿ ಮಾಡಬೇಕು. ಈ ಕ್ರಮಗಳಿಂದ ಜೀವವೈವಿಧ್ಯತೆಯನ್ನು ಕಾಪಾಡುವ, ಜಾಗತಿಕ ಹವಾಮಾನ ಬದಲಾವಣೆಯನ್ನು ತಡೆಯುವ, ಸ್ಥಳೀಯ ಜನರ ಜೀವನ ಮಟ್ಟವನ್ನು ಉತ್ತಮಪಡಿಸುವ ಕೆಲಸಗಳು ಸಾಧ್ಯವಾಗುವುದು. ಸದಾಕಾಲ ತೊರೆಗಳು ಹರಿಯುವಂತೆ ಮಾಡಲು ಉಳಿದಿರುವ ನಿತ್ಯಹರಿದ್ವರ್ಣ ಕಾಡುಗಳನ್ನು ಮತ್ತು ಅರೆ ಹರಿದ್ವರ್ಣ ಕಾಡುಗಳನ್ನು ಉಳಿಸುವುದು ಪ್ರಧಾನ ಕಾಳಜಿಯಾಗಬೇಕು. ಸೂಕ್ತವಾದ ನಿರ್ವಹಣಾ ತಂತ್ರಗಳ ಮೂಲಕ ಇದು ಇನ್ನೂ ಸಾಧ್ಯವಿದೆ.

ಈ ವಿಚಾರದಲ್ಲಿ ಅಭಿವೃದ್ಧಿಯ ಯೋಜಕರಿಗೆ ಜೀವಿಪರಿಸರ ಎಂದರೇನು ಎಂಬುದರ ಪರಿಪೂರ್ಣ ಮತ್ತು ಸಮಗ್ರ ಗ್ರಹಿಕೆ ಅಗತ್ಯ. ಜೀವಿಪರಿಸರ ಸಂರಕ್ಷಣೆ ಎಂಬುದು ಭೂಮಿಮತ್ತು ನೀರುಗಳಂತಹ ಜೀವಂತ ಸಂಪನ್ಮೂಲಗಳ ಸಮಗ್ರ ನಿರ್ವಹಣೆ, ಒಂದು ನಿಷ್ಪಕ್ಷವಾದ ರೀತಿಯ ಧೋರಣೆ ಮತ್ತು ಸುಸ್ಥಿರ ಬಳಕೆಯ ವಿಧಾನಗಳನ್ನು ಒಳಗೊಳ್ಳುತ್ತದೆ. ಸ್ಥಿರವಾದ ಅಭಿವೃದ್ಧಿಯ ಮಾರ್ಗವು ಜೀವಿಪರಿಸರ ನಿಯಮಗಳನ್ನು ಅವಲಂಬಿಸಿರುವ ಒಂದು ವಿನ್ಯಾಸವನ್ನು ಒಳಗೊಂಡಿರುತ್ತದೆ. ಈ ನಿಯಮಗಳು ಸಾಮಾಜಿಕವಾಗಿ ಒಳಗೊಳ್ಳುವಂತಹವೂ ಮತ್ತು ಒಂದು ಸಾಮರಸ್ಯವುಳ್ಳ ಪರಿಸರದ ಒಳಗೆ ಬದುಕುವ ಬಹುಮುಖಿ ಸುಸ್ಥಿರ ಮಾನವ ಸಮುದಾಯಗಳ ಬಗ್ಗೆ ಸೂಕ್ಷ್ಮಗ್ರಾಹಿಯೂ ಆಗಿರುತ್ತವೆ. ಬರೀ ಜಿ.ಡಿ.ಪಿ.ಯ ಲೆಕ್ಕಾಚಾರದ ಬಿಸಿಲುಗುದುರೆಯನ್ನು ಬೆನ್ನು ಹತ್ತುವ ಅಭಿವೃದ್ಧಿಯು ಜವಾಬ್ದಾರಿರಹಿತ ನೀರು ಮತ್ತು ಮರಮುಟ್ಟು ಲಾಬಿಗೆ ಅನುಕೂಲಕರವಾಗಿರುತ್ತದೆ ಮತ್ತು ಭಾರತ ಪರ್ಯಾಯ ದ್ವೀಪದ ನೀರು ಮತ್ತು ಆಹಾರದ ತಾಳಿಕೆಯನ್ನು ಹಾಳುಗೆಡವುತ್ತದೆ



**ಡಾ.ಟಿ.ವಿ. ರಾಮಚಂದ್ರ ಅವರು ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿನ ಪರಿಸರ ವಿಜ್ಞಾನ ಕೇಂದ್ರದ ಅಧ್ಯಯನಗಳ ಸಮನ್ವಯಕಾರರಾಗಿದ್ದಾರೆ)**

(ಕನ್ನಡಕ್ಕೆ : ಎಂ. ರಾಜು)

**ಚಂದಾದಾರರಾಗಲು ಬಯಸುಯವವರಿಗೆ ಸೂಚನೆ**

**ಹೊಸ ಮನುಷ್ಯ'ಕ್ಕೆ ಚಂದಾದಾರರಾಗ ಬಯಸುವವರು ಪತ್ರಿಕೆಯ ಮುಖಪುಟದಲ್ಲಿರುವ ಪತ್ರಿಕೆಯ ವಿಳಾಸಕ್ಕೆ ಸಂಪಾದಕರ ಹೆಸರಿನಲ್ಲಿ ಬರೆದ ಚೆಕ್/ಡಿಡಿ ಕಳಿಸಬಹುದು. ಅಥವಾ ಸಂಪಾದಕರು, ಹೊಸ ಮನುಷ್ಯ ಹೆಸರಿನಲ್ಲಿ ಶಿವಮೊಗ್ಗದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಗೀತಾಕೃಪಾ ಶಾಖೆಯಲ್ಲಿರುವ (ifsc code: sbin 0040444) ಚಾಲ್ತಿ ಖಾತೆ ಸಂಖ್ಯೆ 64110358330 ಇಲ್ಲಿಗೆ ನೆಫ್ಟ್ ಮೂಲಕ ಚಂದಾ ಮೊತ್ತವನ್ನು (ರೂ. 170/–) ವರ್ಗಾವಣೆ ಮಾಡಿ <u>(ನಗದು ಕಟ್ಟುವುದು ಮಾತ್ರ ಬೇಡ)</u> 9449242284 ಈ ಸಂಖ್ಯೆಗೆ ಖಚಿತಪಡಿಸಿ ತಮ್ಮ ವಿಳಾಸ ಕಳಿಸಬೇಕು.–ಸಂ.**

ನೋಟ-೩

# ಮನುಷ್ಯನನ್ನು ಪ್ರಕೃತಿಯಿಂದ ಪ್ರತ್ಯೇಕಿಸುತ್ತಿರುವ 'ವಿಜ್ಞಾನ'ವೆಂಬ ಅ-'ಜ್ಞಾನ'

-ಡಿ.ಎಸ್. ನಾಗಭೂಷಣ



**ಮನುಷ್ಯ ಹುಟ್ಟಿರುವುದೇ ಆದಷ್ಟೂ ಸುಖಪಡಲು ಎಂಬ ನಂಬಿಕೆಯ ಮೇಲೆ ನಡೆದಂತಿರುವ ನಮ್ಮ ಅಭಿವೃದ್ಧಿ ಕಥನದ ಹಾದಿಯಲ್ಲಿ ಇತ್ತೀಚೆಗೆ ಒಂದಾದರಮೇಲೊಂದರಂತೆ ನೈಸರ್ಗಿಕ ವಿಪತ್ತುಗಳು ಎರಗಿ ಕಂಗೆಡಿಸುತ್ತಿದ್ದರೂ ಅವನು ಬಹುಬೇಗ ಅದನ್ನು ಮರೆತು ಆ ಕಥನದ ದಾರಿಯಲ್ಲೇ ಮುಂದುವರಿಯುವಂತೆ ಮಾಡಿರುವ ಅವನ ಮರೆವಿಗೆ ಕಾರಣವಾದರೂ ಏನು? ಅವನು ಪೂರ್ತಿ ಲೌಕಿಕನಾಗಿ ಅಸ್ತಿತ್ವದ ಅಧ್ಯಾತ್ಮಿಕತೆಯನ್ನು-ಇರುವ ಎಲ್ಲವನ್ನೂ ಅಖಂಡವಾಗಿ, ಅವಿಭಾಜ್ಯವಾಗಿ ನೋಡುವ ಅರಿವಿನಲ್ಲಿ ಹುಟ್ಟುವ ಬೆರಗನ್ನು- ಕಳೆದುಕೊಂಡು ವಿಜ್ಞಾನ ಪಾರಮ್ಯದ ದಾಸನಾಗಿಬಿಟ್ಟಿರುವುದೇ ಇದಕ್ಕೆ ಕಾರಣವೇ? ಒಂದು ನಿಷ್ಠುರ ಪರೀಶೀಲನೆಯ ಪ್ರಯತ್ನ ಇಲ್ಲಿದೆ.-ಸಂ**

**ಈ**ವರೆಗೆ ನಾಗೇಶ್ ಹೆಗಡೆಯವರು ಮತ್ತು ಎಲ್ಲಪ್ಪ ರೆಡ್ಡಿಯವರು ಮಾತನಾಡಿದ್ದಾರೆ. ಇಬ್ಬರೂ ಕೂಡ ಈವರೆಗೆ ಕೊಡಗಿನಲ್ಲಿ ಏನು ಅನಾಹುತ ಆಗಿದೆ, ಜಲಪ್ರಳಯ ಅಂತ ಏನು ಕರೀತೀವಿ, ಅದು ಯಾಕಾಯ್ತು, ಅದಕ್ಕೆ ಕಾರಣಗಳು ಏನು ಅಂತ ಹೇಳಿದ್ದಾರೆ. ಮತ್ತು ನಾವು ಹೇಗೆ ಇಂತಹ ಅನಾಹುತಗಳು ಮತ್ತೆ ಆಗದಂತೆ ನಮ್ಮ ಜೀವನ ಕ್ರಮಗಳನ್ನು ಜೀವನ ಶೈಲಿಗಳನ್ನು ಬದಲಾವಣೆ ಮಾಡಿಕೊಳ್ಳುವ ಸಾಧ್ಯತೆಗಳು ಯಾವ್ಯಾವು ಅಂತ ಕೂಡ ವಿವರಿಸಿದ್ದಾರೆ. ಅಂದರೆ ಅವರೆಲ್ಲರೂ ಮಾತನಾಡಿರುವುದು ವಿಜ್ಞಾನದ ನೆಲೆಯಲ್ಲಿಯೇ. ಆದರೆ ಈಗ ನಾನು ಮಾತಾಡೋಕೆ ಹೊರಟಿರುವುದು ಬೇರೆನೇ ನೆಲೆಯಲ್ಲಿ.

ಇದಕ್ಕೆ ಕಾರಣ, ಇಂದು ಕೊಡಗು ಮತ್ತು ಕೇರಳದಲ್ಲಿ ಏನಾಗಿದೆ, ಅದೊಂದು ಬಿಡಿ ಘಟನೆ ಅಲ್ಲ. ಕಳೆದ 50 ವರ್ಷಗಳಿಂದ ಜಗತ್ತಿನಾದ್ಯಂತ ಇಂಥ ಘಟನೆಗಳು–ಅನಾಹುತಗಳು ನಡೆಯುತ್ತಲೇ ಬಂದಿವೆ ಮತ್ತು ಇದಕ್ಕೆ ಸಂಬಂಧಪಟ್ಟ ವೈಜ್ಞಾನಿಕ ಸಮೀಕ್ಷೆಗಳು ಮತ್ತು ಎಚ್ಚರಿಕೆಗಳು ಕೂಡ ವಿಜ್ಞಾನ ಪತ್ರಿಕೆಗಳು ಮಾತ್ರವಲ್ಲದೆ ಸಾಮಾನ್ಯ ಪತ್ರಿಕೆಗಳಲ್ಲೂ ಕೂಡ ಬಂದಿವೆ. ಐದು ವರ್ಷಗಳ ಹಿಂದೆ ಉತ್ತರಾಖಂಡದಲ್ಲಿ ಕೇರಳದಲ್ಲಿ ಆದದ್ದಕ್ಕಿಂತ ಹಲವು ಪಟ್ಟು ಹೆಚ್ಚು ಭೀಕರವಾದ ಜಲಪ್ರಳಯ ಆಯ್ತು. ಜಮ್ಮು ಮತ್ತು ಕಾಶ್ಮೀರ ಅತಿ ಸುಂದರ ಪ್ರಕೃತಿಯ ತಾಣ. ಅಲ್ಲಿ ಜಲಪ್ರಳಯವಾಯಿತು. , ಮೇಘ ಸ್ಫೋಟವಾಗಿ ಯಾವುದೋ ಒಂದು ಹಿಮಾಲಯದ ನದಿಯಲ್ಲಿ ಪ್ರವಾಹ ಬಂದು ಹಿಮಾಚಲ ಪ್ರದೇಶದಲ್ಲಿ ಒಂದು ಕಟ್ಟೆ ಒಡೆದು ಹೋಗಿ ಸಾವಿರಾರು ಜನರ ಜೀವನ ಅಸ್ತವ್ಯಸ್ತವಾಯಿತು. ಕಳೆದ ವರ್ಷ ಮಹಾಮಳೆಗೆ ಸಿಕ್ಕಿ ಚೆನ್ನೈ ನಗರವೇ ಮುಳುಗಿ ಹೋಯಿತು. ಮತ್ತೆ ಕರ್ನಾಟಕದಲ್ಲಿ ಕೆಲವೇ ವರ್ಷಗಳ ಹಿಂದೆ ರಾಯಚೂರು, ಕೊಪ್ಪಳ, ಎಲ್ಲೆಲ್ಲಿ ಗಣಿಗಾರಿಕೆ ನಡೆದಿತ್ತಲ್ಲ ಅಲ್ಲಿ ಮಾತ್ರವಲ್ಲದೆ, ಆಶ್ಚರ್ಯ ಅಂತಂದ್ರೆ ಗಣಿಯ ಅದಿರನ್ನು ಹೊನ್ನಾವರದವರೆಗೆ ಸಾಗಿಸುತ್ತಿದ್ದ ದಾರಿಯುದ್ದಕ್ಕೂ ಜಲಪ್ರಳಯ ಆಯಿತು. ಆಗಲೂ ಕೂಡ ಇಂಥ ಹಾಹಾಕಾರ ಎದ್ದಿತ್ತು. ಈಗಲೂ ಕೂಡ ಕೊಡಗು ಮತ್ತು ಕೇರಳದಲ್ಲಿ ಏನಾಗಿದೆ, ಅದರ ಬಗ್ಗೆ ಪತ್ರಿಕೆಗಳಲ್ಲಿ ವರದಿಗಳು ಬರ್ತಾ ಇವೆ. ಊರೂರೇ ಕೊಚ್ಚಿಕೊಂಡು ಹೋಗಿದೆ. ಗುಡ್ಡ ಗುಡ್ಡಗಳೇ ಕೊಚ್ಚಿಕೊಂಡು ಹೋಗಿವೆ. ಗ್ರಾಮ ಗ್ರಾಮಗಳೇ ಕೊಚ್ಚಿಕೊಂಡು ಹೋಗಿವೆ. ಅರ್ಧ ಕೇರಳ–ಉತ್ತರ ಕೇರಳ ನೀರಿನಲ್ಲಿ ಮುಳುಗಿ ಹೋಗಿದೆ. ಮತ್ತು ಅಲ್ಲಿರುವ 120 ಅಣೆಕಟ್ಟುಗಳಲ್ಲಿ ಯಾವುದಾದರೂ ಒಂದೆರಡು ಅಣೆಕಟ್ಟುಗಳು ಒಡೆದುಹೋಗಿದ್ದರೂ ಸರ್ವನಾಶವಾಗುತ್ತಿತ್ತು ಕೇರಳದಲ್ಲಿ. ಇಂಥ ಸಂದರ್ಭದಲ್ಲೂ ಕೂಡ, ಮಡಿಕೇರಿಯಲ್ಲಿ ನಮ್ಮ ಜನಪ್ರತಿನಿಧಿಗಳು, ಕೆ.ಜಿ. ಬೋಪಯ್ಯ ಇರಬಹುದು ಅಥವಾ ಅಪ್ಪಚ್ಚು ರಂಜನ್ ಇರಬಹುದು ಅಥವಾ ನಮ್ಮ ಸಾಗರದ ತಿಮ್ಮಪ್ಪನವರು ಇರಬಹುದು ಇವರೆಲ್ಲರೂ ಕೊಡಗಿನಲ್ಲಿ ಏನಾಗಿದೆಯೋ ಅದಕ್ಕೂ ಅಭಿವೃದ್ಧಿಗೂ ಸಂಬಂಧವೇ ಇಲ್ಲ ಅಂತಾನೆ ಹೇಳ್ತಾರೆ. ಯಾಕೆ? ಯಾಕೆ ಯಾರಿಗೂ ಎದೆಗೆ ಮುಟ್ತಾ ಇಲ್ಲ ಈ ದುರಂತ? ಈ ಅನಾಹುತ ಯಾಕೆ ಯಾರನ್ನೂ ತಟ್ತಾ ಇಲ್ಲ? ಇದು ಒಂದು ದಿವಸ ಬಂದು ಹೋಗುವ ಘಟನೆ ಅಂತ ಯಾಕೆ ಪರಿಗಣಿಸ್ತಿದ್ದಾರೆ? ಇದು ದುರಸ್ತಿ ಕಾಮಗಾರಿಗಳ ಮೂಲಕ ಪರಿಹರಿಸಬಹುದಾದ ಘಟನೆ ಅಂತ ಯಾಕೆ ಪರಿಗಣಿಸ್ತಿದಾರೆ? ಇದೆಲ್ಲ ಸಹಜ, ಆಗ್ತಾ ಇರುತ್ತೆ ಏನೂ ಮಾಡೋಕ್ಕಾಗಲ್ಲ ಇದು ಅಂತ ಯಾಕೆ ಪರಿಗಣಿಸ್ತಿದ್ದಾರೆ?

ಈ ಪ್ರಶ್ನೆಗೆ ನಾನು, ಯಾಕೆ ಹಿಂಗೆ ಆಗ್ತಾ ಇದೆ ಅಂತ ಉತ್ತರ ಹುಡುಕ್ತಾನೇ ಇದೀನಿ. ಮೂವತ್ತು ವರ್ಷಗಳ ಹಿಂದೆ ಮೈಸೂರಲ್ಲಿ ಒಂದು ವಿಶ್ವ ಕನ್ನಡ ಸಮ್ಮೇಳನ ನಡೀತು. ಆಗ ರಾಜ್ಯದಲ್ಲಿ ಬರ ಬಂದಿತ್ತು. ಬರ ಬಂದಿರೋದ್ರಿಂದ ವಿಶ್ವ ಕನ್ನಡ ಸಮ್ಮೇಳನ ಬೇಡ ಅಂತ ಕೆಲ ಎಡಪಂಥೀಯರು, ಪ್ರಗತಿಪರರು ಈ ಸಮ್ಮೇಳನವನ್ನು ಬಹಿಷ್ಕರಿಸಿ ಪ್ರತಿಭಟನೆ ಮಾಡಿದ್ರು. ಆಗ ಶಿವರಾಮ ಕಾರಂತರು ಒಂದು ಪ್ರಶ್ನೆ ಕೇಳಿದರು. "ಬರ ಇದೆ ಅಂದ್ಬಿಟ್ಟು ಮಸಾಲೆ ದೋಸೆ ತಿನ್ನೋದನ್ನು ನಿಲ್ಲಿಸ್ದೀರಾ?" ಅಂತ. ಆ ಪ್ರಶ್ನೆ ಬಹಳ ಮಾರ್ಮಿಕವಾದ ಪ್ರಶ್ನೆ. ಚಂದ್ರಶೇಖರ ಪಾಟೀಲರಂಥವರು ಅವರನ್ನು ಮಸಾಲೆ ದೋಸೆ ಕಾರಂತ ಅಂತ ಕರೆದು ಒಂದಿಷ್ಟು ಅಗ್ಗದ ರಂಜನೆಯನ್ನೂ ಒದಗಿಸಿದರು. ಆದರೆ ಕಾರಂತರ ಈ ಪ್ರಶ್ನೆ ಒಂದು ರೀತಿಯಲ್ಲಿ ನೈತಿಕತೆಯ ಪ್ರಶ್ನೆಯೂ ಆಗಿತ್ತು. ಬರ ಬಂದಿದ್ದರೆ ಬರದ ವಿರುದ್ಧ ಪ್ರತಿಭಟನೆ ಮಾಡುವವರು ಮಸಾಲೆ ದೋಸೆ ತಿನ್ನೋ ಚಪಲವನ್ನು ನಿಯಂತ್ರಿಸಿಕೊಂಡು ತಮ್ಮ ಜೀವನ ಶೈಲಿಯ ರುಚಿ ಅಭಿರುಚಿಗಳನ್ನು ಬದಲಾವಣೆ ಮಾಡಿಕೊಂಡಿದ್ದಾರಾ? ಅನ್ನೋ ಪ್ರಶ್ನೆ ಇದು. ಯಾರೂ ಕೇಳ್ಕೊಳ್ಲಿಲ್ಲ. ಕೇಳ್ಕೊಂಡಿದ್ದರೆ ಮಾತ್ರ ಅವರಿಗೆ ವಿಶ್ವ ಕನ್ನಡ ಸಮ್ಮೇಳನ ಬೇಡ ಅನ್ನುವ ನೈತಿಕತೆ ಇರುತ್ತಿತ್ತು . ಇದು ಕಾರಂತರ ಮಾತಿನ ತಿರುಳಾಗಿತ್ತು. ಈ ಪ್ರತಿಭಟನೆ ಪ್ರತಿಭಟನೆಗಾಗಿ ಮಾತ್ರ ಪ್ರತಿಭಟನೆ ಎಂಬಂತಾಗಿತ್ತು. ಹಾಗೇ ಇಂದು ಪರಿಸರದ ಬಗ್ಗೆ ಮಾತಾಡುವುದು ಒಂದು ಚಪಲ ಆಗಿ ಬಿಟ್ಟಿದೆ. ಅಂದರೆ ಸಂದರ್ಭಕ್ಕೆ ತಕ್ಕ ಹೌದಪ್ಪ ಅನ್ನುಂಥ ಮಾತಾಡ್ತೀವಿ, ಮರೆತೀವಿ, ಮತ್ತೆ ವಾಪಸ್ ನಮ್ಮ ದಿನನಿತ್ಯದ ಅದೇ ಜೀವನಕ್ರಮಕ್ಕೆ ವಾಪಸ್ ಹೋಗ್ತೀವಿ.

ಈ ಕೊಡಗು ಕೇರಳದ ಅನಾಹುತ ಆದ ಮೇಲೆ ನಮ್ಮ ಮುಖ್ಯಮಂತ್ರಿಗಳಾಗಲಿ ಪ್ರಧಾನಮಂತ್ರಿಗಳಾಗಲಿ ಅಥವಾ ನಮ್ಮ ವಿಜ್ಞಾನಿಗಳಾಗಲಿ, ತಂತ್ರಜ್ಞಾನಿಗಳಾಗಲೀ–ಮಾಧವ ಗಾಡ್ಗೀಳ್, ಯಲ್ಲಪ್ಪ ರೆಡ್ಡಿ ಅಂಥವರನ್ನು ಬಿಟ್ಟುಬಿಡಿ ಅಂಥವರು ಅಪರೂಪ–ಈ ಬಗ್ಗೆ ಒಂದು ಚಿಂತನಾರ್ಹ ಮಾತಾಡಿದ್ದಾರಾ? ಉದಾಹರಣೆಗೆ, ನಮ್ಮ ಮುಖ್ಯಮಂತ್ರಿ ಕುಮಾರಸ್ವಾಮಿಯವರು, ಕರ್ನಾಟಕದ ನಮ್ಮ ಅಭಿವೃದ್ಧಿ ಯೋಜನೆಗಳನ್ನು ಪುನರ್ವಿಮರ್ಶೆ ಮಾಡ್ತೀವಿ ಅಂತ ಏನಾದ್ರೂ ಹೇಳಿದ್ದಾರಾ? ನಾನವರನ್ನು ಸುಮ್ಮನೆ ಟೀಕಿಸೋದಕ್ಕೆ ಈ ಮಾತಾಡ್ತಾ ಇಲ್ಲ. ಯಾಕೆ ನಮ್ಮ ಪ್ರಜ್ಞೆಯ ಒಳಗಡೆ ಅದು–ಈ ಮಹಾ ಮಾನವ ದುರಂತ– ಬಂದು ಸೇರಿಲ್ಲ? ಯಾಕೆ ನಮಗೆ ಸೂಕ್ತವಾಗಿ ಪ್ರತಿಕ್ರಿಯಿಸುವಂತೆ ಪ್ರಜ್ಞೆ ನಮ್ಮಲ್ಲಿ ಹುಟ್ಟಿಲ್ಲ ಅನ್ನೋದು ಪ್ರಶ್ನೆ.

ಇದಕ್ಕೆ ನಾನು ಕಂಡುಕೊಂಡಿರುವಂತಹ, ಸ್ವಲ್ಪ ನಿಮ್ಮೆಲ್ಲರಿಗೂ ಕಸಿವಿಸಿಯಾಗುವಂಥ, ಯಲ್ಲಪ್ಪ ರೆಡ್ಡಿ ಅಥವಾ ನಾಗೇಶ್ ಹೆಗಡೆಯವರಿಗೂ ಕೂಡ ಮುಜುಗರವಾಗುವಂಥ, ಒಂದು ಉತ್ತರ ನನಗೆ ಸಿಕ್ಕಿದೆ. ಅದೇನೆಂದರೆ ನಾವು ವಿಜ್ಞಾನ ಪಾರಮ್ಯವನ್ನು ಒಪ್ಪಿಕೊಂಡು ಬಿಟ್ಟಿದ್ದೇವೆ. ಧರ್ಮದ ಜಾಗದಲ್ಲಿ ವಿಜ್ಞಾನ ಬಂದು ಕೂತುಬಿಟ್ಟಿದೆ. ವಿಜ್ಞಾನವೇ ಪರಮ ಧರ್ಮ ಅಂತ ತಿಳ್ಕೊಂಡು ಬಿಟ್ಟಿದ್ದೇವೆ ನಾವು. ವಿಜ್ಞಾನವೇ ಪರಮ ಧರ್ಮ ಅಂತ ತಿಳ್ಕೊಂಡು ವಿಜ್ಞಾನದ ಉಪ ಉತ್ಪತ್ತಿಯಾದಂಥ ತಂತ್ರಜ್ಞಾನವನ್ನಾಧರಿಸಿದ ಬದುಕೇ ಶ್ರೇಷ್ಠ ಅಂದುಕೊಂಡು ಬಿಟ್ಟಿದ್ದೇವೆ ನಾವೆಲ್ಲ. ವಿಜ್ಞಾನಕ್ಕೆ ಕೂಡ ಮಿತಿ ಇದೆ, ವಿಜ್ಞಾನವನ್ನೇ ಏಕಮೇವಾದ್ವಿತೀಯವೆಂದು ಅನುಸರಿಸಿಕೊಂಡು ಹೋದರೆ ಅನಾಹುತ ತಪ್ಪಿದ್ದಲ್ಲ.

ವಿಜ್ಞಾನ ಅಂದ್ರೆ ತಂತ್ರಜ್ಞಾನದ ರೂಪದಲ್ಲಿ ನಾನು ಹೇಳ್ತಾ ಇರೋದು. ವಿಜ್ಞಾನ ಒಂದು ಪರಮ ಜ್ಞಾನವಲ್ಲ, ಅದು ಸಮಗ್ರ ಜ್ಞಾನವಲ್ಲ, ಅದು ಜಡವಸ್ತು ಅಥವಾ ಯಾವುದನ್ನೇ ಆಗಲಿ ಅದರ ನಿಶ್ಚಲ ಸ್ಥಿತಿಯಲ್ಲಿ ಅಧ್ಯಯನ ಮಾಡೋದಕ್ಕೆ ಸಂಬಂಧಪಟ್ಟದ್ದು ಮಾತ್ರ. ಅದು ಅಳತೆಗೆ ಸಿಗುವಂತಹ ವಸ್ತುಗಳ ಅಧ್ಯಯನಕ್ಕೆ ಮಾತ್ರ ಸೀಮಿತವಾದಂಥ ಜ್ಞಾನ. ವಿಜ್ಞಾನ ಅಂದರೆ ನಾವೇನ್ ಅಂದುಕೊಂಡುಬಿಟ್ಟಿದ್ದೇವೆ, ಅದೇ ಪರಮಜ್ಞಾನ, ಅದನ್ನು ಚಾಲೆಂಜ್ ಮಾಡೋ ಹಾಗೆ ಇಲ್ಲ ಅಂತ. ಆ ಕಾರಣದಿಂದಾಗಿ ನಾವು ವಿಜ್ಞಾನ ಯುಗದಲ್ಲಿ ವಿಜ್ಞಾನ ಕಲ್ಪಿಸಿದಂಥ ಆಲೋಚನಾ ಮಾದರಿಗಳನ್ನು ನಂಬಿಕೊಂಡು

ಮುಂದುವರೆಯುತ್ತಿದ್ದೇವೆ. ಇದೆಲ್ಲ ನಮ್ಮ ಎದೆಯೊಳಗೆ ಕಲ್ಲಿನ ಥರ ಕೂತ್ಕೊಂಡು ಬಿಟ್ಟಿದೆ. ಆದ್ದರಿಂದಲೇ ಇಂಥ ಅನಾಹುತಗಳು ಆದಾಗಲೂ ಕೂಡ ನಾವು ಮೂಲಭೂತವಾಗಿ ಯೋಚನೆ ಮಾಡಕ್ಕೆ ಸಾಧ್ಯ ಇಲ್ಲ. ನಮ್ಮ ಎಲ್ಲಾ ಒಳಗಿನ ಏನು ಕಲ್ಪನೆಗಳಿವೆ, ನಂಬಿಕೆಗಳಿವೆ, ಅವನ್ನ ಸಂದರ್ಭಕ್ಕೆ ತಕ್ಕಂತೆ ತಿದ್ದಿಕೊಂಡು, ಪರಿಷ್ಕರಿಸಿಕೊಂಡು ಅಥವಾ ಅದನ್ನ ಜೀರ್ಣಿಸಿಕೊಂಡು ಬೇರೆ ರೀತಿ ಆಲೋಚನೆ ಮಾಡೋ ಶಕ್ತಿ ನಮ್ಮಲ್ಲಿ ಕುಂದುಹೋಗಿದೆ.

ಒಬ್ಬ ಗಾಂಧಿವಾದಿ ಇದ್ರು. ಸ್ಮಾಲ್ ಇಸ್ ಬ್ಯೂಟಿಫುಲ್ ಅನ್ನುವ ಒಂದು ಪರಿಕಲ್ಪನೆ ಕೊಟ್ಟವರು, ಶೂಮಾಕರ್ ಅಂತ ಜರ್ಮನ್ ಅರ್ಥಶಾಸ್ತ್ರಜ್ಞ. ಅವರು ಸುಮಾರು ನಲವತ್ತು ಐವತ್ತು ವರ್ಷಗಳ ಹಿಂದೆ ವಾರಣಾಸಿಯ ಗಾಂಧಿ ಸಂಶೋಧನಾ ಕೇಂದ್ರಕ್ಕೆ ಬಂದಿದ್ದರು. ಅಲ್ಲಿ ಅವರು ಭಾಷಣ ಶುರು ಮಾಡಿದ್ದು ಈ ಒಂದು ವಾಕ್ಯದೊಂದಿಗೆ : 'ನಮ್ಮ ಪುರಾತನರು ಏನಾದರೂ ವಾಪಸ್ ಈ ಭೂಮಿಗೆ ಬಂದು, ನಮ್ಮ ದಂತ ಚಿಕಿತ್ಸಾಲಯಕ್ಕೆ ಭೇಟಿ ನೀಡಿದರೆ, ಅವರು ನೋಡಿ ಆಶ್ಚರ್ಯ ಪಡುವುದು, "ಆಹಾ! ನನ್ನ ಮಕ್ಕಳು ಮೊಮ್ಮಕ್ಕಳು ದಂತ ಚಿಕಿತ್ಸೆಗೆ ಎಂತೆಂಥ ಸೂಕ್ಷ್ಮ ಉಪಕರಣಗಳನ್ನು. ಯಂತ್ರಗಳನ್ನು ಮದ್ದುಗಳನ್ನು ಕಂಡುಹಿಡಿದುಬಿಟ್ಟಿದ್ದಾರೆ!" ಅಂತಾನೋ ಅಥವಾ "ನನ್ನ ಮಕ್ಕಳು, ಮೊಮ್ಮಕ್ಕಳ ಹಲ್ಲುಗಳು ಯಾಕಿಷ್ಟು ಹಾಳಾಗಿವೆ?" ಅಂತಲೋ? ಅಂದರೆ, ವಿಜ್ಞಾನ ಏನು ಮಾಡಿದೆ ಅಂದರೆ, ನಮ್ಮ ಹಲ್ಲುಗಳನ್ನು ಹಾಳು ಮಾಡ್ತಾ ಇದೆ. ಜೊತೆಗೆ ನಮ್ಮ ಹಲ್ಲುಗಳನ್ನು ಸರಿ ಮಾಡುವಂಥ ಬೆರಗುಗಳನ್ನು ಸೃಷ್ಟಿ ಮಾಡ್ತಾ ಇದೆ. ಅಂದರೆ ಅದು ತಂತ್ರಜ್ಞಾನದ ಉತ್ಪನ್ನಗಳ ಮೂಲಕ ಒಂದು ಕಡೆಯಿಂದ ಮನುಷ್ಯನ ಆರೋಗ್ಯವನ್ನು ಹಾಳು ಮಾಡ್ತಾ ಇನ್ನೊಂದು ಕಡೆಯಿಂದ ಅದಕ್ಕೆ ಪರಿಹಾರ ಒದಗಿಸುವ ಭವ್ಯ ನಾಟಕ ಆಡ್ತಾ ಇದೆ. ಆದರೆ ಒಂದು ಮಾತು: ವಿಜ್ಞಾನವೇನೂ ನಮಗೆ ಹೊಸದಲ್ಲ. ಪರಂಪರಾಗತ ವಿಜ್ಞಾನ ಇದ್ದೇ ಇತ್ತು. ಆದರೆ ಇದು ಆಧುನಿಕ ವಿಜ್ಞಾನ. ಈ ಆಧುನಿಕ ವಿಜ್ಞಾನ ಹೇಗೆ ಬಂತು ಅಂತ ಆಮೇಲೆ ಹೇಳ್ತೀನಿ.

ಈ ವಿಜ್ಞಾನದ ಹಿಂದೆ ಇರುವಂಥಾದ್ದು ಆಧುನಿಕ ಅರ್ಥಶಾಸ್ತ್ರ. ಈ ಆಧುನಿಕ ಅರ್ಥಶಾಸ್ತ್ರ ಅಂದ್ರೆ ಏನು ಅಂತಂದ್ರೆ, ಆರ್ಥಿಕ ಚಕ್ರ ತಿರುಗ್ತಾನೇ ಇರಬೇಕು ಸದಾ. ಮನುಷ್ಯನ ಅಗತ್ಯಗಳು ಹೆಚ್ಚುತ್ತಲೇ ಇರಬೇಕು. ಹೆಚ್ತಾ ಇದ್ದಂಗೆ ಅದನ್ನ ಪೂರೈಸೋದಕ್ಕೋಸ್ಕರ ವಸ್ತುಗಳನ್ನ ನಿರ್ಮಾಣ ಮಾಡ್ತಾನೇ ಇರ್ಬೇಕು. ಅಂದ್ರೆ ನಿರಂತರ ಈ ಆರ್ಥಿಕ ಚಕ್ರ, Economic cycle, ತಿರಗ್ತಾನೇ ಇರಬೇಕು. ಅದಕ್ಕೆ ಬೇಕಾಗಿರೋ ಆಹಾರ ಕೊಡ್ತಾನೇ ಇರ್ಬೇಕು. ಅದೆಲ್ಲಿಂದ ಬರುತ್ತೆ? ಅದೆಲ್ಲವೂ ಈ ನಿಸರ್ಗದಿಂದಲೇ–ಈ ಭೂಮಿ–ಆಕಾಶ–ನೀರು–ಗಾಳಿಗಳಿಂದಲೇ–ಬರಬೇಕು. ಇಂತಹ ಆಧುನಿಕ ಅರ್ಥಶಾಸ್ತ್ರ ಮತ್ತು ಆಧುನಿಕ ವಿಜ್ಞಾನವನ್ನು ನಂಬಿ ಈ ನಮ್ಮ ಬದುಕು ನಡಿತಾ ಇದೆ.

ಈ ವಿಜ್ಞಾನದ ಪರಿಮಿತಿ ಏನು ಅಂತ ಹೇಳ್ತೀನಿ. ಈ ಆಧುನಿಕ ವಿಜ್ಞಾನ ಅಂತ ಆರಂಭವಾದದ್ದು, ೧೩–೧೪ ನೇ ಶತಮಾನದಲ್ಲಿ. ಏನು ಯೂರೋಪಿನಲ್ಲಿ ಸಂಭವಿಸಿತು–ರೆನ್ನೈಸಾನ್ಸ್ ಅಥವಾ ಪುನರುಜ್ಜೀವನ ಅಂತ ಏನು ಕರೀತೀವಿ ಆ ಯುಗದಲ್ಲಿ. ಅದನ್ನ ಜ್ಞಾನ ಯುಗ ಅಂತಲೂ ಕರೀತೀವಿ. ನನ್ನ ಪ್ರಕಾರ ಅದು ಒಂದು ರೀತಿಯಲ್ಲಿ ಅಜ್ಞಾನ ಯುಗ. ಯಾಕೆಂದರೆ, ಅದು ಜ್ಞಾನದ ಸ್ಥಾನದಲ್ಲಿ ವಿಜ್ಞಾನವನ್ನು ತಂದು ಕೂರಿಸಿಬಿಟ್ಟಿತು. ನಿಜ, ಆಗ ಪ್ರಧಾನವಾಗಿ ಧರ್ಮ ನಮ್ಮನ್ನು ಆಳ್ತಾ ಇತ್ತು. ಆದರೆ ಆ ಧರ್ಮ ಮತಾಚಾರಗಳಾಗಿ ಮೌಢ್ಯಗಳ ಆಗರವಾಗಿತ್ತು. ಧರ್ಮಾಧಿಕಾರದ ಕ್ರೌರ್ಯ ಮಿತಿ ಮೀರಿತ್ತು. ಧರ್ಮಾಧಿಪತಿಗಳು ಏನು ಹೇಳುತ್ತಾರೋ ಅದು ನಡಿತಾ ಇತ್ತು. ಅದಕ್ಕೆ ಪ್ರತಿಕ್ರಿಯಿಸುತ್ತಾ, ಜನಪರತೆಯ ಉಬ್ಬರ–ಅಬ್ಬರಗಳಲ್ಲಿ ವಿಜ್ಞಾನ ಆ ಜಾಗವನ್ನು ಆಕ್ರಮಿಸಿಕೊಂಡುಬಿಟ್ಟಿತು. ಆಧುನಿಕ ವಿಜ್ಞಾನ. ಅಂದ್ರೆ ಈ ನ್ಯೂಟನ್‌ನ ಚಲನಶಾಸ್ತ್ರ, ಅಂದರೆ ನ್ಯೂಟೋನಿಯನ್ ಮೆಕ್ಯಾನಿಕ್ಸ್ ಶುರುವಾಯಿತಲ್ಲಾ, ಅದು ಮನುಷ್ಯ ಈ ಜಗತ್ತನ್ನು ಅರ್ಥ ಮಾಡಿಕೊಳ್ಳಬಲ್ಲ,  ಅ ಈ ವಸ್ತುಗಳು ಯಾಕೆ ಚಲಿಸುತ್ತಿವೆ? ಆ ಚಲನೆಯ ದಿಕ್ಕಿಗೆ, ವೇಗಗಳಿಗೆ ಏನು ಕಾರಣ? ಇವೆಲ್ಲವನ್ನೂ ಅರಿಯುವಂಥ ಸೂತ್ರಗಳನ್ನು, ನಿಯಮಗಳನ್ನ ಕಂಡು ಹಿಡಿದುಕೊಂಡು ಬಿಟ್ಟಿದ್ದೇನೆ–ಅಂತ, ಅದು ಇಡೀ ಸೃಷ್ಟಿಯನ್ನು ಗುರುತ್ವಾಕರ್ಷಣೆಯ ಬಲದ ಪರಿಭಾಷೆಯಲ್ಲಿ ಒಂದು ಭೌತ ಪ್ರಪಂಚವನ್ನಾಗಿ ವ್ಯಾಖ್ಯಾನಿಸಿದ. ಆನಂತರ ಲ್ಯಾಪ್ಲಾಸ್ ಬಂದ. ಅವನು ಆಕಾಶಕಾಯಗಳ ಚಲನೆಯ ಸೂತ್ರವನ್ನು ಕಂಡುಹಿಡಿದ. ಡಾರ್ವಿನ್ ಬಂದು ಪಳಯುಳಿಕೆಗಳ ಅಧ್ಯಯನ ಮಾಡಿ ಜೀವ ವಿಕಾಸವಾದವನ್ನು ಮಂಡಿಸಿ ಜೀವ ಎಂಬುದನ್ನು ಭೌತ ಪ್ರಪಂಚದ ಚೌಕಟ್ಟಿಗೆ–ಅದರ ತರ್ಕ ಮತ್ತು ನಿಯಮಗಳ ವ್ಯಾಪ್ತಿಯಲ್ಲಿ ಅಳವಡಿಸಿದ. ಮುಂದೆ ಐನ್‌ಸ್ಟೀನ್ ಬಂದ. ಅವನು ಕಂಡುಹಿಡಿದ ಸಾಪೇಕ್ಷತಾ ತತ್ವವು ಭೌತ ಪ್ರಪಂಚವನ್ನು ಆಧುನಿಕ ವಿಜ್ಞಾನ ರಚಿಸಿಕೊಂಡ ಬಗೆಯನ್ನು ಅನುಮಾನಾಸ್ಪದಗೊಳಿಸಿ ಸಾರಾಂಶ ರೂಪದಲ್ಲೆಂಬಂತೆ. ಅಂತೂ ಆತ ಧರ್ಮ–ವಿಜ್ಞಾನಗಳ ಸಮನ್ವಯದ ಮಾತನಾಡಿದನಾದರೂ, ಭೌತವೆಂಬುದರ ಪುರ್ನವ್ಯಾಖ್ಯಾನವನ್ನೇನೂ ಮಾಡಲಿಲ್ಲ ಅದೇನೇ ಇರಲಿ,  ಆ ಹೊತ್ತಿಗೆ ಆಧುನಿಕ ಭೌತ ವಿಜ್ಞಾನ ಮನುಷ್ಯನನ್ನು ಎಷ್ಟು ಬೆರಗುಗೊಳಿಸಿ ತನ್ನ ತಂತ್ರಜ್ಞಾನದ ರೂಪದಲ್ಲಿ ಒಂದು ಉದ್ಯಮವಾಗಿ ಬೆಳೆದು ಅವನ ಸುಖದ ಕಲ್ಪನೆಯನ್ನು ಹೇಗೆ ಉಬ್ಬಿಸಿತ್ತೆಂದರೆ ಈ ಸೃಷ್ಟಿ ಭೌತಮಾತ್ರವಾಗಿ ಕಾಣತೊಡಗಿ ಮನುಷ್ಯ ಅದರ ಒಡೆಯನಾಗಿ ಕಾಣತೊಡಗಿದ್ದ. ಹೀಗೆ ಈ ಆಧುನಿಕ ವಿಜ್ಞಾನ ಬೆಳೆದು, ಈ ಜಗತ್ತಿನ ಸೃಷ್ಟಿ ರಹಸ್ಯವನ್ನು ಅರಿಯಬಲ್ಲೆ, ಇದರ ಮೇಲೆ ನಾನು ಪ್ರಭುತ್ವವನ್ನು ಸಾಧಿಸಬಲ್ಲೆ, ನಾನು ಇಡೀ ಸೃಷ್ಟಿಯನ್ನು ಪುನರ್‌ರೂಪಿಸಬಲ್ಲೆ ಅಂತ ಅವನಿಗೆ ಅನ್ನಿಸತೊಡಗಿತ್ತು. ಇದೆಲ್ಲ ದೇವರ ಸೃಷ್ಟಿ, ಅವನ ಲೀಲೆ ಅಂತ ನಾವೇನು ತಿಳಿದುಕೊಂಡಿದ್ವಲ್ಲ, ಆ ದೇವರ ಜಾಗಕ್ಕೆ ವಿಜ್ಞಾನ, ಅದರ ಲೀಲೆ ಬಂತು. ಬಂದು, ಜಗತ್ತನ್ನು ತನ್ನಿಷ್ಟಬಂದಂತೆ ಪುನರ್ರೂಪಿಸಬಹುದು, ಹಾಗೆ ರೂಪಿಸಬಹುದಾದಂಥ ಜ್ಞಾನ ನನ್ನಲ್ಲಿದೆ ಎನಿಸುವಂತೆ ಮಾಡಿತು.

ಸೈನ್ಸ್‌ನ್ನು ವಿಜ್ಞಾನ ಅಂತ ಕರೀತೀವಿ. ಭಾರತೀಯ ಪರಿಭಾಷೆಯಲ್ಲಿ, 'ವಿ' ಅಂದ್ರೆ ವಿಗ್ರಹ ಜ್ಞಾನ ಸೂಚಕ. ಅದು ಒಡೆದು ನೋಡುವ ಜ್ಞಾನ. ಒಡೆದು, ಒಡೆದು, ಒಡೆದು ನೋಡೋದು. ವಿ–ಶ್ಲೇಷಣೆ ಅದು. ಅನಲಿಸಿಸ್. ಅದಕ್ಕಿಂತ ಮುಂಚೆ ನಮ್ಮಲ್ಲೇನಿತ್ತು? ಸಂಶ್ಲೇಷಣ ಜ್ಞಾನ ಇತ್ತು. ಎಲ್ಲವನ್ನೂ ಒಟ್ಟಿಗೆ ನೋಡುವುದು. ಇಡೀ ಸೃಷ್ಟಿ ಒಂದು, ಅದರ ಭಾಗವಾಗಿ ನಾವು ಅಂತ ಯೋಚನೆ ಮಾಡ್ತಾ ಇದ್ವಿ. ಅದರಿಂದಲೇ ನಮ್ಮ ಪುರಾತನರು ಮರಗಿಡಗಳನ್ನು, ಪಕ್ಷಿ ಪ್ರಾಣಿಗಳನ್ನು, ಬಂಡೆಗಳನ್ನು, ಜಲಪಾತಗಳನ್ನು ಪೂಜೆ ಮಾಡ್ತಾ ಇದ್ದರು. ಇಡೀ ಒಂದು ಸೃಷ್ಟಿಯ ಭಾಗ ಮಾತ್ರ ನಾನು ಅನ್ನೋ ವಿನಯ ನಮ್ಮಲ್ಲಿತ್ತು. ಅದನ್ನು ಅಧ್ಯಾತ್ಮ ಅಂತ ಕರೆಯುತ್ತೇವೆ. ಅಧ್ಯಾತ್ಮದ ಬಗ್ಗೆ ಇಂದು ಕೆಟ್ಟ ವಿವರಣೆಗಳು ಬಂದುಬಿಟ್ಟಿವೆ. ಅಂದ್ರೆ ಬಹಳ ಸುಳ್ಳುಪಳ್ಳು ಗುರುಗಳು ಸೃಷ್ಟಿಯಾಗಿ ಬಿಟ್ಟಿದ್ದಾರೆ. ಆದರೆ ಅಧ್ಯಾತ್ಮ ಅಂದರೆ ಮತ್ತೇನೂ ಅಲ್ಲ. ಅದು ದೇವರು ಧರ್ಮಕ್ಕೆ ಸಂಬಂಧಪಟ್ಟ ವಿಷಯ ಅಲ್ಲ. ಅದು ಎಲ್ಲವನ್ನೂ ಸಮಗ್ರವಾಗಿ ನೋಡುವಂತಹ ಒಂದು ದೃಷ್ಟಿಕೋನ. ಸಮ್ಯಕ್ ಜ್ಞಾನದೃಷ್ಟಿ ಅದು. ನಾವ್ಯಾರೂ ಒಂಟಿಯಲ್ಲ, ನಾವೆಲ್ಲರೂ ಇನ್ನೊಬ್ಬರ ಜೊತೆಯಲ್ಲಿ ಇರ್ತಕ್ಕಂಥವರು. ಇನ್ನೊಬ್ಬರ ಜೊತೆಯಲ್ಲಿ ಮಾತ್ರ ಅಲ್ಲ, ಇನ್ನೊಂದರ ಜೊತೆಯಲ್ಲಿ. ಅದು ಬಂಡೆ ಇರಬಹುದು, ನದಿ ಇರಬಹುದು, ಕ್ರಿಮಿಕೀಟ ಪಕ್ಷಿಗಳು ಇರಬಹುದು, ಇವೆಲ್ಲವೂ ಒಂದು ಸಂಕುಲ.  ಈ ಸಂಕುಲದ ಭಾಗವಾಗಿ ನಾವಿರಬೇಕು ಅನ್ನುವ ಭಾವನೆ, ನಂಬಿಕೆ ಅದು.

ಒಂದು ಉದಾಹರಣೆ ಕೊಡ್ತೀನಿ ನಿಮಗೆ. ಈ ಆಧುನಿಕ ವಿಜ್ಞಾನದ ಭಾಗವಾಗಿ ಜೀವ ವಿಕಾಸವಾದ ಅಂತ ಒಂದು ಸಿದ್ಧಾಂತ ಬಂತು ಅಂತ ಆಗಲೇ ಹೇಳೀದೆನಲ್ಲ Darwinian evolution theory ಅಂತ. ಅದೇನು ಹೇಳ್ತು, ಮಂಗನಿಂದ ಮಾನವ ಅಂತು. ಈ ವಾದದ ಪ್ರಕಾರವೇ ಮಂಗ ಯಾವಾಗ ಬಂದಿದ್ದು ವಿಕಾಸದಲ್ಲಿ? ಎಷ್ಟೋ ಸಾವಿರ ಸಾವಿರ ವರ್ಷಗಳಾದ ಮೇಲೆ. ನಿಜವಾದ ಸತ್ಯ ಏನು ಅಂದ್ರೆ ಮರದಿಂದ ಮಾನವ. ಮರ ಹುಟ್ಟಿದ್ದಕ್ಕೆ ಮಾನವ ಬಂದದ್ದು, ಮಂಗನಿಂದ ಅಲ್ಲ. ಇನ್ನೂ ಹಿಂದಕ್ಕೆ ಹೋಗಬೇಕು ನಾವು. ಏಕಕೋಶದ ಅಮೀಬಾಗೆ ಹೋಗಬೇಕು. ಅದೆಲ್ಲದರಿಂದ ನಾವು ಹುಟ್ಟಿ ಬಂದಿರುವುದು. ಅದೆಲ್ಲದರ ಜೊತೇಲೇ ನಾವು ಇರೋದಕ್ಕೆ ಸಾಧ್ಯ. ನಮ್ಮ ನೆರೆಹೊರೆ ಇರೋದ್ರಿಂದಾನೇ ನಾವು ಇರೋದಕ್ಕೆ ಸಾಧ್ಯ. ನೆರೆಹೊರೆ ಅಂದ್ರೆ ಸುತ್ತಮುತ್ತಲಿನ ಜನ ಅಷ್ಟೇ ಅಲ್ಲ. ಪ್ರಾಣಿ, ಪಕ್ಷಿ, ಗಾಳಿ, ನೀರು, ಪರ್ವತ ಎಲ್ಲವೂ ಸೇರಿ. ಅಂದರೆ ಪರಿಸರ.

ಛತ್ತೀಸ್‌ಗಢವನ್ನ ಒಂದು ದೊಡ್ಡ ನಕ್ಸಲರ ತಾಣ ಅಂತ ಕರೆಯುತ್ತಾರೆ. ಯಾರನ್ನ ನಾವು ನಕ್ಸಲೈಟ್ ಅಂತ ಕರೀತೀವಿ? ಅವರು ಯಾಕೆ ನಕ್ಸಲೈಟ್, ಅಂದ್ರೆ ಬದುಕುವ ದಾರಿಯಲ್ಲಿ ಹಿಂಸೆ ನಿಷಿದ್ಧವಲ್ಲ ಅಂತ ನಂಬುವ ಹಾಗೆ ಆದ್ರು? ಅಂತ ನಾವು ಯೋಚನೆ ಮಾಡಲ್ಲ. ಆದರೆ ಆ ಆದಿವಾಸಿ ಜನ ಎಂಥ ಅದ್ಭುತವಾದ ಜನ ಅಂದರೆ, ಅವರು ಜಲಪಾತಗಳನ್ನು ಪೂಜೆ ಮಾಡ್ತಾರೆ. ಗುಡ್ಡಗಳನ್ನು ಪೂಜೆ ಮಾಡ್ತಾರೆ. ಅದನ್ನ ನಾವು ಮೌಢ್ಯ ಅಂತ ಕರೆಯುತ್ತೇವೆ. ನಾಸ್ತಿಕತೆಯ ಹೆಮ್ಮೆಯಲ್ಲಿ ಧರ್ಮವನ್ನು ಬೈಬೇಕಾದರೆ ಅವರು ಕೋತಿಗಳನ್ನು ಪಕ್ಷಿಗಳನ್ನು ಬಂಡೆಗಳನ್ನು ಪೂಜೆ ಮಾಡುವಂತ ಧರ್ಮ ಅಂತ ಹೀಯಾಳಿಸ್ತೀವಿ. ಹಾಗೆ ಹೀಯಾಳಿಸೋದಕ್ಕೆ ಕಾರಣ ಇದೆ. ಯಾಕೆಂದರೆ ಯಾವ ಕಾರಣಕ್ಕೆ ಪೂಜೆ ಮಾಡ್ತಿದ್ದಾರೆ ಇವನ್ನೆಲ್ಲ ಅಂತ ನಮಗೆ ಗೊತ್ತಿರಲಿಲ್ಲ. ಯಾಕೇಂದ್ರೆ ನಮ್ಮ ಪ್ರಜ್ಞೆಯಲ್ಲಿ ಕಲ್ಲಿನಂತೆ ಬಂದು ಕೂತ ಆಧುನಿಕ ವಿಜ್ಞಾನದ ವಿಶ್ಲೇಷಣಾ ತರ್ಕಕ್ಕೆ ಈ ತಿಳುವಳಿಕೆ ಸಾಧ್ಯವಿಲ್ಲ. ಆದರೆ ಆ ಜನಕ್ಕೆ ಗೊತ್ತಿದೆ. ಆದಿವಾಸಿಗಳು ಅಂದರೆ ನಮ್ಮ ಪುರಾತನರು. ಅವರಲ್ಲೊಬ್ಬ ಮುದುಕನನ್ನ "ಜಲಪಾತವನ್ನು ಯಾಕೆ ಪೂಜೆ ಮಾಡ್ತೀಯಪ್ಪ ನೀನು?" ಅಂತ ಯಾರೋ ಕೇಳಿದರು. ಈ ಗಣಿಗಾರಿಕೆ ಬಂದು ಜಲಪಾತ

ಯುವಲಹರಿ

ನೋಟ–೪

# ಮಲೆನಾಡು ಬದಲಾಗುತ್ತಿದೆ : ಏಕೆ, ಹೇಗೆ?

–ರೇಷ್ಮಾ ಸುಧೀರ್

**ಹೇ**ಗಿತ್ತು ನಮ್ಮ ಮಲೆನಾಡು? ಸೋನೆಯಿಂದ ಶುರುವಾದ ಜಿಟಿಪಿಟಿ ಮಳೆ. ಆಷಾಡದ ಭೋರ್ಗರೆವ ಗಾಳಿಯ ಜೊತೆ ಧೋ ಎಂದು ಒಂದೇ ಉಸಿರಿನಲ್ಲಿ ರಚ್ಚೆ ಹಿಡಿದ ಮಗುವಿನಂತೆ ಸುರಿವ ಬಿರುಮಳೆಯಲ್ಲಿ ಗದ್ದೆ ಕೆಲಸಕ್ಕೆ ಹೊರಡುತ್ತಿದ್ದ ಧಾವಂತ ರೈತರದ್ದಾಗಿತ್ತು. ಅದ್ಯಾವಾಗ ಬದಲಾಯಿತೋ ಮಳೆಯ ಪಥ, ಒಂದೋ ಅತಿವೃಷ್ಟಿ ಇಲ್ಲಾ ಅನಾವೃಷ್ಟಿ. ಏನೇ ಆದರೂ ತಲೆಯ ಮೇಲೆ ಒಂದು ಸೂರಿತ್ತು, ಉಳಲು ಗದ್ದೆಯಿತ್ತು, ಕೃಷಿಗೆ ತೋಟವಿತ್ತು, ಎದೆಯಲ್ಲಿ ಧೈರ್ಯವಿತ್ತು. ಆದರೆ... ಇವೆಲ್ಲಾ ಕಣ್ಣ ಮುಂದೆಯೆ ಕೊಚ್ಚಿ ಹೋದಾಗ...

ಮಲೆನಾಡು, ಅದರಲ್ಲೂ ಕಾಫಿನಾಡು ಆರು ತಿಂಗಳ ಹಿಂದೆ ಸುರಿದ ಮಳೆಗೆ ಅಕ್ಷರಶಃ ನಲುಗಿಹೋಗಿದ್ದು ಇತಿಹಾಸ. ಕಾರಣಗಳು ಅನೇಕಾನೇಕ. ಅದರ ವಿಶ್ಲೇಷಣೆಯಾಗಲೀ ಪರಿಹಾರ ಮಾರ್ಗೋಪಾಯಗಳ ಬಗ್ಗೆಯಾಗಲೀ ಬರೆಯುವುದು ನಿಜಕ್ಕೂ ಅಪ್ರಸ್ತುತ ಎಂದೇ ನನ್ನ ಭಾವನೆ. ಇತ್ತೀಚೆಗೆ ಸುರಿದು ಹೋದ ಮಳೆಗಿಂತ ಎಷ್ಟೋಪಾಲು ಮಳೆ ಹಿಂದೆಯೂ ಸುರಿದಿತ್ತು. ಇಂದೂ ಕೂಡ ಮಲೆನಾಡಿನ ಕೆಲವು ಭಾಗಗಳು ಅಂತಹ ಮಹಾಮಳೆಯನ್ನು ಎದುರಿಸುತ್ತಿವೆ. ಆದರೆ ಕೊಡಗಿನಲ್ಲಿ ಸಂಭವಿಸಿದ ದುರಂತಕ್ಕೆ ಕಾರಣ? ಅಭಿವೃದ್ಧಿಯೇ? ದುರಾಸೆಯೇ? ಅಥವಾ ಬದುಕು ಕಟ್ಟಿಕೊಳ್ಳಲು ಒಂದು ದಾರಿ ಹುಡುಕಿದ್ದೇ ಮಾರಕವೇ?

ಇಂದಿನ ದಿನಮಾನಗಳಲ್ಲಿ ಕೃಷಿ ಒಂದು ಸಾಧನೆ ಎಂದೇ ನನ್ನ ಭಾವನೆ. ಏಕೆಂದರೆ ಕೆಲಸಕ್ಕೆ ಕಾರ್ಮಿಕರು ಸಿಗದ, ಸಿಕ್ಕರೂ ಅಪಾರ ಕೂಲಿಯನ್ನು ಅಪೇಕ್ಷೆ ಪಡುವ, ಇದರ ಜೊತೆಗೆ ಗಾಯದ ಮೇಲೆ ಬರೆ ಎಳೆದಂತೆ ಕಾಡು ಪ್ರಾಣಿಗಳ ಹಾವಳಿ. ಇವುಗಳಿಂದ ಬೇಸತ್ತ ಎಷ್ಟು ಜನ ಜೀವನೋಪಾಯಕ್ಕೆ ಪರ್ಯಾಯ ಮಾರ್ಗವನ್ನು ಹುಡುಕಿದ್ದು ನಿಜ. ತಪ್ಪೇನಿಲ್ಲ. ಜೀವಕ್ಕಿಂತ ಜೀವನ ದೊಡ್ಡದು.

ವರ್ಷವಿಡೀ ಕೆಲಸ ಮತ್ತು ಕಾರ್ಮಿಕರನ್ನು ಬೇಡುವ ಉದ್ಯಮ ನಮ್ಮ ಕಾಫಿಯದ್ದು. ಕಾಫಿ ಸಂಸ್ಕೃತಿ ಎನ್ನುವುದು ನಮ್ಮಲ್ಲಿ ಹುಟ್ಟಿದಾರಭ್ಯ ಬೇರುಬಿಟ್ಟಿದ್ದು ನಿಜಕ್ಕೂ ಹೆಮ್ಮೆಯ ಸಂಗತಿಯೇ. ಅನಿಶ್ಚಿತತೆಯ ಬದುಕು ಬೆಳೆಗಾರರದು. ಕಾಫಿ ಹೂವಿಗೆ ಮಳೆಯನ್ನು ಆಶ್ರಯಿಸುವ, ಗೊಬ್ಬರ ಹಾಕಿದರೆ ನಾಲ್ಕು ಹನಿ ಮಳೆಗೆ ಹಪಹಪಿಸುವ ನಮಗೆ, ಮಳೆ ಜೂಜಾಟದಂತೆ; ಅದೃಷ್ಟವನ್ನು ಅವಲಂಬಿಸಿದ್ದು. ಮಲೆನಾಡನ್ನೆ ನಡುಗಿಸಿದ ಕುಂಭದ್ರೋಣ ಮಳೆಗೆ ತತ್ತರಿಸಿದ್ದು ಬೆಟ್ಟಗುಡ್ಡ ನದಿ ತೊರೆ ಪ್ರಾಣಿ ಪಕ್ಷಿಗಳುಪ್ರಕೃತಿ ಮಾತ್ರವಲ್ಲ, ಇಲ್ಲಿನ ಜನರ ಜೀವನ ಕೂಡಾ.

ಪರಿಸರ ತಜ್ಞರ ಪ್ರಕಾರ ಅವೈಜ್ಞಾನಿಕ ವಿಧಾನದಲ್ಲಿ ಗೊತ್ತು ಗುರಿಯಿಲ್ಲದೆ ಕೊಳವೆ ಬಾವಿಗಳನ್ನು ಕೊರೆದ, ಕೃತಕ ಕೆರೆಗಳನ್ನು ಕಟ್ಟಿದ ಫಲವೇ ಈ ದುರಂತ ಎನ್ನುವುದು. ನಾನು ಮೇಲೆ ತಿಳಿಸಿದಂತೆ ಕಾರ್ಮಿಕ ಸಮಸ್ಯೆಯಿಂದ ಬೇಸತ್ತ



ಬೆಳೆಗಾರರಲ್ಲಿ ಕೆಲವರು ಹೋಂಸ್ಟೇ ಮತ್ತು ರೆಸಾರ್ಟ್‌ಗಳಂತಹ, ಅತಿಥಿಗಳನ್ನು ಸತ್ಕರಿಸುವ ಕೆಲಸಕ್ಕೆ ತಮ್ಮನ್ನು ತೊಡಗಿಸಿಕೊಂಡಿದ್ದು ಅಷ್ಟೇ ಸತ್ಯ. ದೋಣಿ ವಿಹಾರಕ್ಕಾಗಿ ಕೆರೆಯನ್ನು ಕಟ್ಟಿಸಿದರು. ನೀರಿಗಾಗಿ ಬೋರ್‌ವೆಲ್ ಕೊರೆಸಿದರು. ಗುಡ್ಡಗಳ ಮೇಲೆ ಪ್ರಕೃತಿಯ ರಮ್ಯ ಮನೋಹರ ನೋಟದ ಸುಖ ಸೌಲಭ್ಯಕ್ಕಾಗಿ ಎತ್ತರದ ದೊಡ್ಡ ಕಟ್ಟಡಗಳನ್ನು ಕಟ್ಟಿಸಿದರು. ಯಾವುದು ಎಲ್ಲಿ ಹಳಿ ತಪ್ಪಿತೋ ಗುಡ್ಡಕ್ಕೆ ಗುಡ್ಡವೇ ನೆಲಸಮವಾಯಿತು. ನದಿ ಪಾತ್ರವೇ ಬದಲಾಯಿತು. ಜೀವ ಮತ್ತು ಜೀವನವೇ ಆದ ಕಾಫಿ ತೋಟ ಕೊಚ್ಚಿಹೋಯಿತು. ಯಾರನ್ನು ದೂರುವುದು? ಯಾರನ್ನು ದೂಷಿಸುವುದು? ಪ್ರಕೃತಿ ಮಾತೆ ಮೈಕೊಡವಿದ್ದಳು.

ಯಾವಾಗ ಈ ದುರಂತ ಸಂಭವಿಸಿತೋ, ದಾರಿ ಹೋಕರೆಲ್ಲ 'ಮೇಧಾವಿಗಳಾಗಿ' ಕಾಫಿನಾಡಿನ ಕುರಿತು ಅಭಿಪ್ರಾಯ, ಅನಿಸಿಕೆಗಳನ್ನು ಪುಂಖಾನುಪುಂಖವಾಗಿ ಬಿಡತೊಡಗಿದರು. ಕಾಫಿನಾಡು ದಶಕಗಳಿಂದ ರಾಜ್ಯ ಮತ್ತು ರಾಷ್ಟ್ರಕ್ಕೆ ನೀಡಿರುವ ಕೊಡುಗೆ ಅಪಾರ. ರಾಜ್ಯದ ಬೊಕ್ಕಸಕ್ಕೆ ಏನು ಪಾಲು ಸಲ್ಲಿಸಬೇಕಿತ್ತೋ ಸಲ್ಲಿಸಿದ್ದೇವೆ, ಸಲ್ಲಿಸುತ್ತಿದ್ದೇವೆ. ಈ ಪರಿಸ್ಥಿತಿಯಲ್ಲಿ ಮಳೆಗೆ ತತ್ತರಿಸಿದ ಕೊಡಗು ಮತ್ತು ಸಕಲೇಶಪುರದ ಕೆಲವು ಭಾಗದ ಜನರಿಗೆ ಬದುಕು ಕಟ್ಟಿಕೊಳ್ಳಲು ಸರ್ಕಾರ ಏನು ಮಾಡಿದೆ? ಮಾಡುತ್ತಿದೆ? ಉತ್ತರ ಇನ್ನೂ ಸ್ಪಷ್ಟವಾಗಿ ಸಿಕ್ಕಿಲ್ಲ. ಪರಿಸರವಾದಿಗಳು ಅವರಿಗೆ ಬೇಕಾದಂತೆ, ರಾಜಕೀಯದವರು ತಮಗೆ ಬೇಕಾದಂತೆ ವಿಕೋಪದ ವಿಶ್ಲೇಷಣೆ ಮಾಡುತ್ತಾ ಮರೆಮಾಚಿದ ಸತ್ಯಗಳೇನೂ ಗುಟ್ಟಾಗಿ ಉಳಿದಿಲ್ಲ. ಕೇರಳದ ಕೋಝಿಕೋಡ್‌ಗೆ ಹೈಟೆನ್ಷನ್ ವಿದ್ಯುತ್ ಸಂಪರ್ಕಕ್ಕೆ ೫೬ ಸಾವಿರ ಮರಗಳ ಹನನವಾಗಿದ್ದು, ರೆಸಾರ್ಟ್ ಮತ್ತು ಹೋಂಸ್ಟೇಗಳಿಗಾಗಿ ನಿರ್ಮಿಸಿದ ಕೊಳವೆಬಾವಿಗಳು ಮತ್ತು ಕೆರೆಗಳು, ಇವೆಲ್ಲ ಪ್ರಕೃತಿಯ ಮೇಲೆ ನಡೆದ ಅತ್ಯಾಚಾರಗಳೆಂಬುದು ನಿಜ.

ಆದರೆ ಕಾವೇರಿ, ಹೇಮಾವತಿ, ತುಂಗಾ, ಭದ್ರಾ, ನೇತ್ರಾವತಿ, ಶರಾವತಿ, ಕಾಳಿ ನದಿಗಳ ಉಗಮ ಪಶ್ಚಿಮ ಘಟ್ಟಗಳು. ಈ ಕುರಿತು ಇಲ್ಲಿನ ನಿವಾಸಿಗಳಿಗೆ ಮಾತ್ರ ಮಲೆನಾಡನ್ನು ಸಂರಕ್ಷಿಸುವ ಹೊಣೆ ಸಾಕೆ? ಮಲೆನಾಡು/ಕಾಫಿನಾಡು ರಾಜ್ಯ/ರಾಷ್ಟ್ರಕ್ಕೆ ನೀಡಿರುವ ಆರ್ಥಿಕ ಕೊಡುಗೆಗೆ ತಕ್ಕುದಾದ ರೀತಿಯಲ್ಲಿ ರಾಜ್ಯ ನಮಗೆ ಸವಲತ್ತು ನೀಡಿದೆಯೇ? ಇದು ಮಲೆನಾಡಿಗರು ನಾಡಿಗೆ ಹಾಗೂ ಆಡಳಿತಕ್ಕೆ ಕೇಳುವ ಪ್ರಶ್ನೆ. ಕಳೆದ ಕೆಲವು ಬೇಸಿಗೆಗಳಿಂದ ಮೂಡಿಗೆರೆ, ಸಕಲೇಶಪುರ, ಸೋಮವಾರಪೇಟೆ, ಮಡಿಕೇರಿಯಂತಹ ಮಲೆನಾಡಿನ ಪಟ್ಟಣಗಳಲ್ಲೇ ದೈನಂದಿನ ಬಳಕೆಯ ನೀರಿಗಾಗಿ ಹಾಹಾಕಾರ ಏಳುತ್ತಿವೆ. ಸಮುದ್ರದ ನೆಂಟಸ್ತಿಕೆ ಇದ್ದರೂ ಉಪ್ಪಿನ ಬಡತನದ ಕ್ಲಾಸ್ಸಿಕ್ ಉದಾಹರಣೆ ನಮ್ಮ ಕಾಫಿನಾಡು.

ಆದರೆ ಈ ಒಂದು ಮಾತಂತೂ ನಿಜ: ಕೊಡಗಿನಲ್ಲಿ ಸಂಭವಿಸಿದ ನೈಸರ್ಗಿಕ ಅನಾಹುತದಲ್ಲಿ, 'ನೀನು ತಪ್ಪಿತಸ್ಥ, ನಿನ್ನನ್ನು ಬಿಡಲ್ಲ, ನೀನು ನಿರಪರಾಧಿ, ನಿನಗೇನೂ ಮಾಡಲ್ಲ' ಅಂತ ಯಾವ ರಿಯಾಯಿತಿಗೂ ಅವಕಾಶವಿಲ್ಲದೆ ಎಲ್ಲರನ್ನೂ ಸಮನಾಗೇ ನೋಡಿ ತನ್ನ ತೀರ್ಪನ್ನಿತ್ತಿದ್ದಳು ಪ್ರಕೃತಿ.



**(ಚಿಕ್ಕಮಗಳೂರಿನ ದಾರದಹಳ್ಳಿಯ ರೇಷ್ಮಾ ಸುಧೀರ್ ಅವರ ಆಸಕ್ತಿಯ ಕ್ಷೇತ್ರಗಳೆಂದರೆ ಓದು. ಬರಹ ಹಾಗೂ ಸಂಗೀತ. ಆಗಾಗ್ಗೆ ಪತ್ರಿಕೆಗಳಿಗೆ ಲೇಖನಗಳನ್ನೂ ಬರೆಯುವುದುಂಟು)**

---

ನಾಶವಾಗಬೇಕಾಗಿತ್ತು. ಅದರ ರಕ್ಷಣೆಗೋಸ್ಕರ ಅವರು ಧರಣಿ ಕೂತರು. "ಈ ಜಲಪಾತ ಹೋದರೆ ಹೋಯಿತು. ಆದರೆ ನಿಮ್ಮ ಬಡತನ ನಿವಾರಣೆಯಾಗುತ್ತೆ. ಗಣಿಗಾರಿಕೆಗೆ ಬೇಕಾದಷ್ಟು ರಾಯಲ್ಟಿ ಕೊಡ್ತೀವಿ. ಅದರಿಂದ ನೀವು ಒಳ್ಳೊಳ್ಳೆಯ ಮನೆಗಳನ್ನು ಕಟ್ಟಬಹುದು. ರಸ್ತೆಗಳನ್ನು ಮಾಡ್ಕೋಬಹುದು. ಇಲ್ಲೊಂದು ಕಾರ್ಖಾನೆ ಮಾಡಬಹುದು. ನಿಮ್ಮ ಮಕ್ಕಳಿಗೆ ಒಳ್ಳೆಯ ಉದ್ಯೋಗ ಸಿಗುತ್ತೆ" ಅಂತ. ಅವನು, ಆ ಮುದುಕ ಹೇಳಿದ "ದಿನಾ ಬೆಳಗ್ಗೆ ಎದ್ದು ನಾವು ಜಲಪಾತವನ್ನು ನೋಡಿ, ನಮಸ್ಕಾರ ಮಾಡಿದಾಗ, ನಮ್ಮ ಮನಸ್ಸು ಕ್ಲೀನ್ ಆಗ್ಬಿಡುತ್ತೆ. ಕ್ಲೀನ್ ಆದಾಗ ಜಗತ್ತನ್ನು ನೋಡುವ ಕ್ರಮವೇ ಬದಲಾಗಿಬಿಡುತ್ತದೆ. ಇದನ್ನು ರಕ್ಷಣೆ ಮಾಡಬೇಕು ಅನಿಸುತ್ತೆ. ಜಲಪಾತದ ಜೊತೆಗಿರತಕ್ಕಂಥ ಕ್ರಿಮಿ–ಕೀಟ ಪಕ್ಷಿಗಳ ಆದಿಯಾಗಿ ನದಿಯ ಎಲ್ಲವೂ ಸೇರಿ ನಾವೆಲ್ಲ ಒಂದು, ಇವೆಲ್ಲದರ ಜೊತೆಯಲ್ಲಿ ನಾವು ಸುರಕ್ಷಿತವಾಗಿದ್ದೇವೆ ಅನ್ನೋ ಭಾವ ಬರತ್ತೆ".

ಈ ಭಾವವನ್ನು ವಿಜ್ಞಾನ ನಾಶಮಾಡಿತು. ಧರ್ಮದ ಜಾಗದಲ್ಲಿ ವಿಜ್ಞಾನ ಬಂದು, ವಿಜ್ಞಾನವೇ ಪರಮ ಜ್ಞಾನ ಅಂತ ಆಗ್ಬಿಡ್ತು.

**(ಮುಂದಿನ ಸಂಚಿಕೆಗೆ)**

**(ಇದು ಸೆಪ್ಟಂಬರ್ ಹತ್ತರಂದು ಚಾಮರಾಜನಗರದ ದೀನಬಂಧು ಮತ್ತು ಇತರ ಸ್ಥಳೀಯ ಸಂಘ–ಸಂಸ್ಥೆಗಳ ಆಶ್ರಯದಲ್ಲಿ ಪರಿಸರ ವಿಕೋಪಗಳ ಬಗ್ಗೆ ಆಯೋಜಿಸಿದ್ದ 'ಹಸಿರು ಚಾಮರ' ಎಂಬ ಕಾರ್ಯಾಗಾರದಲ್ಲಿ ಆಡಿದ ಮಾತುಗಳ ಬರಹ ರೂಪ)**

(ಧ್ವನಿಯಿಂದ ಲಿಪಿಗೆ : **ರೇಖಾಂಬ ಟಿ.ಎಲ್**).

ಲಲಿತ ಪ್ರಬಂಧ

# ನಮ್ಮ ಭತ್ತದ ಕಣಗಾಲ

–ಮಲ್ಲಿಕಾರ್ಜುನ ಹೊಸಪಾಳ್ಯ

ನಮ್ಮ ಕೃಷಿ ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿದ್ದ ಕಣ ಮಾಡುವುದು ಎಂಬುದು ಈಗ ನಮ್ಮ ರೈತರಿಗೆ ಮರೆತೇ ಹೋಗಿರುವಂತಿದೆ. ಆದರೆ ಅದರ ಆನಂದವನ್ನು ನೆನಪಿಸಿಕೊಂಡು ಇಂದಿನ ಯಾಂತ್ರೀಕೃತ ಕೃಷಿಯಿಂದ ನಾವು ಏನೆಲ್ಲ ಪಡೆದು ಏನೆಲ್ಲ ಕಳೆದುಕೊಂಡಿದ್ದೇವೆ ಎಂದು ಯೋಚಿಸುವ ಮನಸ್ಸುಗಳೂ ಇವೆ. ಅಂತಹ ಮನಸೊಂದರ ನೆನಪಿನ ಲಲಿತ ಲಹರಿಯೊಂದು ಇಲ್ಲಿದೆ–ಸಂ.



ಚಿತ್ರ: ಗುಜ್ಜಾರಪ್ಪ

**ನ**ಮಗೆ ಐದಾರು ಎಕರೆ ಜೋಪು ಗದ್ದೆ ಇತ್ತು. ಅದರಲ್ಲಿ ಭತ್ತ ಬೆಳೆಯುತ್ತಿದ್ದೆವು. ಭತ್ತದ ಕಟಾವು ಹಾಗೂ ಅದರ ಕಣಗಾಲ ನನ್ನ ಭಾವಕೋಶದಲ್ಲಿ ಸದಾ ಹಸಿರು. ಹುಡುಗರಾಗಿದ್ದಾಗ ಕಣಗಾಲ ಬರುವುದನ್ನೇ ಕಾಯುತ್ತಿದ್ದೆವು. ಅದು ಕಮ್ಮಿ ಎಂದರೂ ಹದಿನೈದು ದಿವಸ ಹಿಡಿಯುತ್ತಿತ್ತು.

ಅಪ್ಪ ಗದ್ದೆಯನ್ನೆಲ್ಲಾ ಅಡ್ಡಾಡಿ ಭತ್ತದ ತೆನೆಯ ತುದಿಯಲ್ಲಿ ಮೂಗಾಳು ಒಣಗಿರುವುದನ್ನು ಗಮನಿಸಿ ಕಟಾವಿಗೆ ತಯಾರಿ ನಡೆಸುತ್ತಿದ್ದರು. ನೀರು ನಿಲ್ಲಿಸಿ ನೆಲ ಒಣಗಲು ಬಿಡುವುದು ಮೊದಲ ಕೆಲಸ. ಕತ್ತಾಳೆ ಪಟ್ಟೆ ಸಿಗಿದು ಒಣಗಿ ಹಾಕುವುದಕ್ಕೆ ಮುಂದಿನ ಆದ್ಯತೆ. ಕತ್ತಾಳೆ ರಸ ತಾಕದಂತೆ ಕೊಯ್ಯುವುದು ಮತ್ತು ಸಿಗಿಯುವುದೇ ಕಷ್ಟ. ಅಕಸ್ಮಾತ್ ತಾಗಿದರೆ ಮೈಯೆಲ್ಲಾ ಕಡಿತ. ಅವು ಹದವಾಗಿ ಒಣಗುತ್ತಿದ್ದಂತೆ ಎರಡರ ಬುಡ ಸೇರಿಸಿ ಗಂಟು ಹಾಕಿದರೆ ಹೊರೆ ಕಟ್ಟುವ ಬಳ್ಳಿ ತಯಾರು.

ನಾಳೆ ಗದ್ದೆ ಕುಯ್ಯಬೇಕೆಂದರೆ ಹಿಂದಿನ ದಿನ ರಾತ್ರಿ ಕೂಲೇರನ್ನು ಕರೆಯುತ್ತಿದ್ದೆವು. ಆಳೊಂದಕ್ಕೆ ಮೂರು ಸೇರು ಭತ್ತ. ಕ್ರಮೇಣ ಅದು ಐದು ಸೇರಾಯಿತು. ೯೦ರ ದಶಕದಲ್ಲಿ ಹತ್ತು ಸೇರಿಗೆ ಏರಿದಾಗ ಹಣ ಕೊಡುವುದು ರೂಢಿಗೆ ಬಂದ ನೆನಪು. ಎಲ್ಲರೂ ಒಮ್ಮೆಗೇ ಕಟಾವು ಶುರು ಮಾಡಿದರೆ ಕೂಲೇರು ಬರುತ್ತಲೇ ಇರಲಿಲ್ಲ. ಒಂದೆರಡು ದಿನ ಕರೆದರೂ ಬರದಿದ್ದಾಗ ದೊಡ್ಡವರು ನನ್ನನ್ನೋ, ಅಣ್ಣನನ್ನೋ ಕಳಿಸುತ್ತಿದ್ದರು. ಕೂಲೇರ ಮನೆ ಹತ್ತಿರ ಹೋಗಿ "ಅಮ್ಮೋ ವತ್ತಿಲಿಕೆ ಗದ್ದೆ ಕುಯ್ಯಾಕ್ ಬರಬೇಕಂತೆ" ಎನ್ನುತ್ತಿದ್ದೆವು. ಅವರು ಬಿಡುವಾಗಿದ್ದರೆ 'ಬತ್ತಿವಿ' ಎಂಬ ಆಶ್ವಾಸನೆ ಸಿಗುತ್ತಿತ್ತು. ಕೆಲಸ ಜಾಸ್ತಿ ಇದ್ದರೆ ಕ್ಯಾರೇ ಎನ್ನುತ್ತಿರಲಿಲ್ಲ. "ನೀವ್ ಕೊಡೋ ಮೂರ್ ಕಾಳು ನೆಲ್ಲಿಗೆ ಅಷ್ಟು ದೂರ ಯಾರ್ ಬತ್ತರೆ ಹೋಗಪ್ಪಣಿ" ಎಂದುಬಿಡುತ್ತಿದ್ದರು. ಆದರೂ ಐದಾರು ದಿನದೊಳಗೆ ಹೇಗೋ ಬಿಡುವು ಮಾಡಿಕೊಂಡು ಬರುತ್ತಿದ್ದರು ಅನ್ನಿ. ಅದು ಗ್ರಾಮ ಬಂಧುತ್ವ.

ಕಟಾವಿಗೆ ಮುನ್ನ ಹಾಲು–ತುಪ್ಪ ಬಿಡುವ ಆಚರಣೆ ನಡೆಯುತ್ತಿತ್ತು. ಗದ್ದೆಯ ಮೂಡುಗಡೆ ಮೂಲೆಯಲ್ಲಿ ಒಂದು ತೆಂಡೆ ಕುಯ್ದು ಅದರ ಮೇಲೊಂದು ಕುಡ್ಲು ಮಡಗಿ ಮೂರು ತೊಟ್ಟು ಹಾಲು–ತುಪ್ಪ ಬಿಟ್ಟು 'ಸುರು ಮಾಡ್ರಿ' ಎಂದರೆ ಪೂಜೆ ಮುಕ್ತಾಯ. ಸಾಲಿಡಿದು ಕಟಾವು ಆರಂಭ. ಒಂದು ಮಾರಿಗೆ ಒಂದು ಸಾಲು ಲೆಕ್ಕ. ಯಾರಾದರೂ ಸಾಲು ಸೊಟ್ಟಗೆ ಹಿಡಿದರೆ ಉಳಿದವರು ಬೈಯುತ್ತಿದ್ದರು. ಮುಂಚೆ ಸಾಲು ಮುಗಿಸಿದವರು ಹಿಂದೆ ಬಿದ್ದವರಿಗೆ ಎದುರು ಸಾಲು ಕುಯ್ದು ಜೊತೆ ಮಾಡಿಕೊಳ್ಳುತ್ತಿದ್ದರು. ಕಟಾವು ಮಾಡುವಾಗ ಗಲ–ಗಲ ಮಾತಾಡುವುದು, ಬೈಯ್ದಾಡುವುದು, ಕೈ ಕುಯ್ದುಕೊಳ್ಳುವುದು, ಅದಕ್ಕೆ ಅಡ್ಡಿಕೆ ಸೊಪ್ಪಿನ ರಸ ತಿಕ್ಕಿಕೊಳ್ಳುವುದು ಮುಂತಾದ ದೃಶ್ಯಗಳು ಸರ್ವೇ ಸಾಮಾನ್ಯ. ಎರಡು–ಮೂರು ಭತ್ತದ ತೆಂಡೆಗಳನ್ನು ಸೇರಿಸಿ ಹಕ್ಕಿಗಳು ಗೂಡು ಕಟ್ಟಿರುತ್ತಿದ್ದವು. ಅವನ್ನು ಹಾಗೇ ಬಿಡುತ್ತಿದ್ದರು. ಪ್ರತೀ ಸಲ ಗದ್ದೆ ಕಟಾವಿನಲ್ಲೂ ಒಂದೆರಡು ಗೂಡು ಇದ್ದೇ ಇರುತ್ತಿದ್ದವು. ಯಾರಾದರೂ ಗಮನಿಸದೆ ಗೂಡಿರುವ ತೆಂಡೆ ಕುಯ್ದರೆ "ಅಯ್ಯೋ ಏನ್ಮಾಡ್ದೆ! ಕಣ್ ಕಾಮಲ್ವ ನಿಂಗೆ?" ಎಂಬ ಬೈಗುಳ.

ಮೂರು ಗಂಟೆ ಹೊತ್ತಿಗೆ ತಂಗಳಿಟ್ಟು ಉಣ್ಣುವ ಬಿಡುವು. ಅದನ್ನು "ಹೊಸ ಮಕ ಮಾಡ್ಕಳದು" ಎನ್ನುತ್ತಿದ್ದರು. ಹೊಂಗೆ ಮರಕ್ಕೋ, ತುಗ್ಗಲಿ ಗಿಡಕ್ಕೋ ನೇತಾಕಿದ ಟಿಫನ್ ಕ್ಯಾರಿಯರ್‌ಗಳಿಂದ ಹಿಟ್ಟಿನ ಮುದ್ದೆಗಳು, ಮೆಣಸಿನ ಖಾರ, ನೆಲ್ಲಕ್ಕಿ ಅನ್ನ, ಸಾವಕ್ಕಿ ಅನ್ನ, ಕಡ್ಲೆ ಬೀಜದ ಚಟ್ನಿ, ಉಳ್ಳಿಗೆಡ್ಡೆ, ಕಸುರುಗಾಯಿಗಳೇ ಮುಂತಾದ ಬಾಯಿ ನೀರೂರಿಸುವ ಭಕ್ಷ್ಯ–ಭೋಜ್ಯ ಹೊರಬರುತ್ತಿದ್ದವು.

ಉಂಡೆದ್ದ ಮೇಲೆ ಹೊರೆ ಕಟ್ಟುವ ಕೆಲಸ. ಗಂಡಾಳುಗಳು ಕತ್ತಾಳೆ ಬಳ್ಳಿ ಹಾಸಿ ಕಟ್ಟಿದರೆ ಹೆಣ್ಣಾಳುಗಳು ಅರಿ ಎತ್ತಿ ತರುತ್ತಿದ್ದರು. ಅರಿ ತರುವಾಗ ಚೆಲ್ಲಾಡಿದರೆ "ಗ್ಯಾನ ಎಲ್ಲಿಕ್ಕಂಡು ಕೆಲಸ ಮಾಡ್ತಿಯಮ್ಮಣಿ" ಎಂದು ಅಪ್ಪನ ರೇಗು! ಅಷ್ಟಕ್ಕೇ ಬಿಡದೆ ಅವರು ಗದ್ದೆಯೆಲ್ಲಾ ಅಡ್ಡಾಡಿ, ಚೆಲ್ಲಿಹೋಗಿದ್ದ ಭತ್ತದ ಕರೆಗಳನ್ನು ಆಯಿಸುತ್ತಿದ್ದರು. ಗದ್ದೆ ಕುಯ್ಯುವುದೆಂದರೆ ಕರೆ ಆರಿಸುವ ಅಪ್ಪನ ಚಿತ್ರವೇ ನನಗೆ ನೆನಪು. ಅಷ್ಟೊಂದು ತಲ್ಲೀನತೆ. ಆರಿಸಿದ ಕರೆಗಳೇ ಒಂದು ದೊಡ್ಡ ಮೆದೆ, ಕಮ್ಮಿ ಎಂದರೂ ಮೂರು ಸೇರು ನೆಲ್ಲು.

ನಮ್ಮ ಹೊಲದಲ್ಲಿ ವಿಶಾಲವಾದ ದೊಡ್ಡ ಬಂಡೆ ಇತ್ತು. ಅಲ್ಲಿಯೇ ನಮ್ಮ ಕಣದ ಕೆಲಸ ನಡೆಯುತ್ತಿತ್ತು. ಹೊರೆಗಳನ್ನು ಅಲ್ಲಿಗೆ ಹೊರುತ್ತಿದ್ದರು. ಹೊರೆ ಹೊತ್ತು ಸಾಗುವ ದೃಶ್ಯ ಇರುವೆ ಸಾಲಿನಂತಿರುತ್ತಿತ್ತು. ಭತ್ತವು ನಿಲುವಿನಲ್ಲಿಯೇ ಚೆನ್ನಾಗಿ ಒಣಗಿದ್ದರೆ ಸಾರಣಿಗೆ ಹಾಕುತ್ತಿದ್ದರು. ಸ್ವಲ್ಪ ಪಸಿಮೆ ಇದ್ದರೆ ಕುಪ್ಪೆ ಹಾಕಲಾಗುತ್ತಿತ್ತು. ಬುಡ ಒಂದು ಕಡೆ ತೆನೆ ಒಂದು ಕಡೆ ಬರುವಂತೆ ಚತುರ್ಭುಜಾಕಾರದಲ್ಲಿ ಜೋಡಿಸುವುದೇ ಸಾರಣಿಗೆ. ಕುಪ್ಪೆ ಎಂದರೆ ತೆನೆ ಭಾಗವನ್ನು ಒಳಮುಖ ಮಾಡಿ ವೃತ್ತಾಕಾರದಲ್ಲಿ ಗೋಪುರದಂತೆ ಜೋಡಿಸುವುದು. ಕುಪ್ಪೆಯನ್ನು ಒಂದೆರಡು ದಿನ ಬಿಡುತ್ತಿದ್ದರು. ಅಲ್ಲಿ ಶಾಖ ಉಂಟಾಗಿ ಪಸಿಮೆ ಇರುವ ಕಾಳುಗಳು ಕೆಂಬಣ್ಣಕ್ಕೆ ತಿರುಗುತ್ತವೆ ಎಂಬುದು ಅಪ್ಪನ ಅನುಭವ.

ಹೊರೆಗಳನ್ನು ಕಣಕ್ಕೆ ಸಾಗಿಸಿದ ನಂತರ ಕೂಲಿಗಾಗುವಷ್ಟು ಭತ್ತವನ್ನು ಆಳುಗಳೇ ಬಡಿಯುತ್ತಿದ್ದರು. ಸೇರು ಹೊಂಚಿಕೊಂಡು ಬಂದು ಕೂಲಿ ಕೊಡುವುದು ಅಪ್ಪನ ಕೆಲಸ. ಹೊತ್ತು ಮುಣುಕುವವರೆಗೂ ಕೆಲಸ ಮಾಡಿದ್ದೇವೆ ಅಚ್ಚೇರು ಹೆಚ್ಚಿಗೆ ಹಾಕುವಂತೆ ಅವರು ಗೊಣಗುವುದೂ, ಬೆಳಿಗ್ಗೆ ಬರುವಾಗಲೇ ಬಿಸಿಲು ನೆತ್ತಿಗೇರಿತ್ತೆಂದು ಅಮ್ಮ ತಿರುಗುಬಾಣ ಹೂಡುವುದೂ ನಡೆಯುತ್ತಿದ್ದವು. ಕೆಲವೊಮ್ಮೆ ಜೋರು ಮಾತುಕತೆ ಆದರೂ ಇದು ವೈರತ್ವವಾಗಿ ಎಂದೂ ಬೆಳೆಯಲಿಲ್ಲ. ಆ ಕ್ಷಣಕ್ಕೇ ಮುಕ್ತಾಯ. ಕೆಲವರು ಆ ಭತ್ತವನ್ನು ಒಯ್ದು ಆಗಲೇ ಕುಟ್ಟಿ ಅನ್ನ ಮಾಡುತ್ತಿದ್ದುದನ್ನೂ ಕಂಡಿದ್ದೇನೆ.

ಸಾಮಾನ್ಯವಾಗಿ ಕಟಾವಿನ ಕೆಲಸ ಎರಡು ದಿನ ಹಿಡಿಯುತ್ತಿತ್ತು. ಕಟಾವು ಮುಗಿದ ಒಂದೆರಡು ದಿನದಲ್ಲಿ ಭತ್ತ ಬಡಿಯುವ ಕೆಲಸಕ್ಕೆ ಚಾಲನೆ. ಅದು ಕಣಗಾಲದ ಮುಖ್ಯ ಘಟ್ಟ. ಈ ಕೆಲಸಕ್ಕೆ ಗಂಡಾಳುಗಳನ್ನು ಕರೆಯುತ್ತಿದ್ದೆವು. ಭತ್ತ ಬಡಿಯುವುದೆಂದರೆ ಸುಂಕಿನ ಜೊತೆ ಗುದ್ದಾಟ. ನಮ್ಮದು ಬಂಡೆಯ ಮೇಲಿನ ಕಣವಾದ್ದರಿಂದ "ನಡೆದರೆ ಅಂಗಾಲು, ಕುಂತರೆ ಕುಂಡಿ ಸುರುಕ್ ಅಮ್ಮೈತೆ" ಎಂದು ದೂರುತ್ತಿದ್ದರು. ಹಾಗಾಗಿಯೇ ಸಂಜೆ ತಂಪೊತ್ತು ಮಾಡಿಕೊಂಡು, ಹೆಗಲಮೇಲೊಂದು ರಗ್ಗನ್ನೋ, ಕಂಬಳಿಯನ್ನೋ ಗುಬರಾಕಿಕೊಂಡು ಬರುತ್ತಿದ್ದರು. ಬಂದವರೇ ಭತ್ತ ಬಡಿಯಲು ಭತ್ತದ ತೆಂಡೆಯನ್ನೇ ಬಳಸಿ ಹುರಿಗಳನ್ನು ಹೊಸೆಯುವ ಕಾಯಕ. ಕೆಲವರು ಮನೆಯಿಂದಲೇ ತರುತ್ತಿದ್ದರು. ಹೊತ್ತು ಮುಣುಗಿ ಚುಕ್ಕಿ ಬೆಳಕೋ, ಚಂದ್ರನ ಬೆಳಕೋ ಮೂಡುವಾಗ್ಗೆ ಭತ್ತ ಬಡಿಯಲು ಶುರು. ಹೊರೆ ಎಳೆದುಕೊಳ್ಳುವುದು, ಕಂತೆ ಮಾಡಿ ಬಡಿಯುವುದು, ಬಡಿದ ವಕ್ಕಲೆ ಹುಲ್ಲನ್ನು ಕಣದ ಪಕ್ಕದಲ್ಲೇ ಬಣವೆ ಒಟ್ಟುವುದು ಇಡೀ ರಾತ್ರಿ ನಡೆಯುತ್ತಿತ್ತು. ಕೆಲವೊಮ್ಮೆ ಬೆಳಗಿನ ಜಾವ ಕೊರೆ ಹೆಚ್ಚಾದಾಗ ಒಂದೆರಡು ಗಂಟೆ ಮಲಗುತ್ತಿದ್ದುದೂ ಉಂಟು.

ಈ ಮಧ್ಯೆ ಸಣ್ಣ ಬಿಡುವು ತಗೊಂಡು ಬೀಡಿ ಸೇದುವುದು, ಎಲೆಯಡಿಕೆ ಹಾಕಿಕೊಳ್ಳುವುದು, ವಗೇದು ಒತ್ತಲಿಸಿಕೊಳ್ಳುವುದು ಮಾಡುತ್ತಿದ್ದರು. ಒಂಭತ್ತು ಗಂಟೆ ಹೊತ್ತಿಗೆ ಮನೆಯಿಂದ ಬುತ್ತಿ ಬರುತ್ತಿತ್ತು. ಮುತ್ತುಕದ ಎಲೆಯ ಮೇಲೆ

ಪಟ್ಟಾಗಿ ಉಂಡು ಮತ್ತೆ ಕೆಲಸ ಶುರು. ಸರೊತ್ತಿಗೆ ಒಂದೆರಡು ಸಲ ಕಾಫಿ ಮಾಡುತ್ತಿದ್ದೆವು. ನಾವು ಮಾಡದಿದ್ದರೂ "ಸೊಳಿ ಆಕ್ತೈತೆ ಕಾಪಿಗಿಕ್ರಿ ಸೋಮೇ" ಎಂದು ಅವರೇ ಕೇಳುತ್ತಿದ್ದರು.

ನಮ್ಮ ಗದ್ದೆ ಊರಿನಿಂದ ಎರಡು ಮೈಲಿ ದೂರವಿತ್ತು. ಸುತ್ತಲೂ ಬೆಟ್ಟಸಾಲು. ಆ ಬೆಟ್ಟಗಳಲ್ಲಿ ಹತ್ತಾರು ಕರಡಿಗಳು. ಗವ್ವೆನ್ನುವ ಕತ್ತಲೋ, ಹಾಲು ಚೆಲ್ಲುವ ಬೆಳದಿಂಗಳೋ ಇರುತ್ತಿತ್ತು. ಅದರ ನಡೂಮದ್ಯ ಕಣದ ಕೆಲಸ ಮಾಡುವ ಹತ್ತಾರು ಜನ. ಆ ವಾತಾವರಣದ ದೆಸೆಯಿಂದಲೋ ಅಥವಾ ಕೆಲಸದ ಎಕ್ಕಾಸವನ್ನು ಮರೆಯಲೋ ಭತ್ತ ಬಡಿಯುತ್ತಾ ಜೋರು ಗಲಾಟೆ ಮಾಡುತ್ತಿದ್ದರು. ಕೂಗಾಕುತ್ತಿದ್ದರು. ಕೆಕ್ಕೆಕ್ಕೋ, ಕಿಕ್ಕಿಕ್ಕೀ ಎಂದು ವಿಚಿತ್ರ ದನಿ ಹೊರಡಿಸುತ್ತಿದ್ದರು. ನಾಟಕದ ಮಟ್ಟುಗಳು, ಸಿನಿಮಾ ಪದಗಳು ತಂತಾನೇ ಹೊರಬರುತ್ತಿದ್ದವು. ಆ ಸರಕುಗಳೆಲ್ಲಾ ಮುಗಿದ ಮೇಲೆ "ಅವನಂಗಂತಲೇ ಇವನಿಂಗಂತಲೇ" ಎಂದು ವದಂತಿಕೋರತನ ಸುರು! ಸುತ್ತೇಳು ಹಳ್ಳಿಗಳ ಅಕ್ರಮ ಸಂಬಂಧಗಳ ಸಮಾಚಾರ ತಿಳಿಯಲು ಕಣಕ್ಕಿಂತ ಪ್ರಶಸ್ತ ಸ್ಥಳ ಇನ್ನೊಂದಿರಲಿಲ್ಲ. ಬಹುತೇಕರಿಗೆ ಅದೆಲ್ಲಾ ಗೊತ್ತಿರುತ್ತಿತ್ತು. ಆದರೂ ಮತ್ತೆ-ಮತ್ತೆ ಅದನ್ನು ಮೆಲ್ಲುತ್ತಾ ಕುಸಿಯಾಗುತ್ತಿದ್ದರು. ಅದೂ ಬೇಜಾರಾದರೆ ದೆವ್ವದ ಕತೆಗಳನ್ನು ಸುರುವಚ್ಚಿಕೊಳ್ಳುತ್ತಿದ್ದರು. ನಮ್ಮ ಕಣಗೆಲಸಕ್ಕೆ ಯಾವತ್ತೂ ತಪ್ಪಿಸಿಕೊಳ್ಳದ ಗಜ್ಜಿ ಹನುಮಂತಪ್ಪ ಯಾವ್ಯಾವ ವಬ್ಬೆಯಲ್ಲಿ ಏಳು ಕೊಪ್ಪರಿಗೆ ಬಂಗಾರವಿದೆ, ಅದನ್ನು ಯಾವ್ಯಾವ ಜಡೆಮುನಿಗಳು ಕಾಯುತ್ತಿದ್ದಾರೆ ಎಂದು ವಿವರಿಸುತ್ತಿದ್ದ. ಕೆಲವೊಮ್ಮೆ ಜಡೆಮುನಿ ಬದಲು ಏಳೆಡೆ ಸರ್ಪಗಳನ್ನು ಕಾವಲಿಗೆ ಇರಿಸುತ್ತಿದ್ದ. ಇತರರೂ ತಮ್ಮ ಅನುಭವಗಳನ್ನು ಸೇರಿಸುತ್ತಾ, ಎಲ್ಲೆಲ್ಲಿ ತಮಗೆ ದೆವ್ವ ಅಡ್ಡ ಹಾಕಿತ್ತು, ಎಂಥೆಂಥಾ ರೂಪದಲ್ಲಿ ಬಂದಿತ್ತು, ಹೇಗೆ ಅದರಿಂದ ತಪ್ಪಿಸಿಕೊಂಡೆ ಎಂದು ಹೇಳುತ್ತಾ ಇಡೀ ಕಣದ ಜನರ ಕೂದಲೆಲ್ಲ ನೆಟ್ಟಗೆ ನಿಲ್ಲುವಂತೆ ಮಾಡಿಬಿಡುತ್ತಿದ್ದರು. ನನಗೆ ಬುದ್ದಿ ಬಲಿಯುವವರೆಗೂ ಆ ಕಥೆಗಳನ್ನು ಕೇಳಿ ದಿಗಿಲು ಬೀಳುತ್ತಿದ್ದೆ. ಈ ಗಾಳಿಸುದ್ದಿ ಮತ್ತು ದೆವ್ವದ ಸಮಾಚಾರ ಕೇಳಲಿಕ್ಕಾಗಿಯೇ ನಾನು ಕಣ ತಪ್ಪಿಸುತ್ತಿರಲಿಲ್ಲ ಹಾಗೂ ಕಣ್ಣು ಎಳೆಯುತ್ತಿದ್ದರೂ ಮಲಗುತ್ತಿರಲಿಲ್ಲ.

ಬೆಳಕರಿಯುವ ಹೊತ್ತಿಗೆ ಎದೆಯುದ್ದ ನೆಲ್ಲಿನ ರಾಶಿ ಬಿದ್ದಿರುತ್ತಿತ್ತು. ಪಕ್ಕದಲ್ಲೇ ಎರಡಾಳುದ್ದದ ವಕ್ಕಲೆ ಹುಲ್ಲಿನ ಬಣವೆ. ಅಂದಿನ ಇಡೀ ಹಗಲು ವಕ್ಕಲೆ ಹೊಡೆಯುವ ಕೆಲಸ. ವಕ್ಕಲೆ ಹುಲ್ಲನ್ನು ಹರಡಿ ಐದಾರು ಜತೆ ದನಗಳನ್ನು ಒಂದರಪಕ್ಕ ಒಂದು ತೆಕ್ಕೆ ಕಟ್ಟಿ ವೃತ್ತಾಕಾರವಾಗಿ ತುಳಿಸುವುದೇ ವಕ್ಕಲೆ. ಬಡಿದಾಗ ತೆನೆಯಲ್ಲೇ ಉಳಿದ ಕಾಳುಗಳನ್ನು ಬಿಡಿಸಲು ಈ ಕ್ರಿಯೆ. ಎಲ್ಲಾ ಹುಲ್ಲನ್ನೂ ಒಮ್ಮೆಗೇ ಹಾಕುವಂತಿಲ್ಲ. ಒಂದು ಸಲಕ್ಕೆ ಮೊಣಕಾಲುದ್ದ ಬೀಳುವಷ್ಟು ಹರಡಿ ದನಗಳಿಂದ ತುಳಿಸಿ, ಆ ಹುಲ್ಲನ್ನು ಮೆರೆಕಡ್ಡಿಯಿಂದ ಎಳೆದು ಹಾಕಿ ಮತ್ತೆ ಹೊಸದಾಗಿ ಹುಲ್ಲನ್ನು ಹರಡುತ್ತಿದ್ದರು. ಏಳೆಂಟು ಬಾರಿ ಈ ರೀತಿ ಪುನರಾವರ್ತಿಸಬೇಕಿತ್ತು.

ಸಂಜೆ ನಾಲ್ಕರ ಹೊತ್ತಿಗೆ ಇದೆಲ್ಲಾ ಒಂದು ಹಂತಕ್ಕೆ ಬರುತ್ತಿತ್ತು. ಬಡಿಯುವ ಹುಲ್ಲು ಜಾಸ್ತಿ ಇದ್ದು ಆಳುಗಳು ಕಡಿಮೆ ಬಂದಿದ್ದರೆ ಒಂದು ರಾತ್ರಿ, ಅರ್ಧ ಹಗಲು ಬಡಿಯುವುದು ಹಾಗೂ ಅರ್ಧ ಹಗಲು ಮತ್ತು ಇಡೀ ರಾತ್ರಿ ವಕ್ಕಲೆ ಕಟ್ಟುತ್ತಿದ್ದರು. ಇಂತಾದ್ದು ಅಪರೂಪ. ಗದ್ದೆಗೆ ತಕ್ಕನಾಗಿ ಆಳುಗಳನ್ನು ಕರೆದು ಒಂದು ರಾತ್ರಿ, ಒಂದು ಹಗಲಿಗೆ ಎಲ್ಲಾ ಕೆಲಸ ಮುಗಿಯುವಂತೆ ನೋಡಿಕೊಳ್ಳುತ್ತಿದ್ದರು.

ವಕ್ಕಲೆ ಹೊಡೆಯುವಾಗಲೇ ಇನ್ನೊಂದು ಕಡೆ ಬಡಿದ ರಾಶಿ ಹಾಗೂ ವಕ್ಕಲೆ ರಾಶಿಯನ್ನು ತೂರುವುದು ನಡೆಯುತ್ತಿತ್ತು. ಅದಕ್ಕೆ ಹೆಣ್ಣಾಳುಗಳು ಹಾಗೂ ಮನೆಯವರು ಸೇರಿಕೊಳ್ಳುತ್ತಿದ್ದರು. ಕಣಗೆಲಸ ಮುಗಿಯುವವರೆಗೆ ಮನೆಯ ಎಲ್ಲರಿಗೂ ಒಂದಲ್ಲಾ ಒಂದು ಕೆಲಸ ಇದ್ದೇ ಇರುತ್ತಿತ್ತು. ವಕ್ಕಿದ ಹುಲ್ಲನ್ನು ಬಂಡೆಯ ಮೇಲೆ ಹರಡಿ ಒಣಗಾಕುತ್ತಿದ್ದರು.

ಅಷ್ಟು ಹೊತ್ತಿಗೆ ಪಕ್ಕದ ಬಸವನಹಳ್ಳಿಯ ಮರೆಕ್ಕಜ್ಜಿ ಮಂಕರಿ ಹೊತ್ತು ಹಾಜರಾಗುತ್ತಿತ್ತು. ಆ ಮಂಕರಿ ತುಂಬಾ ಘಮಾಡಿಸುವ ಪಕೋಡ, ಚಕ್ಲಿ, ಕೋಡುಬಳೆ, ನಿಂಬೆ ಹುಳಿ ಪೆಪ್ಪರಮೆಂಟು, ಕಂಬಾರಗಟ್ಟು, ಬೀಡಿ-ಬೆಂಕಿ ಪೊಟ್ಟಣ, ಎಲೆ-ಅಡಿಕೆ, ವಗೇ ಸೊಪ್ಪು ಇತ್ಯಾದಿಗಳಿರುತ್ತಿದ್ದವು. ಕಣದ ಜನ ದುಡ್ಡನ್ನೋ, ಭತ್ತವನ್ನೋ ಕೊಟ್ಟು ತಮಗೆ ಬೇಕಾದ್ದು ಕೊಳ್ಳುತ್ತಿದ್ದರು. ಆವಜ್ಜಿ ಬರೋದು ತುಸು ತಡವಾದರೆ ಎಲ್ಲರ ಕಣ್ಣುಗಳೂ ಆಕೆ ಬರುವ ಕಾಲಾದಿಯನ್ನೇ ನೋಡುತ್ತಿದ್ದವು. ಅವಸರದಲ್ಲಿದ್ದವರ ಮಧ್ಯದಿಂದ"ಮರಕ್ಕಜ್ಜಿ ಕೊಟ್ಲು ಕಣಲೆ ಕೈಯಾ" ಎಂಬಿತ್ಯಾದಿ ಉದ್ಗಾರಗಳೂ ಹೊರಡುತ್ತಿದ್ದವು. ಆಕೆಯ ಮಕ ಕಾಣುತ್ತಿದ್ದಂತೆ ಇವರ ಮಕಗಳು ಕಳೆಗಟ್ಟುತ್ತಿದ್ದವು. ಆಕೆ ಸತ್ತ ಎಷ್ಟೋ ವರ್ಷಗಳ ನಂತರವೂ ಪ್ರತೀ ಸಲ ಕಣದಲ್ಲಿ ಅವಳನ್ನೂ, ಆ ಮಂಕರಿಯನ್ನೂ ನೆನೆಸಿಕೊಳ್ಳದವರೇ ಇರುತ್ತಿರಲಿಲ್ಲ.

ಆಕಡೆ ಮಾರುತಿಪುರದ ಕಡೆಯಿಂದ ಒಬ್ಬರು ದಾಸಪ್ಪ ಬರುತ್ತಿದ್ದರು. ಎಡಗೈಲಿ ಬವನಾಸಿ, ಬಲಗೈಲಿ ದೀಪದ ಕಂಬ. ಜೊತೆಗೆ ಊರದನ ಮೇಯಿಸುವ ಪಾತಪ್ಪ, ಮಣೇಗಾರ್ರ ಪೈಕಿ ಒಬ್ಬರು, ಹತಾರಗಳನ್ನು ತಟ್ಟುವ ಕುಲುಮೆಯವರು ಮುಂತಾಗಿ ಅವರೂ ಇವರೂ ಸೇರಿಕೊಳ್ಳುತ್ತಿದ್ದರು. ಎದೆಯುದ್ದ ಬಿದ್ದ ರಾಶಿಯನ್ನು ನೋಡುತ್ತಾ ಅಪ್ಪನನ್ನು ಹೊಗಳುತ್ತಿದ್ದರು. ಕೆಲವರು ಕಡಗಣ ಗುಡಿಸುವುದು, ಮುಂದಂಡೆ ಎತ್ತುವುದು, ಚೀಲ ಹೊಲಿಯುವುದು, ಹುಲ್ಲು ಯಾರಾಕುವುದು ಇತ್ಯಾದಿ ಕೆಲಸಗಳಿಗೂ ಕೈಹಾಕುತ್ತಿದ್ದರು. ಯಾರಾದರೂ ಕಡಗಣವನ್ನು ಅಚ್ಚುಕಟ್ಟಾಗಿ ಗುಡಿಸುತ್ತಿದ್ದರೆ ದೊಡ್ಡವರು "ಇರುವೆಗಳಿಗೆ, ಹಕ್ಕಿ-ಪಕ್ಷಿಗಳಿಗೆ ನಾಲಕ್ಕಾಳು ಇರಲಿ" ಎನ್ನುತ್ತಿದ್ದರು.

ಭತ್ತ ಪೂರಾ ಒಣಗಿದ್ದರೆ ಅಂದೇ ಚೀಲಕ್ಕೆ ತುಂಬಿ ಗಾಡಿಗೆ ಏರಿಸಿ ಮನೆಗೆ ಕಳಿಸಲಾಗುತ್ತಿತ್ತು, ಹಸಿ ಇದ್ದರೆ ಮರು ದಿನ ಹಗಲು ಒಣಗಲು ಅಲ್ಲೇ ಬಿಡುತ್ತಿದ್ದರು. ಹುಲ್ಲನ್ನೂ ಅಷ್ಟೇ. ಬಣವೆಗೆ ಹಾಕುವಷ್ಟು ಒಣಗಿದ್ದರೆ ಹೊರೆ ಕಟ್ಟುತ್ತಿದ್ದರು. ಇಲ್ಲವಾದರೆ ಇನ್ನೊಂದು ದಿನ ಬಂಡೆಯ ಮೇಲಿರಲಿ ಎಂಬ ತೀರ್ಮಾನ.

ಆರು ಗಂಟೆಯ ಹೊತ್ತಿಗೆ ಎರಡೂ ರಾಶಿಗಳಿಗೆ ಪೂಜೆ ಆಗುತ್ತಿತ್ತು. ಕಣಗಿಲೆ ಹೂವ ಇಟ್ಟು, ಕಾಯಿ ಹೊಡೆದು, ಮೂರು ದಿಕ್ಕಿಗೂ ಅದರ ನೀರು ಎರಚಿ, ಬಲಗೈಲಿ ಒಂದು ಮೊರ ಹಿಡಿದು ಎಡಗೈಯನ್ನು ಬಲಗೈಯಿನ ಮೊಣಕೈ ಬಳಿ ಇಟ್ಟುಕೊಂಡು ಆ ಮೊರದ ತುದಿಯಿಂದ ರಾಶಿಯನ್ನು ಮೂರು ಸುತ್ತು ಹಾಕಲಾಗುತ್ತಿತ್ತು. ಊದಿನಕಡ್ಡಿ ಬೆಳಗಿ ಸಣ ಮಾಡಿದರೆ ಪೂಜೆ ಮುಗಿಯಿತೆಂದು ಲೆಕ್ಕ.

ನಂತರ ಕೂಲಿ ಕೊಡಲು ಸಿದ್ಧತೆ. ಆಳುಗಳು ತಂತಮ್ಮ ಪಾಲನ್ನು ತಂತಮ್ಮ ರಗ್ಗುಗಳಿಗೇ ಹಾಕಿಸಿಕೊಳ್ಳುತ್ತಿದ್ದರು. ಕಣಗೆಲಸಕ್ಕೆ ಬಂದವರಿಗೆ ಮೊರದಲ್ಲಿ ಭತ್ತ ಕೊಡುವುದು ಪದ್ಧತಿ. ಮೂರು ಮೊರ ಬಡಿದ ರಾಶಿ ನೆಲ್ಲು, ಮೂರು ಮೊರ ವಕ್ಕಲೆ ರಾಶಿ ನೆಲ್ಲು ಕೊಡಲಾಗುತ್ತಿತ್ತು. ಅವರು ರಗ್ಗಿನಲ್ಲಿ ಎರಡು ಪದರ ಇಂಗಡಿಸಿಕೊಂಡು ಒಂದು ಪದರಕ್ಕೆ ಬಡಿದ ನೆಲ್ಲು, ಇನ್ನೊಂದಕ್ಕೆ ವಕ್ಕಲೆ ನೆಲ್ಲು ಹಾಕಿಸಿಕೊಳ್ಳುತ್ತಿದ್ದರು. ವಕ್ಕಲೆ ನೆಲ್ಲಿನಲ್ಲಿ ಜಾಸ್ತಿ ಕಲ್ಲು ಮಣ್ಣು ಇರುತ್ತಿದ್ದುದರಿಂದ ಈ ಉಪಾಯ. ಇವರಿಗೆ ಕೊಟ್ಟ ನಂತರ ಕಣಕ್ಕೆ ಬಂದವರಿಗೆ ಒಂದೋ ಎರಡೋ ಮೊರ ನೆಲ್ಲು ಕೊಡಲಾಗುತ್ತಿತ್ತು. ನೆಲ್ಲು ಪಡೆದವರೇ "ಕಣ್ಣಗ್ ಬೆಳಕಿದ್ದಂಗೆ ಮನೆ ಸೇರ್ಕಬೇಕಪ್ಪೋ, ಇಲ್ಲದಿದ್ರೆ ಕಲ್ಡಿ ಕಾಟ" ಎಂದು ಅವಸರದಿಂದ ಹೊರಟುಬಿಡುತ್ತಿದ್ದರು.

ಇಲ್ಲಿಗೆ ಆ ಋತುವಿನ ಕಣಗಾಲದ ಸಂಭ್ರಮ ಮುಗಿಯುತ್ತಿತ್ತು. ಸರಿಸುಮಾರು ಒಂದು ವಾರ ಗದ್ದೆಯಲ್ಲೋ, ಕಣದಲ್ಲೋ ಇರುತ್ತಿದ್ದ ನಾವೂ ಮನೆ ಸೇರುತ್ತಿದ್ದೆವು. ಭತ್ತ ಬೆಳೆಯುವ ನಮ್ಮೂರಿನ ಸುತ್ತಲ ಹಳ್ಳಿಗಳಲ್ಲಿ, ಕಣಗಾಲ ಹೀಗೇ ನಡೆಯುತ್ತಿತ್ತು. ಇದೆಲ್ಲಾ ಎರಡು ದಶಕದ ಹಿಂದಿನ ನೆನಪು.

* * *

ಕಾಲ ಸರಿದಂತೆಲ್ಲಾ ಗದ್ದೆಗಳು ಕಿರಿದಾದವು, ನೀರ ಒರತೆ ಬತ್ತಿ ಬೀಟು ಬಿಟ್ಟವು, ಅಡಿಕೆ ತೋಟಗಳಾದವು, ಲೇಔಟುಗಳಾದವು. ತೊನೆದಾಡುತ್ತಿದ್ದ ಭತ್ತದ ತಾಕುಗಳ ಕಣ್ಮರೆಯ ಜೊತೆಗೇ ವಾರೊಪ್ಪತ್ತಿನ ಆ ಕಣಗಾಲದ ಕಷ್ಟ-ಸುಖಗಳೂ, ಕಲೆತು ಉಣ್ಣುವ, ಗಾಳಿ ಸುದ್ದಿಯನ್ನು ಸೃಷ್ಟಿಸಿ, ಹಂಚಿಕೊಂಡು ಕುಸಿಪಡುವ ಕ್ಷಣಗಳೂ, ಕೊಪ್ಪರಿಗೆ ಹೊನ್ನು ಕಾಯುವ ಜಡೆಮುನಿಗಳೂ, ದಿಗಿಲಿಕ್ಕಿಸುವ ಥರಾವರಿ ದೆವ್ವಗಳೂ ಮಸುಕಾದವು.

ಕಳೆದ ತಿಂಗಳು ಭತ್ತ ಕಟಾವು ಆರಂಭವಾಗಿರುವ ವಿಚಾರ ತಿಳಿದು ಬಾಲ್ಯದ ಕಣಗಾಲದ ನೆನಪುಗಳು ಮುತ್ತಿ ಊರಿಗೆ ಹೋದೆ. ನೋಡ-ನೋಡುತ್ತಲೇ ಒಂದು ಬೃಹದಾಕಾರದ ಯಂತ್ರ ಗದ್ದೆಗಿಳಿಯಿತು, ಚರ-ಚರ ಕತ್ತರಿಸುತ್ತಾ ಕಾಳು ಒಂದು ಕಡೆ, ಹುಲ್ಲು ಒಂದು ಕಡೆ ಮಾಡಿ ಹೊರಟೇ ಹೋಯಿತು. ಒಂದೇ ಗಂಟೆಯ ಕೆಲಸ. ಗಾಢ ವಿಷಾದ ಆವರಿಸಿತು. ಗದ್ದೆಯಲ್ಲಿ ಗೂಡು ಕಟ್ಟಿದ ಹಕ್ಕಿ, ಕಣದಲ್ಲಿ ಕಾಳು ಸಿಗಬಹುದೆಂದು ಕಾಯುವ ಇರುವೆ ಸಾಲುಗಳು ಥಕ್ಕನೆ ನೆನಪಾದವು. ಜೊತೆಗೇ ಆ ಸಂಘಜೀವನದ ಆ ಬೆಚ್ಚನೆಯ ಮಾನವ ಸಹವಾಸವೂ....



**(ಅರ್ಥಶಾಸ್ತ್ರ ಮತ್ತು ಪತ್ರಿಕೋದ್ಯಮಗಳ ಪದವಿ ಪಡೆದಿರುವ ಲೇಖಕ ಮಲ್ಲಿಕಾರ್ಜುನ ಹೊಸಪಾಳ್ಯರ ಆಸಕ್ತಿ ಮಾತ್ರ ಜಲನಿರ್ವಹಣೆ. ತುಮಕೂರಿನಲ್ಲಿ ನೆಲೆಸಿರುವ, ಸೃಜನಶೀಲ ಲೇಖಕರೂ ಆದ ಇವರು ಹಲವು ಸರ್ಕಾರಿ ಇಲಾಖೆಗಳು ಮತ್ತು ಸಂಸ್ಥೆಗಳಿಗೆ ಜಲನಿರ್ವಹಣಾ ಸಲಹಾಕಾರರಾಗಿದ್ದಾರೆ.)**

**ಸ್ಥಳೀಕ ಶಬ್ದಗಳ ಅರ್ಥ:** ಜೋಪು: ಜೌಗು ವತ್ತಲಿಕೆ: ಬೆಳಿಗ್ಗೆ ಅರಿ: ಕಂತೆ ತೆಂಡೆ: ತೆನೆಗುಚ್ಛ ಕರೆ: ಕಡ್ಡಿ ವಗೇದು: ಹೊಗೆಸೊಪ್ಪು ಎಕ್ಕಾಸು: ಆಯಾಸ ಕೊರೆ: ಚಳಿ



## ನವಿಲು ಗರಿ

### ಬೆತ್ತಲ ಬಯಲು

ಹೊಲಿಯುತ್ತೇನೆ...
ಬೆತ್ತಲೆಗಳೆಲ್ಲ ತೊಟ್ಟುಕೊಳ್ಳಬೇಕೆಂದಲ್ಲ
ಪ್ರಕೃತಿಗೆ ಪ್ರಿಯವಾದದ್ದು
ಜಗತ್ತಿನ ಪ್ರತಿ ಹುಟ್ಟು ಬೆತ್ತಲೆಯೇ

ಆದರೂ ಹೊಲಿಯುತ್ತೇನೆ
ಕಾಮ ಕ್ರೋಧ ಮದಮತ್ಸರಗಳನೆಲ್ಲ
ಹೊಲಿಗೆಯಿಂದ ತಡೆಯಬಹುದೆಂಬ
ಹುಚ್ಚು ಕಲ್ಪನೆ ನನಗಿಲ್ಲ.

ಹೊನ್ನ ಹೊದಿಸಿ ಹೆಣೆದರೂ
ವಿಸ್ಮಯ ವಿನ್ಯಾಸ ಹೊಲಿದರೂ
ಕಾಮದ ಬಯಕೆಯಲ್ಲಿ ಬೆತ್ತಾಲಾಗುತ್ತಲೇ ಇವೆ

ಗೊತ್ತು ನನಗೆ ಇತಿಹಾಸದುದ್ದಕ್ಕೂ
ಹೊದಸಿದೆ ಎಲೆ, ತೊಗಟೆ, ಚರ್ಮಗಳೆಲ್ಲ
ಕಿತ್ತೊಗೆದು ಹಾತೊರೆಯುತ್ತಿದೆ ಬೆತ್ತಲೆಗೆ.

ಹಾಗಿದ್ದೂ ಹೊಲಿಯುವೆ
ತೊಡುವಷ್ಟು ಕಾಲ ಬದುಕು ಬವಣೆಗಳ
ತವಕ ತಲ್ಲಣಗಳ ಕೂಡಿಸುವೆ
ಎಂಬ ನಂಬುಗೆಯಲ್ಲಿ



ತೊಡುಗೆ ಮಾಸಿಯೇ ಹೋದರೂ
ಹರಿದೇ ಹೋದರೂ
ಬೆತ್ತಲೆಯ ಕೊನೆಯಂಕ ನಾನಾಗುವ ತನಕ
ಹೊಲಿಯುತ್ತಲೇ ಇರುತ್ತೇನೆ ಮತ್ತೆ ಮತ್ತೆ...

**–ಆರ್. ಕುಮಾರ್**



ಚಿತ್ರ: **ವಿಜಯಶ್ರೀ ಹಾಲಾಡಿ**

### ೧. ಸಂಘ ಕಟ್ಟಿದರು

ನೋವು ಮರೆಯಲು ಖುಷಿಗೆ ಬೆರೆಯಲು
ಹುಡುಕುತ್ತೇವೆ ಕಳೆದ ಸ್ನೇಹ



ಸ್ನೇಹ ಇಲ್ಲದ ಬದುಕು ಎಂದರೆ
ಗೋಡೆಗಳಿಲ್ಲದ ಮನೆಯ ಕೋಣೆ
ಸ್ನೇಹವಿರದ ಮನಸು ಎಂದರೆ
ಮನಸು ಇಲ್ಲದ ಬದುಕು.

ಮನಸು, ಕೋಣೆ, ಗೋಡೆ, ಮನೆ
ಬದುಕು ಎಲ್ಲವೂ ಗೋಜಲಾಗಿ
ಪರಸ್ಪರರ ಸ್ನೇಹಕ್ಕಾಗಿ ಕಟ್ಟಿದರು ಸಂಘ
ಮನಸ್ಸು ಕಟ್ಟಿದ ಸ್ನೇಹಿತರು ಗೋಡೆಗಳಾದರು.

### ಮುಂಬೈ ಟ್ರೈನ್‌ನಲ್ಲಿ

ನಿಮ್ಮ ಕಾಲ ಮೇಲೆ ನೀವು ನಿಂತರೆ

ನೀವು ಸಂತನ ಹಾಗೆ ಅದು ನಿಮ್ಮ ಯೋಗ
ಇಲ್ಲದಿದ್ದರೆ ಕೈಕಾಲು ಸಂದಂತೆ ಅವರಿವರ ಪಾಲು
ಕಣ್ಣು ಕಿವಿಗಷ್ಟೇ ನೀಡಿದ ಸ್ವಾತಂತ್ರ್ಯ

ನಿಮ್ಮ ಹೆಗಲ ಮೇಲೆ ಯಾರೋ ಮೊಗವಿಟ್ಟು
ನಿದ್ದೆ ಮಾಡುತ್ತಾನೆ ನಿಂತಲ್ಲೇ ಶವಾಸನ
ಸಮತೋಲನ ಕಾಪಾಡಿದರೆ
ನಿಮಗೆ ನೀವೇ ಸ್ವತಂತ್ರ
ಕಲಿಯುತ್ತೀರಿ ನೀವು ನಿಧಾನ
ಮೈ ಉಳಿದವರಿಗೊಪ್ಪಿಸಿ
ನಿದ್ದೆಗೆ ಬಿಟ್ಟುಕೊಡುವ ತಂತ್ರ–ನಿಮ್ಮ ಸ್ವಾತಂತ್ರ್ಯ

**–ವಿ.ಎಸ್. ಶ್ಯಾನ್‌ಭಾಗ್**

## ನಿಮ್ಮ ಪತ್ರ

**ಪ್ರಿ**ಯ ಸಂಪಾದಕರೇ,

ಜನವರಿ ಸಂಚಿಕೆ ಓದಿ ಬಹಳ ಖುಷಿಯಾಯಿತು. ಮನು ಪಿಳ್ಳೈ ಅವರ ಲೇಖನ ನಿಜವಾಗಿಯೂ ಇತಿಹಾಸಕಾರರ ಜವಾಬ್ದಾರಿ ಮತ್ತು ಜನಸಮುದಾಯದ ಶಾಂತಿಗೆ ಅವರ ಕೊಡುಗೆ ಎಷ್ಟು ಮಹತ್ವ ಎಂಬುದರ ಅರಿವಾಗುತ್ತದೆ. ಸಂಪಾದಕರ ಟಿಪ್ಪಣಿಯಂತೂ ಆತ್ಮಾಭಿಮಾನ ಕಳೆದುಕೊಂಡು ಬದುಕುವ ಸ್ಥಿತಿಯನ್ನು ಸೃಷ್ಟಿಸಿದ ವ್ಯವಸ್ಥೆಗೆ ಕನ್ನಡಿ ಹಿಡಿದಿದೆ. ಅಪರೂಪದ ಅಧಿಕಾರಿ, ಚಾಯವಾಲಾ ಕಣವಿ ಟಿಪ್ಪಣಿಗಳು ಕೂಡ ಹಿಡಿಸಿದವು. ಇನ್ನು ಸ್ವಾಮಿ ವಿವೇಕಾನಂದರ ಬಗ್ಗೆ ಜಿ ಎಸ್ ಜಯದೇವ ಅವರು 'ಧರ್ಮವಿಚಾರ ಮಟ'ದಲ್ಲಿ ಸಂಗ್ರಹಿಸಿ ಕೊಟ್ಟ ವಿಚಾರಗಳು ಅರ್ಥಪೂರ್ಣ. ಹಾಗೇ ಕೆ.ಜಿ. ನಾಗರಾಜಪ್ಪ ಅವರ ವಿಚಾರಗಳ ಬಗ್ಗೆ' ಅರ್ಥಪೂರ್ಣ ವಿಮರ್ಶೆ ಮಂಡಿಸಿರುವ ತಾರಿಣಿ ಮೇಡಂ ಅವರ ಪುಸ್ತಕಾವಲೋಕನ ಕೂಡ ಬಹಳ ಉನ್ನತ ಮಟ್ಟದ ಬರಹ. ಒಟ್ಟಿನಲ್ಲಿ ಈ ತಿಂಗಳ ಸಂಚಿಕೆ ಬಹಳ ಮನನೀಯ

**–ಡಾ. ಚಿಲ್ಕರಾಗಿ ಸಿ ಬಿ., ಕೊಪ್ಪಳ**

ಜನವರಿ ಸಂಚಿಕೆಯಲ್ಲಿನ್ನ 'ಒಂದೇ ಕಥನದ ಅಪಾಯ'ಒಂದು ಅದ್ಭುತ ಲೇಖನ ಅದು ನಮಗೆಲ್ಲ ತಿಳಿದ ಮತ್ತು ಅನೇಕ ಬಾರಿ ಚಿಂತಿಸಿದ ವಿಚಾರವೇ ಆದರೂ ಚಿಮಮಂಡಾ ಹೇಳಿದ ರೀತಿ ಮಾತ್ರ ಅನನ್ಯ.. ಅವಳ ಅನುಭವಗಳು ಅಂಥವು ಅವನ್ನು ಅವಳು ಮಾಸಲು ಬಿಡದೆ ಗಟ್ಟಿ ಹಿಡಿದು ಯೋಚಿಸಿದ್ದಾಳೆ. ಇದನ್ನು ತುಂಬ ಚೆನ್ನಾಗಿ ಅನುವಾದಿಸಿರುವ ಶಶಿಧರ ಡೋಂಗ್ರೆಯವರಿಗೆ ನನ್ನ ವಂದನೆಗಳು.

**–ವೈದೇಹಿ,ಮಣಿಪಾಲ**

ಕಳೆದ ಸಂಚಿಕೆಯಲ್ಲಿನ 'ಒಂದೇ ಕಥನದ ಅಪಾಯ' ಒಂದು ಉತ್ತಮ ಲೇಖನ. ಇದು ಒಂದೇ ಕಥನದ ಆಧಾರದ ಮೇಲೆ ಸೃಷ್ಟಿಯಾದ ಸ್ಟೀರಿಯೋಟೈಪ್‌ಗಳು ನಮ್ಮ ನಂಬಿಕೆಗಳನ್ನು ರೂಪಿಸುವ ಪ್ರಕ್ರಿಯೆಯ ಚಿತ್ರಣ. ಇನ್ನು ವಿಶುಕುಮಾರ್ ಕುರಿತ ನಿಮ್ಮ ಟಿಪ್ಪಣಿ ತುಂಬಾ ಕರಾರುವಾಕ್ಕಾಗಿದೆ. ಅವರೊಬ್ಬ ಸಜ್ಜನಿಕೆ, ಪ್ರಾಮಾಣಿಕತೆ ಮತ್ತು ದಕ್ಷ ಅಧಿಕಾರಿಯಾಗಿದ್ದರು. ನಿಮ್ಮ ಪತ್ರಿಕೆಯ ಜೊತೆಯಲ್ಲಿ ನಾನೂ ಸಹ ಅವರಿಗೆ ನೆಮ್ಮದಿಯ ವಿಶ್ರಾಂತ ಜೀವನವನ್ನು ಹಾರೈಸುತ್ತೇನೆ.

**–ಪ್ರೊ. ಎಚ್.ಎ ಸ್ ಈಶ್ವರ,** ಬೆಂಗಳೂರು

ನೀವು ಬರೆದಿರುವಂತೆ ವಿಶುಕುಮಾರ್. ಪ್ರಾಮಾಣಿಕ, ಸುಸಂಸ್ಕೃತ ನಡವಳಿಕೆಯ ಅಧಿಕಾರಿಯಾಗಿದ್ದರು. ಅವರು 'ಶ್ರೀರಾಮಾಯಣ ದರ್ಶನಂ' ನಾಟಕದ ಮಾತ್ರವಲ್ಲ, ಈಗ ರಾಜ್ಯ ಯಾತ್ರೆಯಲ್ಲಿರುವ 'ಬಾಪು ಪಾಪು' ನಾಟಕದ ರೂವಾರಿಯೂ ಹೌದು.

**–ರಾಜೇಶ್ವರಿ ತೇಜಸ್ವಿ,** ಮೂಡಿಗೆರೆ

ಕಳೆದ ಸಂಚಿಕೆಯಲ್ಲಿನ ನಿಮ್ಮ ಮುಖಪುಟದ ಸಂಪಾದಕೀಯ ಸಾಮಾಜಿಕ ಚಿಂತಕರೆಂದು ಹೇಳಿಕೊಳ್ಳುವವರ ಟೊಳ್ಳುತನ ಕುರಿತ ಮಾರ್ಮಿಕ ಟಿಪ್ಪಣಿಯಾದರೆ ರಾಜಕೀಯ ಸಂಪಾದಕೀಯವು ಎಂದಿನ ವಸ್ತುನಿಷ್ಠ ಮತ್ತು ಪರಿಣಾಮಕಾರಿ ವಿಶ್ಲೇಷಣೆಯಾಗಿತ್ತು . ಮನು ಎಸ್. ಪಿಳ್ಳೈ ಅವರ ಚರಿತ್ರೆಯ ಕೋಮುವಾದೀಕರಣ ತನ್ನ ಬೆಚ್ಚಿಬೀಳಿಸಿವ ಚಾರಿತ್ರಿಕ ವಾಸ್ತವಾಂಶಗಳಿಂದ ನಮ್ಮ ಕಣ್ಣು ತೆರೆಸುವಂತಿತ್ತು. ಇನ್ನು ;ಶ್ರೀ ರಾಮಾಯಣ ದರ್ಶನಂ' ನಾಟಕವನ್ನು ಎಲ್ಲರೂ ಕುವೆಂಪು ಅವರ ಮೇಲಿನ ಅಭಿಮಾನದಿಂದಾಗಿ ಸಾರಾಸಗಟಾಗಿ ಹೊಗಳುತ್ತಿರುವಾಗ ನೀವು ಮೂಲಕೃತಿ ಮತ್ತು ನಾಟಕ ರೂಪಗಳೆರಡರ ಬಗ್ಗೆಯೂ ಆಳವಾದ ಒಳನೋಟಗಳೊಂದಿಗೆ ಬರೆದಿರುವುದು ನನಗೆ ಹಿಡಿಸಿತು.

**–ಎಂ.ಎನ್. ರಾಮಚಂದ್ರ,** ದಾವಣಗೆರೆ

ಈ ಸಲದ ಸಂಚಿಕೆಯಲ್ಲಿ ಸಂವಿಧಾನ ಕುರಿತ ಎರಡು ಬರಹಗಲು ಒಂದಕ್ಕೊಂದು ಸಂವಾದಿಯಾಗಿದ್ದು ಬಂಜಗೆರೆ ಜಯಪ್ರಕಾಶ್ ಅವರ ಬರಹ ನಮ್ಮ ಸಂವಿಧಾನದಲ್ಲಿನ ಕೆಲ ಮುಖ್ಯ ಸಮಸ್ಯೆಗಳ ಬಗ್ಗೆ ವಿಶೇಷ ಬೆಳಕು ಚೆಲ್ಲುವಂತಿದೆ.

**–ಸಿ.ಆರ್. ಹಿರೇಮಠ,** ಹುಬ್ಬಳ್ಳಿ

# ಭಾಷಾ ಚಿಂತನೆ–ಸಾಹಿತ್ಯ–ದೇಶಪ್ರೇಮ ಇತ್ಯಾದಿ ಮೂರು ಟಿಪ್ಪಣಿಗಳು

## ಪ್ರಿಯ ಕೆವಿಎನ್, ಏನಿದು ನಿಮ್ಮ ಕಥೆ?



**ಕೆ**.ವಿ. ನಾರಾಯಣರ ನುಡಿಗಳ ಅಳಿವು' ಪುಸ್ತಕದ ಬಗ್ಗೆ ಡಾ. ಎನ್.ಎಸ್. ಗುಂಡೂರ ಅವರು ನಮ್ಮ ಪತ್ರಿಕೆಯ ಕಳೆದ ಸಂಚಿಕೆಯಲ್ಲಿ ಅದರಲ್ಲಿನ ಎಲ್ಲ ವಾದಗಳನ್ನೂ ಬೇಷರತ್ತಾಗಿ ಒಪ್ಪಿ ಪುಸ್ತಕವನ್ನು ಶ್ಲಾಘಿಸಿ ಬರೆದಿದ್ದಾರೆ. ಅದು ಅವರ ಅಭಿಪ್ರಾಯ. ಆದರೆ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಹೊಡೆತ ಸಾಲದೆಂಬಂತೆ ನಮ್ಮ ಮುಖ್ಯ ಮಂತ್ರಿಗಳು ಈಗಿರುವ ಕನ್ನಡ ಮಾಧ್ಯಮ ಶಾಲೆಗಳನ್ನು ಹಂತಾನುಹಂತವಾಗಿ ಇಂಗ್ಲಿಷ್ ಮಾಧ್ಯಮ ಶಾಲೆಗಳನ್ನಾಗಿ ಪರಿವರ್ತಿಸಲು ಹೊರಟಿರುವ ಈ ಸಂದರ್ಭದಲ್ಲಿ ಹೊರಬಂದಿರುವ ಈ ಪುಸ್ತಕ ಮುಖ್ಯಮಂತ್ರಿಗಳ ಕ್ರಮವನ್ನು ವಿರೋಧಿಸುವವರ ವಾದಗಳನ್ನು ಅಲ್ಲಗೆಳೆಯುವ ಪರೋಕ್ಷ ಪ್ರಯತ್ನ ಮಾಡುತ್ತಾ ಆತಂಕವನ್ನು ಸೃಷ್ಟಿಸುವಂತಿದೆ ಎಂಬ ನನ್ನ ಅಭಿಪ್ರಾಯವನ್ನೂ ಇಲ್ಲಿ ದಾಖಲಿಸಲು ಈ ಟಿಪ್ಪಣಿ ಬರೆಯುತ್ತಿರುವೆ.

ಲೇಖಕರ ವಿಚಾರಗಳು ಅಭಿಪ್ರಾಯ ಅಥವಾ ವಾದಗಳ ರೂಪದಲ್ಲಿದ್ದರೆ ಅವನ್ನು ಅದೂ ಒಂದು ಬದಿಯ ಅಭಿಪ್ರಾಯ ಅಥವಾ ವಾದವೆಂದು ಓದಬಹುದಿತ್ತು. ಆದರೆ ಈ ಪುಸ್ತಕ ಇವೆಲ್ಲ ಭಾಷಾಶಾಸ್ತ್ರದ ತತ್ವ ಮತ್ತು ಮೀಮಾಂಸೆಯ ನೆಲೆಯವು ಎಂದು ಹೇಳುತ್ತಾ ಎಲ್ಲೋ ಓದುಗರನ್ನು ದಾರಿ ತಪ್ಪಿಸುವ ಪ್ರಯತ್ನ ಮಾಡುತ್ತದೆ ಎಂದು ನನನಗೆ ಅನ್ನಿಸಿದೆ. ನನ್ನ ಈ ಅನ್ನಿಸಿಕೆಗೆ ಕಾರಣವಾದ ಕೆಲ ಮುಖ್ಯ ಅಂಶಗಳತ್ತ ಮಾತ್ರ ಇಲ್ಲಿ ಓದುಗರ ಗಮನ ಸೆಳೆಯಬಯಸುತ್ತೇನೆ.

೧. ಜನ ಉಳಿದರೆ ಮಾತ್ರ ಅವರ ನುಡಿ ಉಳಿಯಬಲ್ಲದು ಎಂಬ ವಾದದ ಮೂಲಕ ಜನರ ಲೌಕಿಕ ಅಭ್ಯುದಯಕ್ಕಾಗಿ ಇಂಗ್ಲಿಷ್ ಮಾಧ್ಯಮ ಅಗತ್ಯವೆನಿಸಿದರೆ ಅದೇನೂ ತಪ್ಪಲ್ಲ ಎಂಬ ಸೂಚನೆಯನ್ನು ಈ ಪುಸ್ತಕ ನೀಡುತ್ತದೆ. ಆದರೆ ಲೌಕಿಕ ಅಭ್ಯುದಯ ಎಂದರೇನು, ತನ್ನ ಭಾಷೆಯನ್ನು ಮಾಧ್ಯಮವಾಗಿ ಒಲ್ಲದ ಶಿಕ್ಷಣದ ಮೂಲಕ ಸಾಧಿಸಬಯಸುವ ಲೌಕಿಕ ಅಭ್ಯುದಯದ ಗುಣಮಟ್ಟ ಎಂಥಹುದು ಎಂಬ ಬಗ್ಗೆ ಇಲ್ಲಿ ಚರ್ಚೆಯ ಸುಳಿವೇ ಇಲ್ಲ. ಅಧಿಕಾರ ಕೇಂದ್ರಗಳ ಪಲ್ಲಟದ ರಾಜಕಾರಣದ ಬಗ್ಗೆ ಭಾಷೆಯ ಸ್ವರೂಪದ ಬಗ್ಗೆ ಎಚ್ಚರಿಸುವ ಈ ಪುಸ್ತಕ ಇಂತಹ ಪಲ್ಲಟ ಸೃಷ್ಟಿಸುವ ಲೌಕಿಕ ಅಭ್ಯುದಯದ ಯೋಜನೆಗಳ ಬಗ್ಗೆ ಏನೂ ಹೇಳದಿರುವುದು ಆಶ್ಚರ್ಯಕರ! ಜೊತೆಗೆ ಈ ಲೇಖಕರ ಪ್ರಕಾರ ಜನಸಮುದಾಯದ ಭಾಷೆಯನ್ನೇ ಶಿಕ್ಷಣ ಮಾಧ್ಯಮವನ್ನಾಗಿ ಉಳಿಸಿಕೊಂಡು ಆ ಸಮುದಾಯ ಹೊಂದಬಹುದಾದ ಲೌಕಿಕ ಅಭ್ಯುದಯದ ಸಾಧ್ಯತೆಗಳೇ ಇಲ್ಲ.

೨. ಲೇಖಕರ ಮೇಲಿನ ವಾದಕ್ಕೆ ಪೂರಕವಾಗಿ, ಸಮುದಾಯ ತನ್ನ ಭಾಷೆಯನ್ನು ಕಳೆದುಕೊಂಡಾಕ್ಷಣ ಅದರ ಜೀವನದೃಷ್ಟಿ, ಕ್ರಮ ಮತ್ತು ಸಾಂಸ್ಕೃತಿಕ ನೆನಪುಗಳು ಅಳಿಸಿಹೋಗುವುದಿಲ್ಲ ಎಂದು ಹೇಳುವ ಈ ಪುಸ್ತಕ ಇವೆಲ್ಲವನ್ನೂ ತಮ್ಮದೇ ಒಂದು ತರ್ಕದ ವ್ಯಾಪ್ತಿಯಲ್ಲಿ ವ್ಯಾಖ್ಯಾನಿಸಿ ಭಾಷೆಯೆಂಬುದನ್ನು ಒಂದು ಸಮುದಾಯದ ತಾರ್ಕಿಕ ಶಕ್ತಿಯ ಶಬ್ದ ಸಾಧನದ ಮಟ್ಟಕ್ಕೆ ಇಳಿಸಿಬಿಡುತ್ತದೆ. ಇದಕ್ಕೆ ಬಹುಶಃ ಕಾರಣ ಭಾಷೆಯೊಂದನ್ನು ಅದರ ಅತ್ಯುನ್ನತ ಪರಿಣಾಮ ರೂಪವಾದ ಕಾವ್ಯದ ಮೀಮಾಂಸೆ ಭಾಗವಾಗಿ ನೋಡುವ ಭಾರತೀಯ ಮಾರ್ಗವನ್ನು ತೊರೆದು ಅದನ್ನು ಪಾಶ್ಚಿಮಾತ್ಯ ಭಾಷಾಶಾಸ್ತ್ರದ ಸ್ಫೂರ್ತಿಯಲ್ಲಿ ಕೇವಲ ಲೌಕಿಕ ಸಂವಹನದ ಸಾಧನವಾಗಿ ಅಧ್ಯಯನ ಮಾಡಹೊರಟಿರುವುದು ಇರಬಹುದು.

೩. ಎಲ್ಲ ಮನುಷ್ಯರಿಗೂ ಸಾಮಾನ್ಯವಾದ ಭಾಷೆಯ 'ಕಸುವು' ಎಂಬುದೊಂದಿದ್ದು, ಇದರಿಂದ ಯಾರು ಯಾವುದೇ ಭಾಷೆಯನ್ನು ಬಳಸಲು ಕಲಿಯಬಹುದು ಎಂದು ಈ ಪುಸ್ತಕ ಹೇಳುತ್ತದೆ. ಹಾಗಿದ್ದರೆ ಶ್ರವಣ ದೋಷವುಳ್ಳವರೂ ತಮ್ಮಲ್ಲಿನ ಈ ಭಾಷಾ ಕಸುವಿನಿಂದ ಒಂದು ಭಾಷೆ ಮಾತಾಡಬಹುದಿತ್ತಲ್ಲ! ಹಾಗಾಗಲು ಸಾಧ್ಯವಿಲ್ಲ ಎನ್ನುವುದಾದರೆ, ಯಾರೇ ಒಂದು ಭಾಷೆ ಕಲಿಯಲು ಆ ಭಾಷೆಯನ್ನಾಡುವ ಒಂದು ಭಾಷಾ ಪರಿಸರ ಬೇಕಾಗುತ್ತದೆ ಎಂದು ಹೇಳಬೇಕಾಗುತ್ತದೆ. ಆದರೆ ಅಂತಹ ಚರ್ಚೆಯ ಸುಳಿವೇ ಈ ಪುಸ್ತಕದಲ್ಲಿಲ್ಲ.

೪. ಕನ್ನಡದಂತಹ ಭಾಷೆಗೆ ಅಳಿವಿನ ಆತಂಕವಿಲ್ಲ ಎಂದು ಸೂಚಿಸುವ ಈ ಪುಸ್ತಕ ಭಾಷೆ ಬದಲಾಗಬಹುದು, ಅದು ಸಹಜ ಎನ್ನುತ್ತದೆ. ಬದಲಾವಣೆ ಸಹಜ ಎನ್ನುವುದು ಒಪ್ಪಬೇಕಾದದ್ದೇ. ಆದರೆ ಆ ಬದಲಾವಣೆಯ ಹಿಂದಿನ ರಾಜಕಾರಣ ಮತ್ತು ಅದರ ಸಾಧಕ ಬಾಧಕಗಳ ಚರ್ಚೆಯೂ ಬೇಡವೇ? ಈ ಪುಸ್ತಕದಲ್ಲಿ ಅದರ ಸುಳಿವೇ ಇಲ್ಲ.

೫. ಭಾಷೆ ಬದಲಾಗುವುದು ಸಹಜ ಎನ್ನುವ ಲೇಖಕರು ಈ ಪುಸ್ತಕದಲ್ಲಿ ಹಠ ಮಾಡಿದಂತೆ, ಕಾಲಾನುಕಾಲದಲ್ಲಿ ಬದಲಾಗಿರುವ ಕನ್ನಡ ಭಾಷೆಯನ್ನು ಒಪ್ಪದೆ ತಮ್ಮ ಆಯ್ಕೆಯ ಕೆಲವು ಕನ್ನಡ ಶಬ್ದಗಳನ್ನು ಹೆಕ್ಕಿ ತೆಗೆದು ಮತ್ತು ಇನ್ನು ಕೆಲವನ್ನು ಹೊಸದಾಗಿ ಟಂಕಿಸಿ ಚಲಾವಣೆಗೆ ತಂದಿದ್ದಾರೆ! ಇದನ್ನು ಅವರು ಒಪ್ಪದ ಭಾಷಾ ರಾಜಕಾರಣದ ವಿರುದ್ಧ ಅಸ್ತ್ರವಾಗಿ ಬಳಸಿದ್ದಾರೆ ಎಂದುಕೊಳ್ಳಲೂ, ಈ ಪ್ರಯೋಗ ಯಾವುದೇ ಸುಸಂಗತ ಆಧಾರ ತತ್ವವನ್ನೂ ಸೂಚಿಸಲಾಗದಷ್ಟು ಹವ್ಯಾಸಿತನದಿಂದ ಕೂಡಿ ಜಾಳುಜಾಳಾಗಿದೆ. ಪ್ರಿಯ ಕೆವಿಎನ್, ಏನಿದು ನಿಮ್ಮ ಕಥೆ?

## ಇದು ದೇಶಪ್ರೇಮವೂ ಅಲ್ಲ, ಅದು ಸಾಹಿತ್ಯ ಸಂಭ್ರಮವೂ ಅಲ್ಲ!



**ಧಾ**ರವಾಡ ಸಾಹಿತ್ಯ ಸಂಭ್ರಮದಲ್ಲಿ ಶಿವ ವಿಶ್ವನಾಥನ್ ಭಾಷಣಕ್ಕೆ ಸಂಬಂಧಿಸಿದಂತೆ ನಡೆದ ದಾಂಧಲೆ ಯಾವ ರೀತಿಯಿಂದಲೂ ಅಪೇಕ್ಷಣೀಯವಲ್ಲ. ನಮ್ಮ ಸೇನೆಯು ವಿಶೇಷ ಅಧಿಕಾರ ಕಾಯಿದೆಯ ಮರೆಯಲ್ಲಿ ಕಾಶ್ಮೀರ ಕಣಿವೆ ಮತ್ತು ಈಶಾನ್ಯ ಭಾರತದ ಕೆಲವೆಡೆ ಮಾನವ ಹಕ್ಕುಗಳ ಉಲ್ಲಂಘನೆಯ ಕೃತ್ಯಗಳ ಮತ್ತು ಈ ಬಗ್ಗೆ ಆಯಾ ಭಾಗಗಳ ಜನ ವಿವಿಧ ರೀತಿಯಲ್ಲಿ ಪ್ರತಿಭಟನೆಗಳನ್ನು ದಾಖಲಿಸುತ್ತಿರುವ ಸುದ್ದಿ ಯಾರಿಗೂ ಹೊಸದೇನಲ್ಲ. ಹಾಗೆ ನೋಡಿದರೆ ಸ್ವತಃ ಸೇನೆಯೇ ಇಂತಹ ಕೃತ್ಯಗಳ ತನಿಖೆ ನಡೆಸಿ ಅಪರಾಧಿಗಳನ್ನು ಶಿಕ್ಷಿಸುವ ಸುದ್ದಿಗಳನ್ನೂ ನಾವು ಓದುತ್ತಿರುತ್ತೇವಲ್ಲ. ಹಾಗಾಗಿ ಸೇನೆ ತಪ್ಪೇ ಮಾಡುವುದಿಲ್ಲ ಎಂದು ಹೇಳಲಾಗದು. ಸೇನೆಯನ್ನು ಗೌರವಿಸೋಣ. ಪೂಜ್ಯ ಭಾವ ಅನಾಹುತಕಾರಿ.

. ದೇಶಪ್ರೇಮ ಎಂದರೆ ದೇಶದ ಜನತೆಯ ಪ್ರೇಮ. ಕಾಶ್ಮೀರ ಮತ್ತು ಈಶಾನ್ಯ ಭಾರತದಲ್ಲಿರುವವರೂ ನಮ್ಮ ಸೋದರ ಪ್ರಜೆಗಳೇ ಎಂಬ ಭಾವನೆ ನಮ್ಮ ಹೃದಯದಲ್ಲಿರುವುದಾದರೆ ಮಾತ್ರ ಶಿವ ವಿಶ್ವನಾಥನ್ ಅವರ ಮಾತುಗಳ ಹಿಂದಿನ ಸದ್ಭಾವನೆಯನ್ನು ಸಹಾನುಭೂತಿಯಿಂದ ಅರ್ಥ ಮಾಡಿಕೊಳ್ಳಲು ಸಾಧ್ಯ

ಆದರೆ ಈ ಬಗ್ಗೆ ಸೂಕ್ತ ಸ್ಪಷ್ಟೀಕರಣ ನೀಡಿದ್ದು ಸಾಲದೆಂಬಂತೆ ಸಾಹಿತ್ಯ ಸಂಭ್ರಮದ ಸಂಘಟಕರು ಸಾರಾಸಗಟಾಗಿ ಕ್ಷಮೆ ಕೇಳಿರುವುದು ವಿಷಾದಕರ. ಮೊದಲಾಗಿ, ಸಾಹಿತ್ಯ 'ಸಂಭ್ರಮ'ದಲ್ಲಿ ಸಾಹಿತ್ಯೇತರ ವಿಷಯಗಳನ್ನು ಕುರಿತ ಗೋಷ್ಠಿಗಳ ಬಡಿವಾರವೇಕೋ ತಿಳಿಯದು. ಸಾಹಿತ್ಯ ಕುರಿತ ಈ ಮಿಸಳಭಾಜಿ ಧೋರಣೆಯೇ ಇಂತಹ –ಬರಗೂರರ ಉದ್ಘಾಟನಾ ಭಾಷಣವೂ ಸೇರಿದಂತೆ–ಅನಾಹುತಗಳಿಗೂ ಕಾರಣವಾಗುವುದು ಎಂಬುದು ಸಂಘಟಕರಿಗೆ ಗೊತ್ತಾದರೆ ಒಳ್ಳೆಯದು.

## ಭೈರಪ್ಪನವರ ಶುದ್ಧ ಸಾಹಿತ್ಯವಾದ!



ಎಸ್.ಎಲ್ ಭೈರಪ್ಪನವರು ತಾವು ಶುದ್ಧ ಸಾಹಿತ್ಯವಾದಿಯೆಂದೂ, ಸಾಹಿತಿಗಳು ಚಳುವಳಿಗಳಲ್ಲಿ ಭಾಗವಹಿಸದರೆ ಅವರ ಮನಸ್ಸು ಕಲುಷಿತವಾಗುವುದೆಂದೂ ಹೇಳಿದ್ದಾರೆ, ಅವರ 'ಧರ್ಮಶ್ರೀ', 'ತಬ್ಬಲಿಯು ನೀನಾದೆ ಮಗನೆ', 'ಸಾರ್ಥ', 'ಆವರಣ', ಕವಲು' ಮುಂತಾದ ಕಾದಂಬರಿಗಳನ್ನು ಓದಿದವರಿಗೆ ಅವರ ಈ ಮಾತು ಇಂದಿನ ವಿವಾದಾಸ್ಪದ ಹಿಂದೂವಾದಿ ರಾಜಕಾರಣದ ಹಿನ್ನೆಲೆಯಲ್ಲಿ ಅಮಾಯಕವಾಗಿ ಮಾತ್ರ ಕೇಳಿಸುತ್ತದೆ. ಇನ್ನು ಇತ್ತೀಚಿನ ಅವರ 'ಮೋದಿ ಇನ್ನೂ ಮೂರು ಅವಧಿಗೆ ಪ್ರಧಾನಿಯಾದರೆ ದೇಶಕ್ಕೆ ಒಳ್ಳೆಯದು' ಅಥವಾ 'ನೆಹರೂ, ಗಾಂಧಿ ಸೂಚನೆಯಂತೆ ಪ್ರಧಾನಿಯಾದರೇ ಹೊರತು ಪ್ರಜಾತಾಂತ್ರಿಕ ಮಾರ್ಗದಿಂದಲ್ಲ' ಇತ್ಯಾದಿ ಮಾತುಗಳು ಯಾವ ಸೀಮೆಯ ಶುದ್ಧ ಸಾಹಿತ್ಯ ಮನಸ್ಸಿನ ಮಾತುಗಳು ಎಂದು ಕೇಳಬೇಕಾಗುತ್ತದೆ. ಚಳುವಳಿ ಎಂದರೆ ಬೀದಿಯಲ್ಲಿ ಮೆರವಣಿಗೆ ಹೋಗುವುದು ಮಾತ್ರವೆಂದಲ್ಲವಲ್ಲ? ಲೋಕಸಭಾ ಚುನಾವಣೆಗಳು ಹತ್ತಿರ ಬರುತ್ತಿದ್ದಂತೆಯೇ ಭೈರಪ್ಪ ಸಾಹಿತ್ಯ ಶಿಬಿರ, ಭೈರಪ್ಪ ಸಾಹಿತ್ಯೋತ್ಸವಗಳು ಆರಂಭವಾಗಿರುವುದರ ಹಿಂದಿನ ರಾಜಕೀಯ ಉದ್ದೇಶವನ್ನೂ ಜನ ಗಮನಿಸದೆ ಇಲ್ಲ. 'ಬೆಕ್ಕು ಕಣ್ಮುಚ್ಚಿಕೊಂಡು ಹಾಲು ಕುಡಿದಂತೆ' ಎಂಬ ಮಾತು ಕನ್ನಡ ಅರಿವಿನ ತುಂಬ ಹಳೆಯ ಮಾತೆಂಬುದು ಭೈರಪ್ಪನವರಿಗೆ ಮರೆತುಹೋದಂತಿದೆ!

**–ಡಿಎಸ್ಸೆನ್**

ಧರ್ಮವಿಚಾರ ಪುಟ

# ರಾಮಕೃಷ್ಣ ಪರಮಹಂಸರ ವಿಚಾರಗಳು



ಆಧುನಿಕ ಕಾಲದ ಭಾರತದ ಧರ್ಮ ಸುಧಾರಕರಲ್ಲಿ ರಾಮಕೃಷ್ಣ ಪರಮಹಂಸರದ್ದು(ಫ್ರಬ್ರುವರಿ, ೧೮೩೬ರಿಂದ ೧೬ ಆಗಸ್ಟ್, ೧೮೮೬) ಬಹು ದೊಡ್ಡ ಹೆಸರು. ಅವಿಭಜಿತ ಬಂಗಾಳದ ಕಮರಪುಕರ ಎಂಬ ಕುಗ್ರಾಮದಲ್ಲಿ ಬಡ ಬ್ರಾಹ್ಮಣ ಕುಟುಂಬದಲ್ಲಿ ಜನಿಸಿ ಗಧಾಧರ ತನ್ನ ತಂದೆಯ ಸಾವಿನ ನಂತರ ಜೀವನೋಪಾಯ ಹುಡುಕಿಕೊಂಡು ತನ್ನ ಅಣ್ಣನೊಂದಿಗೆ ಕೊಲ್ಕೊತ್ತಾ ಸೇರಿದ. ಅಲ್ಲಿನ ದಕ್ಷಿಣೇಶ್ವರದಲ್ಲಿ ರಾಣಿ ರಾಸಮಣಿ ಎಂಬ ಶೂದ್ರ ಶ್ರೀಮಂತ ಮಹಿಳೆಯು ಕಟ್ಟಿಸಿದ್ದ ಭವ್ಯ ಕಾಳಿ ದೇವಾಲಯದ ಪೂಜಾರಿಯಾಗಿ ಸೇರಿದ ನಂತರ ನಡೆಸಿದ ಅಧ್ಯಾತ್ಮಿಕ ಸಾಧನೆಗಳ ಮೂಲಕ ಪರಮಹಂಸ ಪದವಿಗೇರಿ ರಾಮಕೃಷ್ಣ ಪರಮಹಂಸರೆನಿಸಿಕೊಂಡ ಕಥೆ ಬಹು ರೋಚಕವಾದದ್ದು. ಕಾಳಿಯ ವಿಗ್ರಹದ ಮೂಗಿನ ಮುಂದೆ ದಾರ ಹಿಡಿದು ಅಲ್ಲಿ ಕಾಳಿ ಜೀವಂತವಾಗಿದ್ದಾಳೆ ಎಂದು ಖಚಿತಪಡಿಸಿಕೊಂಡವರು. ಬದುಕಿನಲ್ಲಿ ಸಂದಿಗ್ಧಗಳು ಎದುರಾದಾಗಲೆಲ್ಲ ಕಾಳಿಯೊಂದಿಗೆ ಮಾತಾಡಿ ಮನಸ್ಸನ್ನು ತಿಳಿ ಮಾಡಿಕೊಳ್ಳುತ್ತಿದ್ದವರು. ಅವರಿಗೆ ಅಧ್ಯಾತ್ಮ, ಭಗವತ್‌ಚಿಂತನೆಗಳು ಲೌಕಿಕ ಬದುಕಿನ ವಿಸ್ತರಣೆ ಮಾತ್ರವಾಗಿದ್ದವು. ಹಾಗಾಗಿಯೇ ಅವರು ವೈಚಾರಿಕತೆಯ ಗಟ್ಟಿಬಂಡೆಯಂತಿದ್ದು ಅವರನ್ನು ಪರಿಪರಿಯಾಗಿ ಪರೀಕ್ಷಿಸಿದ ಯುವ ನರೇಂದ್ರನನ್ನು ಸ್ವಾಮಿ ವಿವೇಕಾನಂದರ ವಿಗ್ರಹವಾಗಿ ಕಡೆಯಲು ಸಾಧ್ಯವಾದದ್ದು. ಆಸಕ್ತರು ಅವರ ಗೃಹಸ್ಥ ಶಿಷ್ಯ ಮಹೇಂದ್ರನಾಥ ಗುಪ್ತ ('ಮ') ಬರೆದಿರುವ 'ವಚನವೇದ' ಸಂಪುಟಗಳನ್ನು (ಇವು ಕನ್ನಡಕ್ಕೆ ಅನುವಾದವಾಗಿ ರಾಮಕೃಷ್ಣ ಮಠದಿಂದ ಪ್ರಕಾಶಿತವಾಗಿವೆ) ಪರಾಂಬರಿಸಬಹುದು. ತೋತಾಪುರಿ, ಭೈರವಿ ಬ್ರಾಹ್ಮಣಿ ಮುಂತಾದ ವಿದ್ಯಾಗುರುಗಳ ಮಾರ್ಗದರ್ಶನದಲ್ಲಿ ವೇದಾಂತ, ತಂತ್ರಗಳಲ್ಲದೆ ಸೂಫಿ, ಕ್ರೈಸ್ತ ಧರ್ಮಗಳ ಅನುಷ್ಠಾನ ಮಾಡಿ ಸಕಲ ಧರ್ಮಗಳ ಸಾರ ಒಂದೇ ಎಂದು ಕಂಡುಕೊಂಡ ಪರಮಹಂಸರು ಸ್ವಾಮಿ ವಿವೇಕಾನಂದ, ಸ್ವಾಮಿ ಶಿವಾನಂದ, ಸ್ವಾಮಿ ಶಾರದಾನಂದ ಮುಂತಾದ ತಮ್ಮ ಸಾಧಕ ಶಿಷ್ಯರ ಮೂಲಕ ಪ್ರತಿಪಾದಿಸಿದ್ದು ಧರ್ಮ ಸಮನ್ವಯವನ್ನೇ. ಅವರ ಪತ್ನಿ ಶಾರದಾದೇವಿಯವರೂ ಪತಿಯಂತೆಯೇ ಅಧ್ಯಾತ್ಮಿಕ ಜೀವಿಯಾಗಿ ಪರಮಹಂಸರ ಬಾಳಿಗೆ ಒಂದು ವಿಶೇಷ ಪ್ರಭೆ ಒದಗಿಸಿದರು. ಕನ್ನಡದಲ್ಲಿ ಕವಿ ಕುವೆಂಪು ಮೂಡಿದ್ದೂ ರಾಮಕೃಷ್ಣ ಪರಮಹಂಸರ ಅಧ್ಯಾತ್ಮಿಕ ಪ್ರಭಾವದಲ್ಲೇ ಎಂಬುದನ್ನೂ ಇಲ್ಲಿ ಗಮನಿಸಬಹುದು.

ದೈನಂದಿನ ಜೀವನದ ಸಂಗತಿಗಳು ಮತ್ತು ಘಟನೆಗಳನ್ನು ಆಧರಿಸಿದ ಮಾತು–ನುಡಿಗಟ್ಟುಗಳು ಮತ್ತು ಕಥೆಗಳ ಮೂಲಕವೇ ಅವರು ನೀಡಿದ ಧರ್ಮೋಪದೇಶಗಳು ಸಾಮಾನ್ಯ ಜನರಿಗೆಂದೇ ವಿನ್ಯಾಸಗೊಂಡವುಗಳು. ಅವುಗಳಲ್ಲಿ ಕೆಲವನ್ನು ಆಯ್ದು ಇಲ್ಲಿ ನೀಡಲಾಗಿದೆ.–ಸಂ.

–**ಮೊ**ದಲು ಹೃದಯ ಮಂದಿರವನ್ನು ಚೊಕ್ಕಟ ಮಾಡಬೇಕು. ಬಳಿಕ ವಿಗ್ರಹವನ್ನು ಪ್ರತಿಷ್ಠಾಪನೆ ಮಾಡಿ ಪೂಜೆಗೆ ವ್ಯವಸ್ಥೆ ಮಾಡಬೇಕು. ಏನೂ ಮಾಡಿಲ್ಲ, ಸುಮ್ಮನೆ ಭೋಂ ಭೋಂ ಎಂದು ಶಂಖ ಊದಿದರೆ ಏನಾದ ಹಾಗಾಯಿತು?

– ಜಾತಿ ಬೇಧ ನಿರ್ಮೂಲ ಮಾಡಲು ಇರುವುದು ಕೇವಲ ಒಂದೇ ಒಂದು ಮಾರ್ಗ. ಅದು ಭಕ್ತಿ ಮಾರ್ಗ. ಭಕ್ತರಿಗೆ ಜಾತಿ ಎಂಬುದೇ ಇಲ್ಲ. ಹೃದಯದಲ್ಲಿ ಭಕ್ತಿ ಅಂಕುರವಾಗಿಬಿಟ್ಟಿತು ಎಂದರೆ ಅಸ್ಪೃಶ್ಯ ಶುದ್ಧನಾಗಿಬಿಡುತ್ತಾನೆ. ಚಂಡಾಲ ಚಂಡಾಲನಾಗಿ ಉಳಿದುಕೊಳ್ಳುವುದಿಲ್ಲ. ಶ್ರೀಚೈತನ್ಯದೇವ ಆಚಂಡಾಲಾದಿಯಾಗಿ ಎಲ್ಲರನ್ನೂ ತಬ್ಬಿಕೊಳ್ಳುತ್ತಿದ್ದ.

– ಭಕ್ತಿಯೇ ಸಾರವಸ್ತು. ವಿಚಾರದ ಮೂಲಕ ಯಾರು ತಾನೇ ಭಗವಂತನನ್ನು ಅರಿಯಬಲ್ಲರು? ಆತನ ಅನಂತ ಐಶ್ವರ್ಯದ ಸಂಬಂಧವಾಗಿ ಅರಿತುಕೊಳ್ಳಬೇಕಾದ ಅವಶ್ಯಕತೆ ಏನಿದೆ ನನಗೆ? ಒಂದು ಸೀಸೆ ಮದ್ಯವೇ ನನ್ನನ್ನು ಮತ್ತನನ್ನಾಗಿ ಮಾಡುವಾಗ ಸೇಂದಿ ಅಂಗಡಿಯಲ್ಲಿ ಎಷ್ಟು ಪಿಪಾಯಿ ಮದ್ಯವಿದೆ ಎಂಬುದನ್ನು ಅರಿತುಕೊಳ್ಳುವುದರ ಅಗತ್ಯ ಏನಿದೆ ನನಗೆ?

– ಸಂಸಾರಕ್ಕೆ ಬದ್ಧರಾಗಿರುವ ಜೀವಿಗಳ ಬಗ್ಗೆ ಹೇಳುವುದಾದದರೆ, ಅವರನ್ನು ರೇಷ್ಮೆ ಹುಳುವಿಗೆ ಹೋಲಿಸಬಹುದು. ಅದು ಇಚ್ಛೆಪಟ್ಟರೆ ತನ್ನ ಗೂಡನ್ನು ಕತ್ತರಿಸಿ ಹೊರಕ್ಕೆ ಬರಬಲ್ಲುದು. ಆದರೆ ಬಹಳ ಪ್ರಯಾಸಪಟ್ಟು ತಾನೇ ಗೂಡನ್ನು ಕಟ್ಟಿರುವುದರಿಂದ ಅದು ಹಾಗೆ ಮಾಡಲು ಇಚ್ಛಿಸದು. ಅದು ಅಲ್ಲೇ ಸಾಯುತ್ತದೆ.

– ಸಾಮಾನ್ಯ ಜೀವಿಗಳು ಲೋಕ ಶಿಕ್ಷಣ ಮಾಡಲು ಹೆದರುತ್ತಾರೆ. ಸಾಮಾನ್ಯ ಕಡ್ಡಿ ಹೇಗೋ ಮಾಡಿ ತಾನು ಮಾತ್ರ ನೀರಿನ ಮೇಲೆ ತೇಲಿಹೋಗಬಲ್ಲುದು. ಆದರೆ ಅದರ ಮೇಲೇನಾದರೂ ಒಂದು ಹಕ್ಕಿ ಬಂದು ಕುಳಿತರೂ ಅದು ಮುಳುಗಿಹೋಗುತ್ತದೆ. ಆದರೆ ಮಹಾಪುರುಷರು ದಿಮ್ಮಿಗಳಂತೆ ಆ ವಿಧದ ದಿಮ್ಮಿ ತಾನು ತೇಲಿ ಹೋಗುವುದಲ್ಲದೆ ಮನುಷ್ಯರನ್ನೂ ಹಸುಗಳನ್ನೂ ಕೊನೆಗೆ ಆನೆಯನ್ನೂ ಹೊತ್ತುಕೊಂಡು ಹೋಗಿಬಿಡುತ್ತದೆ.

– ಒಮ್ಮೆ ಒಬ್ಬ ಕಳ್ಳ ರಾಧಾಕಾಂತ ದೇವಾಲಯಕ್ಕೆ ನುಗ್ಗಿ ದೇವರ ಆಭರಣಗಳನ್ನು ಕದ್ದುಕೊಂಡೊಯ್ದನು. ಆಗ ದೇವಾಲಯದ ಪರಿಚಾರಕ ಮಥುರನಾಥ ಬಾಬು ದೇವಾಲಯಕ್ಕೆ ಹೋಗಿ 'ಛೇ! ನೀನು ಎಂಥ ದೇವರು? ಒಡವೆಯನ್ನು ರಕ್ಷಿಸಿಕೊಳ್ಳಲಾರದೆ ಹೋದೆಯಲ್ಲ!' ಎಂದನು. ಆಗ ಪರಮಹಂಸರು, 'ಆ ಒಡವೆಯೇನೋ ನಿನಗೆ ಬಹಳ ಬೆಲೆಯುಳ್ಳ ವಸ್ತು. ಆದರೆ ದೇವರಿಗೆ ಅವೆಲ್ಲ ಮಣ್ಣಿನ ಹೆಂಟೆಗೆ ಸಮ. ನಿನ್ನದು ಎಂಥ ಬುದ್ಧಿ! ಎನ್ನುವರು.

– ಬ್ರಾಹ್ಮಣ ಸಂತರ್ಪಣೆಯ ಸಂದರ್ಭದಲ್ಲಿ ಮೊದಮೊದಲು ಬಹಳ ಗದ್ದಲ ಕೇಳಿ ಬರುತ್ತದೆ. ಎಲ್ಲರ ಮುಂದೆಯೂ ಊಟದ ಎಲೆ ಬಿತ್ತು ಎಂದರೆ ಗ್ಗದ್ದಲ ಕಡಿಮೆಯಾಗಿ 'ಅನ್ನ ಸಾರು ತಗೊಂಡು ಬನ್ನಿ, ತುಪ್ಪ ತನ್ನಿ' ಎಂಬ ಕೂಗುಗಳು ಕೇಳಿಬರುತ್ತವೆ. ಊಟ ಮಾಡಲು ಶುರು ಮಾಡಿದ ಕೂಡಲೇ ಮುಕ್ಕಾಲು ಭಾಗ ಶಬ್ದ ಅಡಗಿ ಮೊಸರು ಬಡಿಸಿದಾಗ ಕೇವಲ 'ಸುಪ್ ಸುಪ್' ಎಂಬ ಶಬ್ದ. ಬಳಿಕ ಶಬ್ದವೇ ಇಲ್ಲ. ನಂತರ ನಿದ್ರೆ. ಆಗ ಸಂಪೂರ್ಣ ನಿಶ್ಶಬ್ದ. ಅಧ್ಯಾತ್ಮ ಜೀವನದ ಆರಂಭದಲ್ಲಿ ಕರ್ತವ್ಯಗಳ ಗಡಿಬಿಡಿ ಬಹಳವಾಗಿರುತ್ತದೆ. ಭಗವಚ್ಚಿಂತನೆಯ ಕಡೆಗೆ ಮುಂದುವರೆದಷ್ಟೂ ಕರ್ಮ ಕಡಿಮೆಯಾಗಿ ಕಟ್ಟಕಡೆಗೆ ಕರ್ಮತ್ಯಾಗ ಉಂಟಾಗಿ ಸಮಾಧಿ ದೊರೆಯುತ್ತದೆ.

– ಸಾತ್ವಿಕ ಭಕ್ತ ಗೋಪ್ಯವಾಗಿ ಧ್ಯಾನ ಮಾಡುತ್ತಾನೆ, ಆಡಂಬರವಿಲ್ಲ. ಆತ ಹೊಗಳುಭಟ್ಟ ಅಲ್ಲ. ರಾಜಸಿಕ ಭಕ್ತ ಹಣೆಗೆ ತಿಲಕ ಇಟ್ಟುಕೊಳ್ಳುತ್ತಾನೆ. ಕೊರಳಿಗೆ ರುದ್ರಾಕ್ಷಿ ಮಾಲೆ ಹಾಕಿಕೊಳ್ಳುತ್ತಾನೆ. ಪೂಜೆಯ ಸಮಯದಲ್ಲಿ ರೇಷ್ಮೆ ವಸ್ತ್ರ ಉಡುತ್ತಾನೆ. ತಾಮಸಿಕ ಭಕ್ತನ ಶ್ರದ್ಧೆ ಉಕಜ್ವಲವಾದದ್ದು. ಡಕಾಯಿತರು ದರೋಡೆ ಮಾಡಿ ಜನರಿಂದ ಹಣ ಕಸಿಕೊಳ್ಳುವ ಹಾಗೆ. ಈ ವಿಧದ ಭಕ್ತ ಭಗವಂತನನ್ನು ಬಲಾತ್ಕರಿಸಿ ಆತನಿಂದ ವರ ಪಡೆದುಕೊಳ್ಳುತ್ತಾನೆ. ಡಕಾಯಿತರ ಹಾಗೆ 'ಬಡಿ! ಹಿಡಿ! ಕಡಿ!' ಎಂಬುದೇ ಆತನ ಮಂತ್ರ. ತಮೋ ಗುಣದ ಗತಿಯನ್ನು ಭಗವಂತನ ಕಡೆಗೆ ತಿರುಗಿಸಿದ್ದೇ ಆದರೆ ಆತನಿಗೆ ಇತರರಿಗಿಂತ ಬೇಗನೇ ಸಾಕ್ಷಾತ್ಕಾರ ದೊರೆತುಬಿಡುತ್ತದೆ.

– ನಮ್ಮ ಕೈಯಲ್ಲಿ ಏನು ತಾನೇ ಅರಿಯಲಾದೀತು? ಉಪ್ಪಿನ ಗೊಂಬೆ ಏನಾದರೂ ಸಮುದ್ರದ ಆಳ ಕಂಡುಹಿಡಿಯಲು ಪ್ರಯತ್ನಿಸಿದರೆ ಅದು ಹಿಂದುರುಗಿ ಬಂದು ಸಮಾಚಾರ ಕೊಡಲಾರದು. ಅದು ನೀರಿನಲ್ಲಿ ಕರಗಿ ಲಯವಾಗಿಬಿಡುತ್ತದೆ.

–ಸಂಸಾರ ಸಾಗರದಲ್ಲಿ ಈಜಲು ಕಷ್ಟವಾದಾಗಲೆಲ್ಲ 'ನಾನು ಹಿಮಾಲಯಕ್ಕೆ ಹೋಗಿ ಬಿಡುತ್ತೇನೆ!' ಎಂದು ಮನೆಯವರನ್ನು ಹೆದರಿಸುವ ಯಜಮಾನರಗಳು ಎಂದೂ ಮನೆ ಬಿಟ್ಟು ಹೋಗುವುದಿಲ್ಲ.ನಿಜವಾಗಿ ಸಂಸಾರದಲ್ಲಿ ರುಚಿ ಕಳೆದುಕೊಂಡವರು ಯಾರಿಗೂ ಏನೂ ಹೇಳದೆ ಹೆಗಲ ಮೇಲೆ ಚೌಕ ಹಾಕಿಕೊಂಡು ಹೋಗಿಬಿಡುತ್ತಾರೆ.

– ಎಲ್ಲಿವರೆಗೆ ಭಗವಂತ ನಮ್ಮಲ್ಲಿ ಅಹಂ ಎಂಬುದನ್ನು ಇಟ್ಟಿರುತ್ತಾನೋ ಅಲ್ಲಿವರೆಗೆ ಎಲ್ಲವೂ ಇವೆ. ಈ ಜಗತ್ತನ್ನು ಸ್ವಪ್ನವತ್ ಎಂದು ಹೇಳುವ ಹಾಗಿಲ್ಲ. ಒಲೆಯಲ್ಲಿ ಬೆಂಕಿ ಉರಿಯುತ್ತಿದೆ. ತಪ್ಪಲೆಯಲ್ಲಿ ಅಕ್ಕಿ–ಆಲೂಗಡ್ಡೆ–ಬದನೇಕಾಯಿ ಎಲ್ಲ ನೆಗೆಯುತ್ತಿರುತ್ತವೆ, 'ನಾವು ಇಲ್ಲಿದ್ದೇವೆ, ನಾವು ನಗೆದಾಡುತ್ತಿರುತ್ತೇವೆ' ಎಂಬುದಾಗಿ ಹೇಳುತ್ತಿರುವವೋ ಏನೋ ಎಂಬಂತೆ. ಈ ಶರೀರವೇ ತಪ್ಪಲೆ.ಮನಸ್ಸು ಬುದ್ಧಿಗಳೇ ನೀರು ಇಂದ್ರಿಯ ವಿಷಯ ವಸ್ತುಗಳೇ ಅಕ್ಕಿ ಬೇಳೆ ಆಲೂಗಡ್ಡೆ ಇತ್ಯಾದಿ. 'ಅಹಂ' ಎಂಬುದೇ ನಾವು ನೆಗೆದಾಡುತ್ತಿದ್ದೇವೆ' ಎಂಬ ಅಭಿಮಾನ. ಸಚ್ಚಿದಾನಂದನೇ ಬೆಂಕಿ.

('ವಚನವೇದ' ಸಂಪುಟಗಳಿಂದ ಸಂಗ್ರಹ: **ಸವಿತಾ ನಾಗಭೂಷಣ**)

## ಪುಸ್ತಕಾವಲೋಕನ

ಪು: ಸಿದ್ಧಿಯ ಕೈ ಚಂದ್ರನತ್ತ(ಕಾದಂಬರಿ) ಲೇ: **ಕೃಷ್ಣಮೂರ್ತಿ ಹನೂರು** ಪ್ರ: **ಅಭಿರುಚಿ ಪ್ರಕಾಶನ**, ಮೈಸೂರು ಪು: **೨೬೪** ಬೆಲೆ: ರೂ. ೧೯೦/-

### ಕಥೆಗೆ ಕಥೆ ಸೇರಿ ಸೃಷ್ಟಿಯಾಗುವ ಮಹಾ ಕಥೆ



**ಕೃ**ಷ್ಣಮೂರ್ತಿ ಹನೂರರ ಈ ಕಾದಂಬರಿ ಭಿನ್ನ ನೆಲೆಗಳ ಓದನ್ನು ಬಯಸುತ್ತದೆ. ಇಂತಹ ನೆಲೆಗಳ ಹುಡುಕಾಟವೊಂದನ್ನು ಈ ಬರಹದಲ್ಲಿ ಪ್ರಯತ್ನಿಸಲಾಗಿದೆ. ಕೃತಿಗೆ ಒಂದು ನಿರ್ದಿಷ್ಟ ಪ್ರಕಾರದ ಹೆಸರನ್ನು ಸೂಚಿಸಲೇಬೇಕೆಂಬ ಒತ್ತಾಯದ ದಿನಗಳಲ್ಲಿ ನಾವೆಲ್ಲ ಬದುಕುತ್ತಿರುವುದರಿಂದ ಲೇಖಕರು ಕೂಡ ಇದನ್ನು "ಕಾದಂಬರಿ"ಯೆಂದು ತಾಂತ್ರಿಕವಾಗಿ ಸೂಚಿಸಿದ್ದರೂ ಪ್ರಾರಂಭದ ಪುಟಗಳಲ್ಲೇ ಕಥನ ಪ್ರಸಂಗಗಳ ಗುಚ್ಛ, ಕಥಾನಕ, ಕಥಾನಕಗಳ ಹಿಂದು-ಮುಂದು ಇಂತಹ ಪದಗಳನ್ನು ಬಳಸಿ ಕೃತಿಯ ಭಿನ್ನ ಆಕೃತಿಯ ಬಗ್ಗೆ ಸೂಚನೆಗಳನ್ನು ಕೊಡುತ್ತಾರೆ. ಲಿಖಿತ ಮತ್ತು ಮುದ್ರಿತ ಪಠ್ಯ ಈ ಕಾಲದ ಅನಿವಾರ್ಯವಾದರೂ ಇಂತಹ ಪಠ್ಯಗಳಲ್ಲೂ ನಾವು ಮೌಖಿಕ ಸಂಸ್ಕೃತಿಯ ಪರಿಕರ ಮತ್ತು ಲಯಗಳನ್ನು ಬಳಸಿಕೊಳ್ಳುತ್ತಿದ್ದೇವೆ. ಹಾಗಾದಾಗ ಬರಹಗಾರ ಮತ್ತು ಓದುಗನ ಮುಂದೆ ಇರುವ ಆಯ್ಕೆಗಳ್ಯಾವುವು ಎಂಬ ಪ್ರಶ್ನೆಯನ್ನು ಕೂಡ ಈ ಕೃತಿ ಮುಂದಿಡುತ್ತದೆ. ನಮ್ಮಲ್ಲಿ ಸ್ವತಂತ್ರ ಕಥನ ಮೀಮಾಂಸೆ ಇನ್ನೂ ವಿಕಾಸಗೊಂಡಿಲ್ಲ. ಕತೆ ಕಾದಂಬರಿಗಳ ಬಗ್ಗೆ ಬರೆಯುವ ಒಣ ವಿಮರ್ಶಕರೆಲ್ಲ ಇಲ್ಲಿಯೂ ಕಾವ್ಯಪ್ರಕಾರದ ಪರಿಕರಗಳನ್ನೇ ಮಾನದಂಡವಾಗಿಟ್ಟುಕೊಂಡಿರುತ್ತಾರೆ ಅಥವಾ ಸಮಾಜ ವಿಜ್ಞಾನ, ಚರಿತ್ರೆಗಳು ಈಗಾಗಲೇ ಕಂಡುಕೊಂಡಿರುವ ಸತ್ಯಗಳ, ತೀರ್ಮಾನಗಳ ಹಿನ್ನೆಲೆಯಲ್ಲಿ ಆಶಯ ಪ್ರಧಾನ ವಿಮರ್ಶೆ ಬರೆಯುತ್ತಾರೆ. ಇದೆಲ್ಲವನ್ನೂ ಬದಿಗೆ ಸರಿಸಿ ನೀವು ಹನೂರರನ್ನು ಓದುವುದಾದರೆ ಕೃತಿಯ ಜೊತೆ ಅನುಸಂಧಾನಕ್ಕೆ ಬೇಕಾದ ನೆಲೆಗಳು ಸಿಗಬಹುದು. ದಯವಿಟ್ಟು ಪ್ರಯತ್ನಿಸಿ.

ಬಹುತ್ವದ ಬಗ್ಗೆ ನಾವು ಮಾತನಾಡುವಾಗಲೆಲ್ಲ ಭಿನ್ನ, ವೈವಿಧ್ಯ ವೈಚಾರಿಕ ಮಾರ್ಗಗಳ ಬಗ್ಗೆ ಮಾತನಾಡುತ್ತಿರುತ್ತೇವೆ. ಈ ರೀತಿಯ ಮಾತುಗಳು ಸಾಹಿತ್ಯ ಸೃಷ್ಟಿ ಮತ್ತು ಓದಿನಲ್ಲಿ ಮೂರು ಕಾಸಿನ ಪ್ರಯೋಜನಕ್ಕೆ ಬರುವುದಿಲ್ಲ. ಒಂದೇ ಕಾಲದಲ್ಲಿ ಜನ ಬದುಕನ್ನು ಹಲವು ವಿನ್ಯಾಸಗಳಲ್ಲಿ ನಡೆಸುತ್ತಿರುತ್ತಾರೆ. ಭಾಷೆ, ಸಾಮಾಜಿಕ ಹಿನ್ನೆಲೆ, ಪ್ರಾದೇಶಿಕ ಕೌಟುಂಬಿಕ ಅಂಶಗಳು, ತಲೆಮಾರು, ವ್ಯಕ್ತಿಯ ಸ್ವಭಾವ ಇವೆಲ್ಲವಗಳನ್ನೂ ಸೇರಿಸಿಕೊಂಡೇ ಈ ವಿನ್ಯಾಸಗಳು ನಿರ್ಮಾಣವಾಗುತ್ತಿರುತ್ತವೆ. ಇಂತಹ ಎಲ್ಲಾ ವಿನ್ಯಾಸಗಳು ಸದ್ಯದ ವೈಚಾರಿಕ ಅಳತೆಗೆ ಸಿಗದೇ ಕೂಡ ಹೋಗಬಹುದು. ಬರಹಗಾರನಿಗೆ ಇರುವ ಆಯ್ಕೆಯೆಂದರೆ, ಹೀಗಾಯಿತಲ್ಲ ಎಂದು ಕೊರಗದೆ, ತನಗೆ ಕಾಣುತ್ತಿರುವ ಎಲ್ಲ ವಿನ್ಯಾಸಗಳನ್ನು ನಿಷ್ಪಕ್ಷಪಾತವಾಗಿ ತೋರಿಸುತ್ತಾ ಹೋಗುವುದು. ಹನೂರರ ಆಯ್ಕೆ ಈ ರೀತಿಯದು. ಇದು ಯಾವ ಪ್ರಾದೇಶಿಕ ಹಿನ್ನೆಲೆಯದು, ಯಾವ ತಲೆಮಾರಿನದು, ಯಾವ ಭಾಷಿಕರದು, ಯಾವ ವರ್ಗಕ್ಕೆ ಸೇರಿದ್ದು ಎಂದು ನೀವು ಪ್ರಶ್ನಿಸಿಕೊಂಡರೆ, ಸುಲಭವಾದ ಉತ್ತರಗಳು ಇಲ್ಲಿ ಸಿಗಬಹುದು. ಆದರೆ ಕೃತಿಯಿಂದ ನೀವು ದೂರವಾಗುತ್ತೀರಿ.

ಇಲ್ಲಿ ಪಾತ್ರಗಳು, ಕತೆಗಳು ವಿಕಾಸವಾಗುವ ಕ್ರಮವನ್ನು ಗಮನಿಸಿ. (ನಿಮ್ಮ ಕನ್ನಡದವರಿಗೆ ಕ್ರಮಬದ್ಧ ಕತೆ ಹೇಳಲು ಬರುವುದಿಲ್ಲ - ಪುಟ ೪೬) ಪಾತ್ರಗಳು ಕಥನದಲ್ಲಿ ಬರುತ್ತವೆ ಅಥವಾ ಕಥನಕಾರ ಕರೆದುಕೊಂಡು ಬರುತ್ತಾನೆ. ತಮ್ಮ ಪಾತ್ರಗಳನ್ನು ಅವು ನಿರ್ವಹಿಸಿ ಹೋಗಬಹುದಲ್ಲ. ಇಲ್ಲಿ ಹಾಗಾಗುವುದಿಲ್ಲ. ಇಲ್ಲ, ಇಲ್ಲ ನಾನು ಮತ್ತು ನಾನೇ ಇನ್ನೊಂದು ಪಾತ್ರವನ್ನು, ಇನ್ನೊಂದಿಷ್ಟು ಕಥನಗಳನ್ನು ಕರೆದುಕೊಂಡು ಬರುತ್ತೇನೆ ಎಂದು ಪಟ್ಟುಹಿಡಿಯುತ್ತವೆ, ಕರೆದುಕೊಂಡೂ ಬಂದುಬಿಡುತ್ತವೆ. ಚಿತ್ರಾ ಕರೆದುಕೊಂಡು ಬರುವ ಕಣ್ಣಾಸೆಲ್ವಿ ಮತ್ತು ಚಿನ್ನಪಳನಿಯ ಕಥೆ, ಪಾರಸಮಣಿ ಕರೆದುಕೊಂಡು ಬರುವ ಒರಿಸ್ಸಾದ, ಈಶಾನ್ಯ ಭಾರತದ, ಮುಂಬೈನ ಜೀವನಗಾಥೆ, ಕಥನಕಾರ ಹೇಳುತ್ತಿರುವ ಮೂಲ ಕಥನಕ್ಕಿಂತಲೂ ಅಥವಾ ಈ ಪಾತ್ರಗಳನ್ನು, ಕತೆಗಳನ್ನು ಕರೆದುಕೊಂಡು ಬಂದವರ ಕಥೆಗಳಿಗಿಂತಲೂ ಉಜ್ವಲವಾಗಿವೆ, ಸಂಕೀರ್ಣವಾಗಿವೆ. ಪಾತ್ರವಾಗಿ ಬಂದವರು ಕತೆ ಹೇಳುವುದಲ್ಲದೆ, ಇನ್ನೊಬ್ಬರನ್ನು ಕರೆದುಕೊಂಡು ಬಂದು ಕತೆ ಹೇಳಿಸಿ, ಕತೆಯನ್ನು ದಾಟಿಸುವವರೂ ಆಗುತ್ತಾರೆ. ಕತೆಯು 'ಮಾತಿ'ನಲ್ಲಿ ಬೆಳೆಯುವ ಮೌಖಿಕ ಸಂಪ್ರದಾಯದ ಚಹರೆ ಇದು. ಹೀಗೆ ಕತೆ ಹೇಳುತ್ತಲೇ, ಕೇಳಿಸಿಕೊಳ್ಳುತ್ತಲೇ ಕಥನವು ವಿಕಾಸವಾಗುವ ಕ್ರಮದಲ್ಲಿ ಎಲ್ಲ ಕತೆಗಳೂ, ಪ್ರಸಂಗಗಳೂ, ಮೂಲ ಕಥೆಗೋ, ಕೇಂದ್ರ ಕಥೆಗೋ ಸೇರಿರಲೇಬೇಕೆ ಎಂಬ ಪ್ರಶ್ನೆಯೂ ಇದೆ. ಆಧುನಿಕ ಕತೆಯ ಶಿಲ್ಪ ಮತ್ತು ಕಟ್ಟಡ ಇದನ್ನು ಒಪ್ಪುವುದಿಲ್ಲ. ಆದರೆ ಮೌಖಿಕ ಸಂಪ್ರದಾಯದ ಕಥನ ಕಲೆ, ಕತೆಯ ವಿನ್ಯಾಸಕ್ಕಿಂತಲೂ ಹೆಚ್ಚಾಗಿ ಜೀವನ ವಿನ್ಯಾಸಕ್ಕೆ ಹತ್ತಿರವಾಗಿರಲು ಇಷ್ಟಪಡುತ್ತದೆ. ಏಕೆಂದರೆ, ಸಮುದಾಯದ ಕಥನದಲ್ಲಾಗಲಿ, ವ್ಯಕ್ತಿಯ ಕಥನದಲ್ಲಾಗಲೀ ಕೇಳಿದ, ಕಂಡ ಎಲ್ಲ ಪ್ರಸಂಗಗಳೂ ನೆನಪಿನಲ್ಲೂ, ಆಕೃತಿಯಲ್ಲೂ ಉಳಿಯುವುದಿಲ್ಲ. ಆದರೆ ಅಂತರ್ಗತವಾಗಿದ್ದುಕೊಂಡು ಪ್ರಧಾನ ಧಾರೆಯ ಮೇಲೆ ಪ್ರಭಾವ ಬೀರುತ್ತವೆ. ಉದಾಹರಣೆಗೆ ಇಲ್ಲಿಯ ದಲಿತ ಬಂಡುಕೋರ ಮುನಿಬೈರಪ್ಪನಿಗೆ ತನ್ನ ಹೋರಾಟ, ವರ್ಗಪ್ರಜ್ಞೆ, ವೈಚಾರಿಕೆಗಳಿಗಿಂತಲೂ ಆಳವಾದ ಪಾರಸಮಣಿಯ ವ್ಯಕ್ತಿತ್ವ ಮತ್ತು ಕಥನಗಳು ಎದುರಾಗಿ, ಆತನನ್ನೇ ವಿನೀತನಾಗಿಸುತ್ತವೆ. ಮತ್ತು ಆತ ಅದನ್ನು ಒಪ್ಪಿಕೊಳ್ಳುವಷ್ಟು ಪ್ರಾಂಜಲನಾಗಿದ್ದಾನೆ. ಕಥನ ಮುಂದುವರಿದಂತೆ ಚಿತ್ರಾಳ ಬದುಕಿನಲ್ಲಿ ಕಣ್ಣಾಸೆಲ್ವಿ ಮತ್ತು ಚಿನ್ನಪಳನಿ ಹಿಂದೆ ಸರಿಯುತ್ತಾರೆ (ಕಥನದಲ್ಲಿ). ಆದರೆ ಚಿತ್ರಾಳ ಪ್ರಜ್ಞೆ ಮತ್ತು ಬದುಕಿನಲ್ಲಿ ಅಂತರ್ಗತವಾಗಿ ಉಳಿದಿರುತ್ತಾರೆ.

ಕೃತಿಯಲ್ಲಿ ಓದುಗ ಸ್ನೇಹಿಯಾದ, ಸಮಕಾಲೀನವಾಗಿ ಪ್ರಸ್ತುತವಾದ ಒಂದು ಕತೆಯೂ ಇದೆ. ಕರ್ನಾಟಕದ ಗಡಿ ಪ್ರದೇಶಗಳಲ್ಲಿರುವ ದೊಡ್ಡ ಹಳ್ಳಿಯೊಂದರ ಆಂಗ್ಲ ಶಾಲೆಯ ಮಕ್ಕಳು ಶಾಲಾ ಉತ್ಸವಕ್ಕೋಸ್ಕರ ಪುರಾಣ-ಇತಿಹಾಸ ಪುರುಷರ ವೇಷವನ್ನು ಹಾಕಿಕೊಂಡು ಇಂಗ್ಲಿಷಿನಲ್ಲಿ ಮಾತನಾಡುತ್ತಾ ಸ್ಪರ್ಧೆಯಲ್ಲಿ ಭಾಗವಹಿಸಬೇಕಾಗುತ್ತದೆ. ಮಕ್ಕಳು ವೇಷ ಹಾಕಿಕೊಳ್ಳುವ ಯಾವ ಮೂಲಪಾತ್ರಗಳ ಅಂತಃಸತ್ವವೂ ಪೋಷಕರಿಗೆ ಬೇಕಿಲ್ಲ. ಆದರೂ ವೇಷ ಹಾಕುವ, ಬಹುಮಾನ ಗೆಲ್ಲುವ ತಹತಹ. ಮಕ್ಕಳಿಗೆ ಇದರಲ್ಲಿ ನಂಬಿಕೆಯೂ ಇಲ್ಲ, ಆಸಕ್ತಿಯೂ ಇಲ್ಲ. "ವೇಶಾರೋಪಣ" (ಪು. ೨೨೧) ಎಂದು ಇದನ್ನು ನಾಮಕರಣ ಮಾಡಿ ಹನೂರರು ಒಟ್ಟು ಪ್ರಸಂಗಗಳಲ್ಲೇ ಇರುವ ಅಸಾಂಗತ್ಯವನ್ನು ಸೂಚಿಸುತ್ತಾರೆ. ಮಗನಿಗೆ ಅಂಬೇಡ್ಕರ್ ವೇಶ ಹಾಕಿಸುವ ಮುನಿಬೈರಪ್ಪ, ತಂದೆ-ತಾಯಿಗಳ ಅಸಡ್ಡೆಯೇ ಕಾರಣವಾಗಿ ಸ್ಪರ್ಧೆಯಿಂದ ಒಂದು ರೀತಿ ಹೊರಗುಳಿದು, ಇನ್ನೊಂದು ರೀತಿಯಲ್ಲಿ ಒಟ್ಟು ಕಥನಕ್ಕೆ ಜಿಗಿತ ಕೊಡುವ ಸಿದ್ಧರಾಜು ಮಾತ್ರ ಬಹುಮಾನದ ಆಕಾಂಕ್ಷಿಗಳಲ್ಲ. "ವೇಶಾರೋಪಣ"ದ ಕಥನವನ್ನು ಹೇಳುತ್ತಾ ಒಂದಕ್ಕೊಂದು ಪೋಷಕವಾಗಿ, ಪ್ರೇರಕವಾಗಿ ಬೆಳೆಯುತ್ತಲೇ ಹೋಗುವ ಪ್ರಸಂಗಗಳ ಮೂಲಕ ತೀರಾ ಸಮಕಾಲೀನವಾದ ಬದುಕನ್ನು ಹನೂರರು ವಿನ್ಯಾಸಗೊಳಿಸುತ್ತಾರೆ. ಪ್ರಸಂಗಾವಧಾನದ ಬೀಸಿನಲ್ಲಿ ಕಥನ ದೇಶ-ಕಾಲ, ಬಣ್ಣ, ಹಾಡು, ಹೀಗೆ ಎಲ್ಲವನ್ನೂ ಒಳಗೊಳ್ಳಲಾಗುತ್ತದೆ.

ಕಥನದ ಕೊನೆಯಲ್ಲಿ ಬರುವ ಸಿದ್ಧುವಿನ ದೊಂಬರಾಟ(Magic)ವೇ "ವೇಷಾರೋಪಣ"ಕ್ಕಿಂತಲೂ ಸಹಜವಾಗಿಯೂ, ಜೀವಂತವಾಗಿಯೂ ಕಾಣುತ್ತದೆ. ಓದುಗರಿಗೂ ಇಷ್ಟವಾಗುತ್ತದೆ. ಕಥನವು ಧ್ವನಿಸಬೇಕಾದ್ದನ್ನೆಲ್ಲ ಪ್ರಸಂಗಗಳೇ ಧ್ವನಿಸುವುದರಿಂದ, ಸಿದ್ಧುವಿನ Magic ಒಂದು ರೀತಿಯ Wish Fulfilment (ಸುಪ್ತ ಸಂಕಲ್ಪದ ಈಡೇರಿಕೆ)ಯಂತೆಯೂ ಕಾಣುತ್ತದೆ. ಸ್ವಂತ ಕಥನಕ್ಕಾಗಲೀ, ಪ್ರಸಂಗಕ್ಕಾಗಲೀ ಸುಪ್ತ ಸಂಕಲ್ಪದ ಈಡೇರಿಕೆಯ ಹಂಬಲವಿರುವುದಿಲ್ಲ. ಕಥನವನ್ನು ಬರೆಯುವವರಿಗೆ, ಪುರಾಣಿಕರಿಗೆ, ಇದನ್ನು ಕೇಳಿಸಿಕೊಳ್ಳುವವರಿಗೆ ಇಂತಹ ಹಂಬಲವೊಂದು ಇರುತ್ತದೆ. ನಮ್ಮ ವ್ರತದ, ನೋಂಪಿಯ ಕತೆಗಳಲ್ಲಾಗುವಂತೆ. ಇದರಿಂದ ಓದುಗನಿಗೆ ಒಂದು ರೀತಿಯ 'ಬಿಡುಗಡೆ' ಸಿಗುವುದೂ ನಿಜ. ವಿಮರ್ಶೆ ಬರೆಯುವುದನ್ನೇ ವೃತ್ತಿಮಾಡಿಕೊಂಡಿರುವವರಿಗೂ ಒಂದು ಸೂಕ್ತವಾದ Ending ಮತ್ತು ವಿನ್ಯಾಸ ಸುಲಭವಾಗಿ ಗೋಚರವಾಗುತ್ತದೆ. ಆದರೆ ಕಥಾ ಪ್ರಸಂಗಗಳ ಮೊತ್ತವೇ ಸೂಚಿಸುವ ಧ್ವನಿ ಮತ್ತು ವಿಷಾದವು ನಮಗೇ ಗೊತ್ತಿಲ್ಲದೇ ನಾವು ಬಯಸುವ ಸುಪ್ತ ಸಂಕಲ್ಪದ ಈಡೇರಿಕೆಯಲ್ಲಿ ತೆಳುವಾಗಿಬಿಡಬಹುದೇ? 'ಕುಸುಮಬಾಲೆ'ಯನ್ನು ಓದುವಾಗಲೂ ಈ ಪ್ರಶ್ನೆ ಎದುರಾದರೂ, ಕೃತಿ ಸೂಚಿಸುವ ಸುಪ್ತ ಸಂಕಲ್ಪದ ಈಡೇರಿಕೆಯಲ್ಲಿ ಗಣ್ಯ ವಿಮರ್ಶಕರು ಸ್ವಯಂ ಇಚ್ಛೆಯಿಂದಲೇ ಭಾಗವಹಿಸಿದಂತೆ ಕಾಣುತ್ತದೆ.

**-ಕೆ.ಸತ್ಯನಾರಾಯಣ**

ಪು: **ಹರಪ್ಪ: ಡಿಎನ್‌ಎ ನುಡಿದ ಸತ್ಯ** ಲೇ:**ಲಕ್ಷ್ಮೀಪತಿ ಕೋಲಾರ** ಮತ್ತು **ಸುರೇಶ್ ಭಟ್ ಬಾಕ್ರಬೈಲು** ಪ್ರ: **ಓದು ಪ್ರಕಾಶ,** ಕುಗ್ವೆ ಪು:೭೬ ಬೆಲೆ: ರೂ. ೫೦/-

## ಆರ್ಯ ರಾಜಕಾರಣಕ್ಕೊಂದು ಸವಾಲು



**ಆ**ರ್ಯರು ಈ ದೇಶದ ಮೂಲ ನಿವಾಸಿಗಳೋ ಅಲ್ಲವೋ ಎಂಬುದು ಬಹಳ ದಿನಗಳಿಂದ ನಡೆದಿರುವ ಚರ್ಚೆ. ಆರ್ಯರು ಮಧ್ಯ ಏಷ್ಯಾದಿಂದ ವಲಸೆ ಬಂದವರು ಎಂಬುದು ಬ್ರಿಟಿಷ್ ವಸಾಹತುಶಾಹಿ ಒಡೆದಾಳಲು ಹುಟ್ಟು ಹಾಕಿದ ಸಂಗತಿ ಎಂಬ ವಾದವೂ ಕೇಳಿಬಂದಿದೆ. ಆದರೆ ಇತ್ತೀಚಿನ ಹರಪ್ಪ-ಮೊಹಂಜಾದಾರೋ ನಾಗರೀಕತೆಯ ನೆಲೆಗಳಲ್ಲಿನ ಇತ್ತೀಚಿನ ಉತ್ಖನನ ಮತ್ತು ಸಂಶೋಧನೆಗಳು ಮತ್ತು ಜಗತ್ತಿನ ಜನಾಂಗೀಯ ವಂಶವಾಹಿನಿಗಳ ನಕ್ಷೆಗಳನ್ನು ಕುರಿತ ಅಧ್ಯಯನಗಳು ಭರತಖಂಡದ ಉತ್ತರ ಭಾಗದಲ್ಲಿ ನೆಲೆಸಿದ ಆರ್ಯರು ಈಗಿನ ರಷ್ಯಾದ ದಕ್ಷಿಣಕ್ಕಿರುವ ಕಾಕಸಸ್ ಪರ್ವತಾವಳಿಯ ತಪ್ಪಲಿನಿಂದ ಸಾವಿರಾರು ವರ್ಷಗಳ ಹಿಂದೆ ವಲಸೆ ಹೊರಟ ಕಕೇಶಿಯನ್ನರ ಒಂದು ಸಮೂಹ ಎಂದು ಖಚಿತಪಡಿಸಿದೆ. ಇದನ್ನು ಈ ಪುಸ್ತಕ ಹಲವು ಸಾಕ್ಷ್ಯ ಮತ್ತು ಆಕರಗಳ ಆಧಾರದ ಮೇಲೆ-ಉದಾ: ಕುದುರೆಯ ಮೂಲಸ್ಥಾನ, ಭಾಷಿಕ ಸಾಮೀಪ್ಯ, ವಲಸೆ ಹಾದಿಯಲ್ಲಿನ ವಿದ್ಯಮಾನಗಳು, ವೇದಗಳಲ್ಲಿನ ವರ್ಣನೆಗಳ ಹಿನ್ನೆಲೆ(ಇವುಗಳಲ್ಲಿ ಕೆಲವು ತಪ್ಪು ಗ್ರಹಿಕೆಯವೂ ಆದಂತಿವೆ) ಇತ್ಯಾದಿ-ಹೇಳುವ ಪ್ರಯತ್ನ ಮಾಡುತ್ತದೆ. ಜೊತೆಗೆ ಹರಪ್ಪ ನಾಗರೀಕತೆಯ ಜನರ ಮೂಲವು ದ್ರಾವಿಡಪೂರ್ವ ದಕ್ಷಿಣ ಭಾರತೀಯ ಬುಡಕಟ್ಟುಗಳಲ್ಲಿದೆ ಎಂದು ಸೂಚಿಸುವ ಮೂಲಕ ದ್ರಾವಿಡರೂ ಇಲ್ಲಿಗೆ ವಲಸೆ ಬಂದ ಜನಾಂಗ ಎಂದೂ ಅವರು ವಿವರಿಸುತ್ತಾರೆ. ಆದರೆ ಅಷ್ಟೇ ಮುಖ್ಯವಾಗಿ, ಆರ್ಯರ ಮೂಲದ ಬಗ್ಗೆ ಇಷ್ಟೆಲ್ಲ ನಿರ್ಣಾಯಕವೆನ್ನಿಸುವ ಸಂಶೋಧನೆಗಳು ಮಂಡನೆಯಾದರೂ, ಆರ್ಯ ಸಂಸ್ಕೃತಿಯ ಮುಖವಾಣಿಯಂತಿರುವ ಆರೆಸ್ಸೆಸ್ ಮತ್ತು ಸಂಘಪರಿವಾರದ ಇತರ ಸಂಘಟನೆಗಳು ಬುಡವಿಲ್ಲದ ಸಂಶೋಧನೆಗಳನ್ನು ಉಲ್ಲೇಖಿಸುತ್ತಾ ಆರ್ಯರು ಈ ದೇಶದ ಮೂಲನಿವಾಸಿಗಳೇ ಆಗಿದ್ದು, ಅವರು ಇಲ್ಲಿಂದ ಜಗತ್ತಿನ ಇತರೆಡೆಗಳಿಗೆ ವಲಸೆ ಹೋಗಿದ್ದಾರಷ್ಟೆ ಎಂದು ಪ್ರಚಾರ ಕೈಗೊಂಡಿರುವ ಬಗ್ಗೆ ತನ್ನ ಆಕ್ರೋಶವನ್ನು ವ್ಯಕ್ತಪಡಿಸುತ್ತದೆ. ಈ ಆಕ್ರೋಶಕ್ಕೆ ಕಾರಣ, ಭಾರತದಲ್ಲಿ ಈ ಪ್ರಚಾರ ಕಾರ್ಯಕ್ರಮ ಭಾರತದ ನಿಜವಾದ ಮೂಲನಿವಾಸಿಗಳ ಧರ್ಮ-ಸಂಸ್ಕೃತಿಗಳ ಸತ್ವವನ್ನು ಒತ್ತಾಯಪೂರ್ವಕ ಸಂಕರಗಳ ಮೂಲಕ ದುರ್ಬಲಗೊಳಿಸಿ ಹಿನ್ನೆಲೆಗೆ ಸರಿಸಿದ ಪ್ರಾಚೀನ ಆರ್ಯ ಸಂಸ್ಕೃತಿ ಆಕ್ರಮಣದ ಮುಂದುವರಿದಿರುವ ಪ್ರಯತ್ನವೇ ಆಗಿದೆ ಎಂಬುದು. ಅಲ್ಲದೆ ಸಂಘ ಪರಿವಾರದ ಈ ಪ್ರತಿಪಾದನೆಯು ಯುದ್ಧೋನ್ಮಾದಿ ಕಕೇಶಿಯನ್ನರು ತಮ್ಮ ಜನಾಂಗವಾದಿ ಸರ್ವಶ್ರೇಷ್ಠತೆಯ ಪುನರ್‌ಸ್ಥಾಪನೆಗಾಗಿ ಕೆಕೆಕೆ ಎಂಬ ಸಂಘಟನೆಯೊಂದನ್ನು ಚಾಲನೆಯಲ್ಲಿಟ್ಟಿದ್ದಾರೆ ಎಂಬ ಆತಂಕವೂ ಇದರೊಂದಿಗೆ ಸೇರಿಕೊಂಡಿದೆ. ಈ ಸಂಬಂಧವಾಗಿ ಇವರು ನೀಡುವ ಇನ್ನೊಂದು ಮಾಹಿತಿ ಎಂದರೆ, ಉತ್ತರಭಾರತದ ಮೇಲ್ಜಾತಿಗಳ ಹಲವು ಸಮೂಹಗಳ ವಂಶವಾಹಿಗೂ ಕಕೇಶಿಯನ್ ಜನಾಂಗದ ವಂಶವಾಹಿಗೂ ತಾಳೆಯಾಗುತ್ತದೆ ಎಂಬುದು.

ಇದನ್ನೆಲ್ಲ ಒಪ್ಪಿಕೊಂಡರೂ ಒಂದು ಅಹಿತಕರ ಪ್ರಶ್ನೆ ಉಳಿದೇ ಉಳಿಯುತ್ತದೆ: ಈ ಲೇಖಕರೇ ಒಪ್ಪಿಕೊಂಡಿರುವಂತೆ ಸಾವಿರಾರು ವರ್ಷಗಳ ಮೇಲಾಟ, ಸಂಕರ ಮತ್ತು ಅನುಸಂಧಾನಗಳ ನಂತರ ಯಾವುದೇ ಜನಾಂಗ ಪರಿಶುದ್ಧವಾಗಿ ಉಳಿಯದೆ ನಾವೆಲ್ಲರೂ ಮಿಶ್ರತಳಿಯ, ಮಿಶ್ರ ಸಂಸ್ಕೃತಿಯ ಜನವೇ ಆಗಿರುವಾಗ, ಗುರುತಿಸಲು ಖಚಿತ ಚಹರೆಗಳ ಆಧಾರಗಳೇ ಇಲ್ಲದ ಒಂದು ಸಮೂಹವನ್ನು ಕಕೇಶೀನ್ ಮೂಲದವರೆಂದು ಗುರುತಿಸಿ ಚರಿತ್ರೆಯ ಎಲ್ಲ 'ಕೆಟ್ಟದನ'ಗಳನ್ನೂ ಸಾರಾ ಸಗಟಾಗಿ ಅವರ ಮೇಲೆ ಹೊರಿಸಿ, ಸಂಘ ಪರಿವಾರದ ಸಂಕುಚಿತ ರಾಜಕಾರಣಕ್ಕೆ ಪ್ರತಿಯಾಗಿ ನೀವೆಂತಹ ರಾಜಕಾರಣ ಮಾಡಲು ಹೊರಟಿದ್ದೀರಿ? ನಿಜ, ಇವರು ವಾದಿಸುವ ಹಾಗೆ ಈ ಎಲ್ಲ ಆರ್ಯ ರಾಜಕಾರಣದ ಕೇಂದ್ರದಲ್ಲಿರುವ 'ಹಿಂದೂ' ಎಂಬ ಶಬ್ದ ಗೊಂದಕಾರಿಯಾಗಿದ್ದು ಅದು ಇಂದಿನ ಕೋಮುವಾದಿ ಘಾತುಕ ರಾಜಕಾರಣದ ಸಾಧನವಾಗಿದೆ. ಹಾಗಾಗಿ ರಿಪೇರಿ ಆಗಬೇಕಾದದ್ದು ಈ ನೆಲೆಯಲ್ಲೇ ಹೊರತು ಜನಾಂಗೀಯ ನೆಲೆಯ ವಿಶ್ಲೇಷಣೆ ಮತ್ತು ಆಕ್ರೋಶಗಳ ಆಧಾರದ ಮೇಲಲ್ಲ ಅಲ್ಲವೆ?

**-ಡಿಎಸ್ನೆಸ್**

ಪು: **ಅಕ್ಕರಮನೆ ೭೨ ಕೋಣೆಗಳು ಲೇ:** ಡಾ. ಬಿ.ಎ. ವಿವೇಕ ರೈ **ಪ್ರ:** ಬಹುರೂಪಿ, ಬೆಂಗಳೂರು ಪು : ೧೮೮ ಬೆಲೆ : ರೂ. ೨೦೦/-

## ಸಾಧಕ ವ್ಯಕ್ತಿತ್ವದತ್ತ ಒಂದು ಇಣುಕು ನೋಟ



**ಕ**ನ್ನಡ ಸ್ನಾತಕೋತ್ತರ ಶಿಕ್ಷಣ ಲೋಕದಲ್ಲಿ ಬೋಧಕರಾಗಿ, ಎರಡು ವಿಶ್ವವಿದ್ಯಾಲಯಗಳ ಕುಲಪತಿಗಳಾಗಿ, ಹಲವು ವಿದೇಶಿ ವಿಶ್ವವಿದ್ಯಾಲಯಗಳ ಸಂದರ್ಶಕ ಪ್ರಾಧ್ಯಾಪಕರಾಗಿ ಜೊತೆಗೆ ತುಳು ಭಾಷೆಯ ಸಶಕ್ತ ವಿದ್ವಾಂಸರೂ ಆಗಿ ಕನ್ನಡಿಗರಿಗೆ ಚಿರಪರಿಚಿತರಾದ ಡಾ. ಬಿ.ಎ. ವಿವೇಕ ರೈ. ಅವರಿಗೆ ೭೨ ವರ್ಷಗಳಾದಾಗ ಆ ಸಂದರ್ಭದ ನೆನಪಿನಲ್ಲಿ ಪ್ರಕಟವಾಗಿರುವ ಈ ಪುಸ್ತಕ ನಾಲ್ಕು ದಶಕಗಳ ಅವರ ಅಕ್ಕರ ಸೇವೆಯ ವಿವಿಧ ಮುಖಗಳನ್ನು ಪರಿಚಯಿಸುವ ೪೦ ಬರಹಗಳನ್ನು ಒಳಗೊಂಡಿದೆ. ಈ ಪುಸ್ತಕವನ್ನು ಸಂಯೋಜಿಸಿರುವ ಜಿ.ಎನ್. ಮೋಹನ್ ಇವನ್ನು ಹತ್ತು ವಿಭಾಗಗಳಲ್ಲಿ ವಿಂಗಡಿಸಿದ್ದಾರೆ. ಅಂಕಣ ಬರಹ, ಸಾಹಿತ್ಯ ವಿಮರ್ಶೆ, ಕವಿತೆ, ವ್ಯಕ್ತಿಚಿತ್ರಗಳು, ಭಾಷಾವಿವೇಚನೆ, ಪ್ರವಾಸಾನುಭವಗಳು ಹೀಗೆ ರೈ ಕೈಯಾಡಿಸಿರುವ ಎಲ್ಲ ಸಾಹಿತ್ಯ ಪ್ರಕಾರಗಳ ಪ್ರಾತಿನಿಧಿಕ ಬರಹಗಳು ಇಲ್ಲಿದ್ದು ಅವರ ಪ್ರತಿಭಾ ವಿಶೇಷಗಳನ್ನು ಪ್ರತಿಬಿಂಬಿಸುವ ಪ್ರಯತ್ನ ಮಾಡುತ್ತವೆ.

ದ.ಕ. ಜಿಲ್ಲೆಯ ಪುತ್ತೂರು ಬಳಿಯ ಅಗ್ರಾಳ ಎಂಬ ಕುಗ್ರಾಮವೊಂದರ ಬಡ; ಆದರೆ ಶಿವರಾಮ ಕಾರಂತರಿಗೆ ಆಪ್ತವಾದ ಸುಸಂಸ್ಕೃತ ಕುಟುಂಬವೊಂದರಲ್ಲಿ ಹುಟ್ಟಿದ ವಿವೇಕ ರೈ ಎಂಬ ಹುಡುಗ (ಇವರಿಗೆ ವಿವೇಕ ಎಂದು ಹೆಸರು ಸೂಚಿಸಿದ್ದು ಕಾರಂತರೇ ಅಂತೆ.) ನಿಸರ್ಗದ ಗಾಳಿ, ಮಣ್ಣು, ಹಸಿರು, ನೀರು ಇವೇ ಅಕ್ಷರಗಳಾಗಿ ಮೂಡಿ ಬದುಕಿನ ಮೆಟ್ಟಿಲುಗಳಾಗಿವೆ ಎಂದು ಭಾವಿಸಿ ಬರೆದು ಎತ್ತರಕ್ಕೆ ಬೆಳೆದ ಪರಿಯನ್ನೂ ಈ ಪುಸ್ತಕ ನಮ್ಮ ಮುಂದಿಡುತ್ತದೆ. ಶಿವರಾಮ ಕಾರಂತರ ವ್ಯಕ್ತಿತ್ವದನೆರಳಿನಲ್ಲಿ ಅವರ ವ್ಯಕ್ತಿತ್ವದ ಕಣ್ಣಾಸರೆಯಲ್ಲಿ, ಅವರ ಬಹುಮುಖ ಪ್ರತಿಭೆಯ ದಟ್ಟ ಪ್ರಭಾವದಲ್ಲಿ ಬೆಳೆದ ರೈಗಳು ತಮ್ಮ ಬಾಲ್ಯದಲ್ಲಿ ಕಾರಂತರ-'ಬದುಕೆಂಬ ಪ್ರಯೋಗಶಾಲೆಯ ಆ ಕಠಿಣ ಪರೀಕ್ಷೆ'ಯ-ನೆನಪುಗಳನ್ನು ಇಲ್ಲಿ ವಿವರವಾಗಿ ದಾಖಲಿಸಿದ್ದು ಅದನ್ನು ಓದುವುದೇ ಒಂದು ಸಾರ್ಥಕ ಅನುಭವೆನ್ನಿಸಿಬಿಡುತ್ತದೆ, ಇದರ ಜೊತೆಗೇ ರೈ ಅವರು ಎಸ್.ವಿ. ಪರಮೇಶ್ವರ ಭಟ್ಟ, ಹಾ.ಮಾ.ನಾ., ಎಂ.ಎಂ, ಕಲ್ಬುರ್ಗಿ ಅವರ ಒಡನಾಟದ ಅನುಭವ ಕಥನಗಳೂ ಇಲ್ಲಿ ಸೇರಿವೆ. ಇವುಗಳ ಜೊತೆಗೇ ಹೆಸರಿಸಬಹುದಾದ ಇತರ ಸಾಹಿತ್ಯಿಕ ಬರಹಗಳೆಂದರೆ ಗಿರಿಯವರ 'ಗತಿ ಸ್ಥಿತಿ' ಕಾದಂಬರಿ ಮತ್ತು ಸಿ.ಎನ್. ರಾಮಚಂದ್ರನ್ ಅವರ ವಿಮರ್ಶೆಯನ್ನು ಕುರಿತ ಲೇಖನಗಳು.

ಇನ್ನು ತುಳುವಿಗೆ ಸಂಬಂಧಿಸಿದಂತೆ ರೈ ಅವರು ಬರೆದ ಕವಿತೆಗಳು, ಚುಟುಕುಗಳು, ಸಂಗ್ರಹಿಸಿದ ಒಗಟು-ಗಾದೆಗಳು ಮತ್ತು ಕೋಟಿ ಚೆನ್ನಯ ಚಿತ್ರಕ್ಕೆ ಬರೆದ ಗೀತೆಗಳಿವೆ.

ಪ್ರವಾಸಕ್ಕೆ ಸಂಬಂಧಿಸಿದಂತೆ ಇರುವ ಇಲ್ಲಿನ ಲೇಖನಗಳಲ್ಲಿ ಭಾರತದ ಮಣಿಪುರದಿಂದ ಹಿಡಿದು ಜರ್ಮನಿ, ಸ್ವಿಟ್ಜರ್‌ಲೆಂಡ್, ಫಿನ್‌ಲೆಂಡ್‌ಗಳ ಅಧ್ಯಯನ-ಸಂಶೋಧನೆ-ಬೋಧನೆಯ ಉದ್ದೇಶಗಳ ಪ್ರವಾಸ ಸಂದರ್ಭದ ಅನೇಕ-ರೈ ಅವರ ಸೂಕ್ಷ್ಮಗ್ರಾಹಿ ಗುಣವನ್ನು ನಿರೂಪಿಸುವ-ಸ್ವಾರಸ್ಯಕರ ಮತ್ತು ಜ್ಞಾನದಾಯಕ ಮಾಹಿತಿ ಕಿಕ್ಕಿರಿದಿದೆ. ಜೊತೆಗೇ ಇದಕ್ಕೆ ಪೂರಕವೆಂಬಂತೆ ಅಲ್ಲಿ ಅವರು ಅನುವಾದಿಸಿದ ಕತೆಗಳೂ ಇವೆ. 'ಮದರ್ಸ್ ಡೇ' ಸಂಸರ್ಭದಲ್ಲಿ ಅಲ್ಲಿ ಬರೆದ ತಾಯಿಯ ಆರ್ದ್ರ ನೆನಪಿನ ಲೇಖನವೂ ಇಲ್ಲಿ ಸೇರಿದೆ.

ಒಟ್ಟಿನಲ್ಲಿ ಈ ಪುಸ್ತಕ ವಿವೇಕ ರೈ ಅವರ ವ್ಯಕ್ತಿತ್ವ ವಿಶೇಷಗಳ ಒಂದು ಇಣುಕುನೋಟವನ್ನು ನೀಡುವಲ್ಲಿ ಸಫಲವಾಗಿದೆಯಾದರೂ, ಇದರ ಸಂಯೋಜನೆ ಇನ್ನಷ್ಟು ಸುಸಂಗತ ಮತ್ತು ಪೂರ್ಣವಾಗಿರಬಹುದಿತ್ತು ಎನ್ನಿಸದಿರದು. ಮುಖ್ಯವಾಗಿ ರೈ ಅವರ ಬೋಧನೆ ಮತ್ತು ಆಡಳಿತ ಅನುಭವಗಳನ್ನು ನಿರೂಪಿಸುವ ಬರಹಗಳ, ಸಾಮದರ್ಭಿಕ ಭಾವಚಿತ್ರಗಳ, ಲೇಖನಗಳ ಕಾಲ, ಸಂದರ್ಭ ಮತ್ತು ಆಕರ ಸೂಚಿಗಳ ಮತ್ತು ಲೇಖನಗಳ ವಿಂಗಡಣೆಯ ಹಿಂದಿನ ಒಂದು ಸುಸಂಗತ ಸೂತ್ರದ ಕೊರತೆಗಳು ಎದ್ದುಕಾಣುತ್ತವೆ.

**-ಪ್ರೊ. ಎಂ. ಚಂದ್ರಶೇಖರಯ್ಯ**

**‘ಹೊಸ ಮನುಷ್ಯ’ಕ್ಕೆ**
**ಹುಟ್ಟು ಹಬ್ಬದ ಶುಭ ಹಾರೈಕೆಗಳು**



**ಡಾ, ಗೀತಾ ವಸಂತ**
ಮತ್ತು **ಕುಟುಂಬ**
**ತುಮಕೂರು**

**‘ಹೊಸ ಮನುಷ್ಯ’ಕ್ಕೆ**
**ಹುಟ್ಟು ಹಬ್ಬದ ಶುಭ ಹಾರೈಕೆಗಳು**



**-ತಾರಿಣಿ ಶುಭದಾಯಿನಿ**
**ಮತ್ತು ಕುಟುಂಬ**
**ಚಿತ್ರದುರ್ಗ**

**ಎಂಟನೇ ವರ್ಷಕ್ಕೆ ಕಾಲಿಡುತ್ತಿರುವ 'ಹೊಸ ಮನುಷ್ಯ'ಕ್ಕೆ**
**ಹುಟ್ಟು ಹಬ್ಬದ ಹಾರ್ದಿಕ ಶುಭಾಶಯಗಳು**



**–ಎಸ್. ಉಷಾಲತಾ**
**ಮಂಗಳೂರು**

## ತಿಂಗಳ ಸಾಲುಗಳು...



ಸದ್ದುಗದ್ದಲವಿರದ ಸಾಧನೆ ಇಲ್ಲಿ ಗದ್ದುಗೆಯೇರಿದೆ
ಕಾಯಕವೆ ಕೈಲಾಸವೆನ್ನುವ ಮಾತು ಕೃತಿಯೊಳು ಮೂಡಿದೆ
ಕಾವಿಯುಡುಗೆಯನುಟ್ಟು ನಭವೇ ಕಿರಣ ಹಸ್ತವ ಚಾಚಿದೆ
ಎಲ್ಲ ನನ್ನವರೆನುವ ಭಾವದ ಕರುಣೆಯೇ ಕಣ್ತೆರೆದಿದೆ.

**-ಜಿ.ಎಸ್. ಶಿವರುದ್ರಪ್ಪ**

*ಶುಭಾಶಯಗಳೊಂದಿಗೆ,*

**ಆರ್. ಉಮೇಶ್ ಅಂಡ್ ಅಸೋಸಿಯೇಟ್ಸ್**
**ಲೆಕ್ಕ ಪರಿಶೋಧಕರು, ಮೈಸೂರು**
ಮೊಬೈಲ್ : ೯೪೪೮೦೮೪೭೯೩

HOSA MANUSHYA, a kannada Socialist monthly solely owned, edited, published and printed by D.S. Nagabhushana, at HIG-5,Kallahally Extn.,Vinoba Nagara, SHIVAMOGGA-577204. Printed at Replica Offset Printers, No.14/1, 1st Main, Industrial Town, Rajaji Nagara, Bengaluru-560 044 Ph: 08023357963

**Regd. News Paper** RNI No. KARKAN/2012/47568
Rgd No. KA/SK/SMG-1209/2019-21

ಇವರಿಗೆ \ To

If undelivered, please return to D.S. Nagabhushana, Editor, 'Hosa Manushya', 'HIG-5, 'Nudi', Kallahalli Extension, Vinoba Nagara, Shivamogga -577204( Karnataka)